ಪುಸ್ತಕ ಪ್ರಪಂಚ

ಸಂಪುಟ ೩೩ ೧೯೮೩ ಏಪ್ರಿಲ್ ಸಂಚಿಕೆ ೯



ವಿಷಯ ಸೂಚಿ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೬ ಏಪ್ರಿಲ್ ೧೯೮೨ ಸಂಚಿಕೆ ೪

ಆಯಾಸವೇ ಮರಣ ; ಅನಾಯಾಸವೇ ಜೀವನ

ಏನೋ ಕೆಟ್ಟಿದೆ, ಅಕ್ರಮಗೊಂಡಿದೆ ಎಂಬುದರ ಮುನ್ಸೂಚನೆ ಮಾನಸಿಕ ದಣಿವು. ಇದನ್ನು ಗುಣಪಡಿಸಬಹುದು-ಆದರೆ ಅದು ವಿಶ್ರಾಂತಿಯಿಂದಲ್ಲ.

ವಿಫಲತೆಯೇ ಪ್ರಾಯಶಃ ಮಾನವನ ದಣಿವುಗಳಿಗೆಲ್ಲ ಕಾರಣ. ಅಪಯಶಸ್ಸು ಮನುಷ್ಯನನ್ನು ನಿಸ್ಸತ್ವಗೊಳಿಸುವಷ್ಟು ಮತ್ತಾವುದೂ ಗೊಳಿಸುವುದಿಲ್ಲ. ಕಾರ್ಯದಲ್ಲುಂಟಾಗುವ ಸ್ಥಗಿತತೆ, ಮುಂದುವರಿಯಲಾಗದ ಕ್ಲಿಷ್ಟತೆ, ಮಾನವನ ಓಜಸ್ಸನ್ನು ಹೀರಿ ಅವನನ್ನು ನಿರ್ವೀರ್ಯನನ್ನಾಗಿಸುತ್ತದೆ. ಇದು ಒಂದು ವಿಷವೃತ್ತ. ವಿಫಲತೆ ದಣಿವನ್ನು ಈಯುತ್ತದೆ (ದಣಿವು ವಿಫಲತೆಯ ಕೂಸು). ದಣಿವು ದುಗುಡವನ್ನು ಈಯುತ್ತದೆ. ಕಾರಣ ಕೆಲಸಕ್ಕೆ ಧುಮುಕುವುದು ದುಃಸ್ಸಾಧ್ಯವಾಗುತ್ತದೆ. ಇದರಿಂದಾಗಿ ವಿಫಲತೆಗಳ ಸರಮಾಲೆಯೇ ತಲೆದೋರುತ್ತದೆ. ವಿಫಲತೆಗಳು ಸಂಘಟಿಸಲ್ಪಡುತ್ತವೆ.

ನಾವು ಎರಡು ರೀತಿಯ ಬಳಲಿಕೆಗಳನ್ನು ಅನುಭವಿಸುತ್ತೇವೆ. ಒಂದು : ಪ್ರಾರಂಭದ ಜಡ. ಎರಡು : ಕ್ರಿಯಾ ಜಡ (ನಿರ್ವಹಣಾ ದಣಿವು) . ಯಾವುದೋ ಒತ್ತಾಯದ ಕಾರಣವಾಗಿ ಕೆಲಸ ಪ್ರಾರಂಭಿಸಲು ನಾವು ಹಿಂದೆಗೆಯುತ್ತೇವೆ. ಈ ಹಿಂತೆಗೆತಕ್ಕೆ ಕಾರಣ ಪ್ರಾರಂಭದ ಜಡ. ಕೆಲಸ ಕಷ್ಟದಾಯಕವಾದದ್ದು-ಜುಗುಪ್ಸೆ ಹುಟ್ಟಿಸುವಂಥದ್ದು ಎಂಬ ಭಾವನೆಯಿಂದಲೇ ನಾವು ಕೆಲಸದಿಂದ

೧೯೮೦ ರ ಫೆಬ್ರವರಿ ತಿಂಗಳ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ ಮೋರ್ಟಿಮರ್ ಅಡ್ಲರವರ "ಸಕ್ಸೆಸ್ ಮೀನ್ಸ್ ನೆವರ್ ಫೀಲಿಂಗ್ ಟೈಯರ್ಡ್" ಲೇಖನದ ಅನುವಾದ.

ಜಾರಲು ಪ್ರಯತ್ನಿಸುತ್ತೇವೆ. ಹೀಗೆ ಮುಂದೆ ಹಾಕಿದಷ್ಟೂ ಪ್ರಾರಂಭಿಸುವ ಜಡ ಹೆಚ್ಚುತ್ತಾ ಹೋಗುತ್ತದೆ.

ದೈಹಿಕವಾಗಿ ನಮಗೇನೂ ಆಗಿಲ್ಲದಿದ್ದರೂ ನಮ್ಮ ಮಾಂಸಖಂಡಗಳು ಸದೃಢವಾಗಿದ್ದರೂ ನಾವು ಪ್ರಾರಂಭದ ಜಡವನ್ನು ಅನುಭವಿಸುತ್ತೇವೆ. ಇದರ ನಿವಾರಣೆ ಕಷ್ಟಸಾಧ್ಯವಾದರೂ ಅಸಾಧ್ಯವಲ್ಲ. ನಿವಾರಣೆಗಿರುವ ಸ್ವತಸ್ಸಿದ್ಧ ಮಾರ್ಗ–ದೃಢ ಸಂಕಲ್ಪ. ನಾವು ಕೆಲಸವೊಂದನ್ನು ಮುಂದೂತ್ತಿದ್ದೇವೆಂದು ಭಾಸವಾದ ತಕ್ಷಣ "ಇಲ್ಲ, ಇದು ಸಲ್ಲ" ಎಂದು ದೃಢ ಪ್ರತಿಜ್ಞೆ ಮಾಡಬೇಕು. ನಮ್ಮ ಕೆಲಸಗಳಲ್ಲಿ ಅತ್ಯಂತ ಆಕ್ಷೇಪಣೀಯ ಕೆಲಸಕ್ಕೆ ನಮ್ಮನ್ನು ನಾವು ಮೊದಲು ತೊಡಗಿಸಬೇಕು. ಇದು ಅಪೇಕ್ಷಣೀಯ ಪ್ರಾರಂಭದ ಜಡವನ್ನು ಹತ್ತಿಕ್ಕಲು ಸದಾ ಅತ್ಯಂತ ಕಷ್ಟಕರ ಕೆಲಸವನ್ನು ಮೊದಲು ನಿಭಾಯಿಸಬೇಕು. ಪ್ರಾರಂಭದ ಜಡ ಮನಸ್ಸಿನ ಪ್ರಕ್ರಿಯೆ. ಇದನ್ನು ಜಯಿಸುವುದು ಬುದ್ಧಿಯ ಸಿದ್ಧಿ.

ಕೆಲ ವರ್ಷಗಳ ಹಿಂದೆ ಪಾಶ್ಚಾತ್ಯ ಪ್ರಪಂಚದ ಪ್ರಖ್ಯಾತ ಪುಸ್ತಕಗಳನ್ನು ಸಂಪಾದಿಸುವ ದೊಡ್ಡ ಹೊಣೆ ನನ್ನದೂ ಆಗಿತ್ತು. ಒಂದೊಂದು ಪ್ರಸಿದ್ಧ ಕಲ್ಪನೆಗಳಿಂದ ಒಂದೊಂದರಂತೆ ಆಯ್ದ ೧೦೨ ಪ್ರಬಂಧಗಳನ್ನು ನಾನು ಬರೆಯಬೇಕಾಗಿತ್ತು. ವಾರದ ಎಲ್ಲ ಏಳು ದಿನಗಳೂ ಸೇರಿದಂತೆ ದುಡಿಯುತ್ತಿದ್ದರೂ ನನ್ನ ಇತರ ಕೆಲಸಗಳೊಂದಿಗೆ ಈ ಕೆಲಸವನ್ನು ಮಾಡಿ ಮುಗಿಸಲು ಎರಡೂವರೆ ವರ್ಷಗಳೇ ಬೇಕಾದವು. ಸುಲಭವಾಗಿ ನಿರೂಪಿಸಲು ಸಾಧ್ಯವಾಗುವ ಪ್ರಬಂಧಗಳನ್ನೇ ಮೊದಲು ಎತ್ತಿಕೊಳ್ಳುತ್ತಿದ್ದರೆ, ಖಂಡಿತವಾಗಿಯೂ ನಾನು ಈ ನನ್ನ ಕೆಲಸವನ್ನು ಪೂರ್ಣ ಮಾಡುತ್ತಿರಲಿಲ್ಲ. ನನ್ನ ನಿಯಮದ ಪ್ರಕಾರವೇ ನಾನು ಪ್ರಬಂಧ ಬರೆಯ ಹೊರಟೆ. ಅಕ್ಷರ ಬಳ್ಳಿಗೆ ಅನುಗುಣವಾಗಿ 'ಕೋನ'ದಿಂದ 'ಪ್ರಪಂಚ'ದವರೆಗೆ ಯಾವುದೇ ವಿಷಯವನ್ನೂ ಕಷ್ಟಸಾಧ್ಯವೆಂದು ಬಿಡದೆ ಅನುಕ್ರಮವಾಗಿ ಬರೆದೆ ಹಾಗೂ ನನ್ನ ದಿನದ ಕೆಲಸವನ್ನು ಅತಿ ಕಷ್ಟಕರವಾದ ಈ ಪ್ರಬಂಧ ಬಂಧ ಕ್ರಿಯೆಯಿಂದ ಪ್ರಾರಂಭಿಸುತ್ತಿದ್ದೆ. ಕಠಿಣ ಕೆಲಸವನ್ನು ಮೊದಲು ಮಾಡಬೇಕೆಂಬ ನಿಯಮ ನನ್ನ ಅನುಭವದಿಂದ ಸಾಧಿತವಾಗಿದೆ.

ಕ್ರಿಯಾಜಡವನ್ನು ನಿರ್ವಹಿಸುವುದು ಹೆಚ್ಚು ಕಷ್ಟ. ಇಲ್ಲಿ ಕೆಲಸ ಪ್ರಾರಂಭಿಸಲು ನಾವು ವಿಮುಖರಾಗುವುದಿಲ್ಲ. ಆದರೆ ಹಿಡಿದ ಕಾರ್ಯವನ್ನು ಸರಿಯಾಗಿ ಮಾಡಿ ಮುಗಿಸಲು ಶಕ್ತರಾಗುವುದಿಲ್ಲ. ಕೆಲಸದ ಕಷ್ಟಗಳು ದುರ್ಲಂಘ್ಯವೆಂದು ಭಾಸವಾಗುತ್ತದೆ ಮತ್ತು ನಾವೆಷ್ಟು ಕಷ್ಟಪಟ್ಟರೂ ಮತ್ತೆ ಮತ್ತೆ ಸೋಲ ಬರುತ್ತದೆ. ಈ ಏರಿಬರುವ ಸೋಲದ ಹೊರೆ ನಮ್ಮ ಧೃತಿಗೆಡಿಸುತ್ತದೆ. ಮಾನ

ಸಿಕ ದಣಿವು ತಲೆದೋರುತ್ತದೆ. ಇಂಥಾ ಸಂದರ್ಭಗಳಲ್ಲಿ ಅಜಾಗ್ರತ ಸ್ಥಿತಿ ಬರುವವರೆಗೂ ನಾನು ಕಷ್ಟಪಡುತ್ತೇನೆ.

ಹುರಿದುಂಬಿಸುವ ಯಶಸ್ಸು : "ಬ್ರಿಟಾನಿಕಾ ವಿಶ್ವಕೋಶದ" ೧೫ನೇ ಮುದ್ರಣಕ್ಕೆ ಅಕ್ಷರಮಾಲೆಗನುಗುಣವಾಗಿ ಪರಿವಿಡಿ ಬರೆಯಬೇಕಾಗಿತ್ತು. ಇಂಥಾ ಕೆಲಸವನ್ನು ನಾನು ಮಾಡುತ್ತಿರುವುದಿದು ಮೊದಲು. ಆದ ಕಾರಣ ಸಮಸ್ಯೆ ದಿನದಿಂದ ದಿನಕ್ಕೆ ದುರ್ಭರವಾಗತೊಡಗಿತು. ಮಾನಸಿಕ ದಣಿವು ಹೆಚ್ಚತೊಡಗಿತು.

ಒಂದು ದಿನ ಸಮಸ್ಯೆಯ ಗೋಜಲನ್ನು ಬಿಡಿಸಲಾಗದೆ ನನ್ನ ಮನಸ್ಸು ಹದಗೆಟ್ಟಿತು. ತಲೆ ಕೆಳಗಿಟ್ಟು ಚಿಂತಿಸತೊಡಗಿದೆ. ನಾನು ಅಪರಿಹಾರ್ಯವೆಂದು ನಂಬಿದ ಸಮಸ್ಯೆ ನಿಜವಾಗಿಯೂ ಅಪರಿಹಾರ್ಯವೆಂದು ಸಾಧಿಸಹೊರಟಿತು ನನ್ನ ಮನಸ್ಸು. ಹಾಗೆ ಸ್ವಲ್ಪ ವಿರಾಮಕ್ಕಾಗಿ ಆರಾಮ ಕುರ್ಚಿಯ ಮೊರೆ ಹೋದೆ.

ಸುಮಾರು ಒಂದು ಗಂಟೆಯ ನಂತರ ಎಚ್ಚರಗೊಂಡೆ. ಸಮಸ್ಯೆಗೆ ಉತ್ತರ ನನ್ನ ಮನಃಪಟಲದಲ್ಲಿ ಚಿತ್ರಿತವಾಗಿತ್ತು. ನನ್ನ ಸುಪ್ತ ಮನಸ್ಸಿನೊಳಗೆ ಆಹ್ವಾನಿತವಾದ ಉತ್ತರಗಳು ಸಮರ್ಪಕವೆಂದು ಒಂದು ವಾರದೊಳಗೆ ಸಾಬೀತಾಯಿತು. ಈಗ ನಾನು ಕಷ್ಟಪಟ್ಟೇ ದುಡಿಯುತ್ತಿದ್ದರೂ ಮೊದಲಿನ ಆಯಾಸ, ಪ್ರಯಾಸಗಳಿಲ್ಲ. ಅಪಯಶಸ್ಸು ಅದುಮಲ್ಪಟ್ಟಿದ್ದರಿಂದ ಯಶಸ್ಸು ಗೆಲುಮುಖವಾಗಹೊರಟಿತು. ಮನಃಶ್ಶಾಸ್ತ್ರಜ್ಞರಿಂದ "ಹೊನಲು" ಎಂದು ಕರೆಯಲ್ಪಡುವ ಆನಂದವನ್ನು ನಾನು ಅನುಭವಿಸುವಂತಾಯಿತು. ಮನರಂಜನಾ ಕಾರ್ಯಕ್ರಮಗಳು ಕೊಡುವುದಕ್ಕಿಂತ ಹೆಚ್ಚಿನ ಚೇತನವನ್ನು ಒಮ್ಮೊಮ್ಮೆ ಕೆಲ ಜೀವನ ಚೋದ್ಯಗಳು ಕೊಡುತ್ತವೆ. ಈ ಚೇತನ ಹೆಚ್ಚಿನ ಕೆಲಸಮಾಡುವ ಹುಮ್ಮಸ್ಸು ಕೊಡುತ್ತದೆ.

ಕೆಲವೊಮ್ಮೆ ಸಂದಿಗ್ಧತೆ ಸಮಸ್ಯೆಯಲ್ಲಿರುವುದಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿರುತ್ತದೆ. ಅಲ್ಲಿ ಹಾಗೆಂದು ತೋರುತ್ತದೆ. ಆದರೆ ವಾಸ್ತವ ಬೇರೆ. ಅದೇನೆಂದು ಶೇಕ್ಸ್‌ಪಿಯರ್‌ನ ಮಾತಿನಲ್ಲಿ ಕೇಳಿ—"ಅಕ್ಕರೆಯ ಬ್ರೂಟಸನೇ, ಪ್ರಮಾದಗಳು ನಮ್ಮ ನಕ್ಷತ್ರದೊಳಿಲ್ಲ, ನಮ್ಮೊಳಗೇ ಇದೆ." ಅಪಾರ್ಥ ಮಾಡಿಕೊಂಡು ನಮ್ಮ ಬೇಜವಾಬ್ದಾರಿಯನ್ನು ಪರಕೃತಾಪರಾಧವೆನ್ನುವುದು ತರವಲ್ಲ. ಯಶಸ್ವೀ ಕಾರ್ಯನಿರ್ವಹಣೆ ಎಂದರೆ ಎಷ್ಟಾಗಬೇಕೋ ಅಷ್ಟನ್ನು ಮಾಡಿ ಮುಗಿಸುವುದು. ಸಹವರ್ತಿಗಳ ಸಹಕಾರವನ್ನು ಸ್ವೈರಣೆಯಿಂದ ಸಂಪಾದಿಸುವುದೇ ಯಶಸ್ಸಿನ ಗುಟ್ಟು.

ಹೆಚ್ಚಾಗಿ ನಮ್ಮನ್ನು ಹಿಡಿದಿಡುವ ಪಾಶ ಸ್ವಕೀಯವಾದದ್ದು. ಸಮಸ್ಯೆಗಳನ್ನು ಅತಿಯಾಗಿ ತಿಳಿದು, ಲೋಕವನ್ನೇ ತಾನು ಹೊತ್ತಿದ್ದೇನೆಂಬ ಭ್ರಮೆಯಿಂದ ವ್ಯಗ್ರನಾಗಿಬಿಡುತ್ತಾನೆ ಮನುಷ್ಯ. ಈ ಚಿತ್ತ, ವಿಕಲ್ಪ ಜೀವನದ ಎಲ್ಲ ಸ್ತರಗಳಲ್ಲೂ ನಮ್ಮ ಉತ್ಸಾಹವನ್ನೂ ಉತ್ಪತ್ತಿಯನ್ನೂ ಪ್ರತಿಬಂಧಿಸುತ್ತದೆ.

ತನ್ನ ತಂದೆ ಒಪ್ಪಲಾರನೆಂದು ತಿಳಿದ ವ್ಯಕ್ತಿಯೊಬ್ಬನನ್ನು ಒಬ್ಬಾಕೆ ಗುಟ್ಟಿನಲ್ಲಿ ಮದುವೆಯಾದಳು. ತಂದೆಗೆ ಗುಟ್ಟು ಬಿಡುವುದಿಲ್ಲವೆಂಬ ಪ್ರತಿಜ್ಞೆ ಪಡೆದು, ತಾಯಿಯಲ್ಲಿ ಗುಟ್ಟು ಬಿಟ್ಟಳಾ ತರುಣಿ. ಸಮಸ್ಯೆ ತಾಯಿಯ ತಲೆ ತಿನ್ನತೊಡಗಿತು. ಗುಟ್ಟನ್ನು ಗುಪ್ತವಾಗಿಡುವ ಅಪರಾಧ ಪ್ರಜ್ಞೆ ಸತ್ವ ಹೀರತೊಡಗಿತು. ಈ ತಾಕಲಾಟ ಅವಳ ಕೆಲಸ ಕಾರ್ಯಗಳ ಮೇಲೆ ಕೈಯಾಡಿಸತೊಡಗಿತು. ಸೋಲು ಕಂಡರಿಯದ ಆಕೆ ಈಗ ಗೆಲುವು ಕಾಣದಾದಳು. ಬೇರೆಯವರು ಮಧ್ಯಪ್ರವೇಶಿಸಿ ತರಳೆಯ ತಂದೆಗೆ ಸುದ್ದಿ ಮುಟ್ಟಿಸಿದಾಗ ನಿರೀಕ್ಷಿತ ಋಣ ಪ್ರತಿಕ್ರಿಯೆಯನ್ನಾತ ಮಾಡಲಿಲ್ಲವಾಗಿ ಸಮಸ್ಯೆ ಸುಲಭದಲ್ಲಿ ಪರಿಹಾರಗೊಂಡಿತು. ನಮ್ಮನ್ನು ನಾವೇ ಪಾಶಬಂಧರನ್ನಾಗಿಸುತ್ತೇವೆನ್ನುವ ನಂಬಲಾಗದ ಸತ್ಯಕ್ಕೆ ಇದು ಉದಾಹರಣೆ. ಬಂದಾಗಲೇ ಬಗೆಹರಿಸದೆ, ಸಮಯ ದೂಡಿದರೆ ಸಮಸ್ಯೆಗಳು ವೇಗವಾಗಿ ಬಲಗೊಳ್ಳಹೊರಡುತ್ತವೆ.

ಆದ್ದರಿಂದ ಮೊದಲ ಹೆಜ್ಜೆಯಾಗಿ ವಿವರಿಸಲಾಗದ ಜಡವನ್ನು ಅನ್ವೇಷಕವಾಗಿ "ರೆಡಾರಿನಂತೆ" ಉಪಯೋಗಿಸಿಕೊಂಡು ಜಡದ ಮೂಲವನ್ನು ಪತ್ತೆ ಮಾಡಬೇಕು. ಮನಸ್ವಿಯಾಗಿ ತಪ್ಪನ್ನು ಒಪ್ಪಿಕೊಳ್ಳಬೇಕು. ನಮ್ಮ ವಿಫಲತೆಗೆ ವಿವರಣೆಯನ್ನು ಕಂಡುಕೊಳ್ಳಬೇಕು. ಅಪರೂಪಕ್ಕೆ ಹೊರೆ ನಿಜವಾಗಿಯೂ ಭಾರವಾಗಿರುತ್ತದೆ. ನಮ್ಮ ತಲೆಮೇಲೆ ಬಿದ್ದಂತಾಗುತ್ತದೆ. ಹಾಗಾದಾಗ ಹೊರೆಯ ಮಹತ್ವವನ್ನು ಒಪ್ಪಿ ತಲೆ ಬಾಗಲೇಬೇಕಾಗುತ್ತದೆ. ಸಮಸ್ಯೆಯನ್ನು ಎದುರಿಸದೆ ಬಿಡುವುದೇ ಈ ಕಾಲಕ್ಕೆ ಔಚಿತ್ಯವಾಗುತ್ತದೆ. ಹೆಚ್ಚಿನ ಸಂದರ್ಭ "ರೋಗಿಯನಿಗ" ವಹಿಸುವುದರಿಂದ ಪರಿಹಾರ ಸಾಧ್ಯ. ಜಾಣ್ಮೆ ಮತ್ತು ದೃಢ ಸಂಕಲ್ಪ ಸುಪ್ತ ಮನಸ್ಸಿನ ಸ್ಫೂರ್ತಿ ಸ್ಫುರಣೆಯನ್ನು ಸರಾಗ ಮಾಡುತ್ತದೆ.

ನಾನು ಈಗಾಗಲೇ ಒಂದು ಬೇಧನೋಪಾಯದ ಉದಾಹರಣೆ ಕೊಟ್ಟಿದ್ದೇನೆ. ಮೊದಲು ಸಮಸ್ಯೆ ಯಾಕೆ ಅಪರಿಹಾರ್ಯ ಎಂಬುದಕ್ಕೆ ಕಾರಣಗಳನ್ನು ಕಂಡುಕೊಳ್ಳಿ. ಹೌದಿನಿಯಂತೆ ನಿಮ್ಮ ಸುತ್ತ ಸಮಸ್ಯೆಯ ಅಗಮ್ಯ ಪೆಟ್ಟಿಗೆಯನ್ನು ನಿರ್ಮಿಸಿಕೊಳ್ಳಿ. ಅನಂತರ ಹೌದಿನಿಯಂತೆ ನೀವೂ ಒಡೆಯಬಲ್ಲಿರೇ? ನಿಮ್ಮನ್ನು ನೀವೇ ಗಂಟು ಕಟ್ಟಿಕೊಂಡ ಮೇಲೆ ಸಮಸ್ಯೆಯ ಬಗ್ಗೆ ಆಲೋಚಿಸು

ವುದನ್ನು ಕೆಲಹೊತ್ತು ಮನಃಪೂರ್ವಕ ನಿಲ್ಲಿಸಿರಿ. ನಿಮ್ಮ ಸುಪ್ತ ಮನಸ್ಸು ಗಂಟು ಬಿಚ್ಚುವ ಬಗ್ಗೆ ಕೆಲಸ ಮಾಡಲಿ. ಹತ್ತರಲ್ಲಿ ಒಂಭತ್ತು ಸಲ ಅದು ಉತ್ತರ (ಪರಿಹಾರ) ಕೊಡುತ್ತದೆ.

ಮಾನಸಿಕ ಜಡವನ್ನು ದೈಹಿಕ ಜಡವೆಂದು ಗಣಿಸುವುದೇ ನಾವು ಮಾಡಬಹುದಾದ ನೀಚತಪ್ಪು. ನಮ್ಮ ದೇಹಕ್ಕೆ ವಿಶ್ರಾಂತಿಸಲು ಅವಕಾಶ ಕೊಡುವುದರಿಂದ ಎರಡನೆಯದಾದ ದೈಹಿಕ ಜಡ ಕಳೆದು ಚೇತರಿಸಬಹುದು. ಆದರೆ ವಿಫಲತೆಯಿಂದುಂಟಾಗುವ ಮಾನಸಿಕ ಜಡವನ್ನು ವಿಶ್ರಾಂತಿ ಕಳೆಯಲಾರದು. ವಿಶ್ರಾಂತಿ ವಿಷಯವನ್ನು ಮತ್ತೂ ಹದಗೆಡಿಸುತ್ತದೆ. ಲೋಹದಣಿವು ನಮ್ಮನ್ನು ನುಂಗಿಹಾಕುವ ಮೊದಲು ಯಾವುದೇ ನಿರ್ದಿಷ್ಟ ಅಡೆ ತಡೆಗಳಿದ್ದರೂ ಅವನ್ನು ತ್ವರೆಯಾಗಿ ತೊಲಗಿಸಿಬಿಡಬೇಕು.

ಮನುಷ್ಯರು ಶ್ರೇಯಸ್ಸಿಗಾಗಿ ಶ್ರಮಿಸಬೇಕು. ನಮ್ಮ ಜೈವಿಕ ಹಿನ್ನೆಲೆಯಲ್ಲೇ ಈ ಅಗತ್ಯತೆ ಬೆಳೆದುಬಂದಿದೆ. ಯಶಸ್ಸನ್ನು ವ್ಯಾಖ್ಯಾನಿಸಲು ಪ್ರಯತ್ನ ಮಾಡದೆ ಅದು, ಕೆಲಸ ಮಾಡುವ, ಸಮಸ್ಯೆಗಳನ್ನು ಬಂದಂತೆ ಬಗೆಹರಿಸುವ ಅಖಂಡ ಶೃಂಗಕ್ರಿಯೆ ಎಂದು ಹೇಳಿದರೆ ಸಾಕು. ಸಮೃದ್ಧತೆಯನ್ನೂ ಸಂತೋಷವನ್ನೂ ಹೊನಲನ್ನೂ ಅನುಭವಿಸುವುದರಲ್ಲಿದೆ ಯಶಸ್ಸು. ಅದು ಆಯಾಯ ವ್ಯಕ್ತಿಯ ನಿಷ್ಕಳಂಕ ಮಾನುಷ ಸಾಮರ್ಥ್ಯದ ಪ್ರಕ್ರಿಯೆ.

ಹಾಗಾಗಿ ಯಶಸ್ಸೆಂದರೆ ಎಂದೂ ದಣಿವು ಅನುಭವಿಸದ ಸ್ಥಿತಿ.

ಎ. ಪಿ. ಚಂದ್ರಶೇಖರ



ತಮ್ಮ ತಮ್ಮಲ್ಲಿ ಜನರು ಹೋರಾಡುವುದರಿಂದ ಏನೂ ಸಾಧಿಸದು. ಅವರೆಲ್ಲರೂ ಕೆಡುಕಿನ ವಿರುದ್ಧ ಹೋರಾಡಬೇಕು. —ಕಾರ್ಲೈಲ್

ಅದ್ಭುತ ಹಾಗೂ ಗೂಢ ಜಿನ್‌ಸೆಂಗ್

ಚೀನಾ ಮತ್ತು ಕೊರಿಯಾದ ಜನರು ಶತಮಾನಗಳಿಂದ ಇದನ್ನು ಅಪೂರ್ವ ನಿಧಿಯೆಂಬಂತೆ ಕಾಪಾಡಿಕೊಂಡು ಬಂದಿದ್ದಾರೆ. ಬ್ರಿಟನ್ನಿನ ಕೆಲವು ಉತ್ಸಾಹಿಗಳು ಇದಕ್ಕಾಗಿ ಸುಮಾರು ೧೦ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಸುಮಾರು ೬ ದಶಲಕ್ಷ ಅಮೆರಿಕನ್ನರು, ದೇಶದ ಪ್ರತಿ ಗಂಡು, ಹೆಣ್ಣು ಹಾಗೂ ಮಗುವಿಗೆ (ಒಂದು ಸಲದ) ಔಷಧದ ಪ್ರಮಾಣದಲ್ಲಿ ಪೂರೈಸಲು ೨೫೦ ಮೆಟ್ರಿಕ್ ಟನ್ನಿನಷ್ಟು ಕೊಳ್ಳುತ್ತಾರೆ.

ಮಾರುಕಟ್ಟೆಯಲ್ಲಿ ಇಷ್ಟೊಂದು ಬೇಡಿಕೆಯುಳ್ಳ ವಸ್ತುವೇ ಜಿನ್‌ಸೆಂಗ್. ಪರದೇಶದ ಈ ಗಡ್ಡೆಯ ವ್ಯಾಪಾರ ವಿಶ್ವವನ್ನೇ ಕಲಕಿಸಿದೆ. ೧೯೭೦ರಲ್ಲಿ ಕೇವಲ ೧೦ ಕೋಟಿ ರೂಪಾಯಿಯ ಸರಕು ಬೇಡಿಕೆಯಲ್ಲಿತ್ತು. ಆದರೆ ೧೯೭೪ರಲ್ಲಿ ಈ ಮೊತ್ತ ೬೦ ಕೋಟಿ ರೂಪಾಯಿಯನ್ನು ತಲುಪಿತು. ಔಷಧಗಳ ಕಾರ್ಖಾನೆ ಜಿನ್‌ಸೆಂಗ್ ಗಡ್ಡೆಯನ್ನು ದ್ರವ, ಕೋಶ ಹಾಗೂ ಗುಳಿಗೆಗಳ ರೂಪದಲ್ಲಿ ತಯಾರಿಸಿ ಮಾರುತ್ತಿದ್ದಾರೆ. ಇದನ್ನು ಚಹಾ ಹಾಗೂ ಇತರ ಪಾನಿಯಗಳಲ್ಲಿ ಚಿವಿಂಗ-ಗಮ್‌ಗಳಲ್ಲಿ, ಸಾಬೂನಿನಲ್ಲಿ ಬೆರಸಿ ಮಾರಲಾಗುತ್ತಿದೆ. ಹೆಚ್ಚು ಅಮಲು ಬರಲೆಂದು ಆಶಿಸುವವರಿಗೆ ನ್ಯೂಯಾರ್ಕಿನ ಕೆಲವೊಂದು ಪಾನಗೃಹಗಳಲ್ಲಿ ಮದ್ಯದಲ್ಲಿ ಜಿನ್‌ಸೆಂಗನ್ನು ಬೆರಸಿ ಕೊಡುತ್ತಾರೆ.

ಪೆನ್ಯಾಕ್ಸ್ ಜಿನ್‌ಸಿಂಗ್ ನೋಡಲು ಅಷ್ಟೇನೂ ಆಕರ್ಷಕವಾಗಿ ಕಾಣುವದಿಲ್ಲ. ಚೆನ್ನಾಗಿ ಬೆಳೆದ ಗಿಡಗಳು ಸುಮಾರು ೬೦-೯೦ ಸೆಂ.ಮೀ. ಎತ್ತರವಿರುತ್ತವೆ. ಜಾಂಬಳಿ ಬಣ್ಣದ ಸಣ್ಣ ಹೂಗಳಿರುತ್ತವೆ ಅಥವಾ ಬಾರಿ ಹಣ್ಣಿನಂತಹ ಗೊಂಚಲುಗಳಿದ್ದು ಇವುಗಳನ್ನು (ಗರಗಸದಂತಿರುವ ಅಂಚಿನ) ಐದು ಎಲೆಗಳು ಸುತ್ತುವರಿದಿರುತ್ತವೆ. ಆದರೆ ಈ ಸಸ್ಯದ ಮುಖ್ಯ ಅಂಗವಿರುವುದು ಅದರ ಬೂದು-ಬಿಳಿ ಮಾಂಸದ ಮುದ್ದೆಯಂತಿರುವ ಗಡ್ಡೆ(ಬೇರು)ಯಲ್ಲಿ. ಬೆಳೆದುನಿಂತ ಒಂದು ಗಿಡದಲ್ಲಿ, ಈ ಗಡ್ಡೆ ಸುಮಾರು ೭ ಸೆಂಟಿಮೀಟರಿನಷ್ಟು ಉದ್ದವಿದ್ದು ಅದರ ತೂಕ ೭೬ ಗ್ರಾಂ ಇರುತ್ತದೆ. ಈ ಗಡ್ಡೆಯ ಬುಡದಲ್ಲಿ ತೊಡೆಯಾಕಾರದ ಎರಡು ಭಾಗಗಳನ್ನು ಕಾಣಬಹುದು. ಮಾನವನ ತೊಡೆಯಂತಿರುವುದನ್ನೇ ಕಂಡೇ ಚೀನಿಯರು ಇದಕ್ಕೆ ಜಿನ್‌ಸೆಂಗ್ ಅಥವಾ ಮಾನವ-ಗಡ್ಡೆ ಎಂದು

ಜೂನ್ ೧೯೭೮ರ ರೀಡರ್ಸ್ ಡೈಜೆಸ್ಟ್ ಮಾಸಪತ್ರಿಕೆಯಲ್ಲಿ ಪ್ರಕಟವಾದ 'ಸ್ಟಿಫೆನ್ ಫಿಲ್ಡಾರ್' ಅವರ "ಮಾರ್ವಲಸ್ ಮಿಸ್ಟೀರಿಯಸ್ ಜಿನ್‌ಸೆಂಗ್" ಲೇಖನದ ಸರಳಾನುವಾದ.

ಕರೆದರು. ಇದೇ ಕಾರಣದಿಂದಾಗಿ, ಇದೊಂದು ಕಾಮೋದ್ದೀಪಕವೆಂಬ ಭ್ರಮೆ ಜನರಲ್ಲಿ ಬೇರೂರಿತು. ಇದು ಎಷ್ಟರಮಟ್ಟಿಗೆ ನಿಜವೆಂಬುದು ಚರ್ಚಾಸ್ಪದ ವಿಷಯುವಾದರೂ ಸುಮಾರು ೫೦೦ ವರ್ಷಗಳಿಂದ ಚೀನಿಯರ ದೃಷ್ಟಿಯಲ್ಲಿ ಇದೊಂದು ಸರ್ವಶಕ್ತ ಔಷಧಿಯಾಗಿರುವುದು ಮಾತ್ರ ನಿಜಸಂಗತಿ. ಈ ಗಡ್ಡೆ ನಪುಂಸಕತೆ, ಜಠರ ಚರ್ಮಗಳ ಊತ, ಶೀತಜ್ವರ, ಕ್ಯಾನ್ಸರ್, ಸಂಧಿವಾತ, ನಿರ್ನಿದ್ರೆ, ನಿರುತ್ಸಾಹ, ತಲೆಶೂಲೆ, ಮರೆವು, ನೆಗಡಿ ಮುಂತಾದ ಅನೇಕ ರೋಗಗಳಿಗೆ ಸಿದ್ಧೌಷಧಿಯಾಗಿದ್ದು ಅದಕ್ಕೆ ಎಂದಿನಿಂದಲೂ ಬೇಡಿಕೆಯಿದೆ ಎಂಬುದನ್ನು ಅನೇಕ ಚೀನೀ ವೈದ್ಯಕೀಯ ಗ್ರಂಥಗಳಲ್ಲಿ ಪ್ರಸ್ತಾಪಿಸಲಾಗಿದೆ.

ಇದನ್ನು ಸೇವಿಸಿದ ಚೀನೀ ಸೈನಿಕರ (ಗಾಯದ) ಬೇನೆ ಕಡಿಮೆಯಾಗುತ್ತಿದ್ದುದಲ್ಲದೆ ಅವರ ದಣಿವು ಕೂಡಾ ದೂರವಾಗುತ್ತಿತು. ಚೀನಾದ ಚಕ್ರವರ್ತಿಗಳು ತಮ್ಮ ಆಯುಷ್ಯ ವೃದ್ಧಿಗಾಗಿ ಜಿನ್‌ಸೆಂಗನ್ನು ಸೇವಿಸುತ್ತಿದ್ದರು. ೧೭ನೆಯ ಶತಮಾನದಲ್ಲಿ ಚೀನಾ ಮತ್ತು ಯುರೋಪ್ ಮಧ್ಯೆ ವ್ಯಾಪಾರ ಬೆಳೆದಂತೆ ಯೂರೋಪಿನ ಶ್ರೀಮಂತ ವರ್ಗದವರು ಜಿನ್‌ಸೆಂಗಿಗಾಗಿ ಮರುಳಾದರು. ಅದರ ಬೇಡಿಕೆ ಹೆಚ್ಚುತ್ತ ಹೋಯಿತು. ಜಿನ್‌ಸೆಂಗಿನ ಮೋಹಕ್ಕೆ ವಶರಾದ ಇತ್ತೀಚಿನ ಉದಾಹರಣೆಗಳೆಂದರೆ ಹೆಸರಾಂತ ಲೇಖಕ ಬಾರ್ಬರಾ ಕಾರ್ಟ್‌ಲೆಂಡ್ ಹಾಗೂ ಜಪಾನಿನ ಬೇಸ್‌ಬಾಲ್ ಪಟು ಸದಾಹರು ಒಹ್.

ಈ ಗಡ್ಡೆಯಿಂದ ಯಾವ ಅಪಾಯವಿಲ್ಲದಿದ್ದರೂ ಇದರ ಪರಿಣಾಮ ಕೇವಲ ಮಾನಸಿಕವೆಂದು ಅನೇಕ ಪಾಶ್ಚಾತ್ಯ ವೈದ್ಯಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಅಮೆರಿಕೆಯ ಆಹಾರ ಮತ್ತು ಔಷಧ ಆಡಳಿತ ಇದನ್ನು ಚಹಾದಲ್ಲಿ ಬೆರೆಸುವ ವಸ್ತುವೆಂದು ವರ್ಗೀಕರಿಸಿದೆ. ಅನೇಕ ಪಾಶ್ಚಾತ್ಯ ದೇಶಗಳ ಅಧಿಕೃತ ಪ್ರಮಾಣ ಔಷಧ ಪಟ್ಟಿಕೆಗಳಲ್ಲಿ ಇದರ ಹೆಸರಿಲ್ಲ. ಪಶ್ಚಿಮದ ಅನೇಕ ದೇಶಗಳಲ್ಲಿ ಇದರಿಂದ ಔಷಧಿ ತಯಾರಿಸಲು ಅಪ್ಪಣೆ ಕೊಡುವದಿಲ್ಲ. ಇಸ್ರೇಲಿನಲ್ಲಿ ಅಂಗಡಿಕಾರರಾಗಲಿ ತಯಾರಕರಾಗಲಿ ಜಿನ್‌ಸೆಂಗ್ ಮಾರಾಟದಲ್ಲಿ ತೊಡಗಿದ್ದಾದರೆ, ಅವರಿಗೆ ಕಾರಾಗೃಹ ಶಿಕ್ಷೆ ವಿಧಿಸಲಾಗುತ್ತದೆ.

ಆದರೂ ಪಶ್ಚಿಮದಲ್ಲಿ ಇದಕ್ಕೆ ವಿಪರೀತ ಬೇಡಿಕೆ; ಎಲ್ಲಿಲ್ಲದ ಇದರ ಗುಣಗಾನ. ಚೀನಾ ಮತ್ತು ಕೊರಿಯಾದ ಅನೇಕ ಹಳೆಯ ವೈದ್ಯರ ದೃಷ್ಟಿಯಲ್ಲಿ ಜಿನ್‌ಸೆಂಗ್ ಬಾಧೆಯನ್ನು ಶಮನಗೊಳಿಸುವ ಔಷಧಿಯಾಗಿರದೆ ಕೇವಲ ಪ್ರತಿಬಂಧಕವಾಗಿದೆ. ಇದನ್ನು ಕೆಲವು ದಿನಗಳವರೆಗೆ, ಕ್ರಮಬದ್ಧವಾಗಿ ಸೇವಿಸಿದಲ್ಲಿ ಕೆಲವು ಬಾಧೆಗಳು ದೂರವಾಗುವುವೆಂಬುದೇ ಅವರ ಅಭಿಪ್ರಾಯ. ರೋಗ

ನಿವಾರಣೆಗಿಂತ, ಪುನಶ್ಚೈತನ್ಯ ತಂದು ಆರೋಗ್ಯ ಸುಧಾರಿಸುವಲ್ಲಿ ಇವರ ಪಾತ್ರ ಮಹತ್ವದ್ದಾಗಿದೆ.

ಆಯುಷ್ಯವೃದ್ಧಿ : ಆಯುಷ್ಯವೃದ್ಧಿಯ ಗುಣ ಜಿನ್‌ಸೆಂಗಿನಲ್ಲಿದೆಯೆಂಬುದನ್ನು ವೈಜ್ಞಾನಿಕ ಪ್ರವೃತ್ತಿಯ ಪಾಶ್ಚಾತ್ಯರಿಗೆ ಸಾಧಿಸಿ ತೋರಿಸುವುದು ಕಠಿಣ. ಜಿನ್‌ಸೆಂಗನ್ನು ಉಪಯೋಗಿಸುವ ಹಾಗೂ ಉಪಯೋಗಿಸದ ಕೆಲವೊಂದು ಜನರನ್ನು, ಕೆಲವು ವರ್ಷಗಳವರೆಗಾದರೂ ಈ ಪ್ರಯೋಗಕ್ಕೆ ಒಳಪಡಿಸಿ ಅವರ ಆರೋಗ್ಯವನ್ನು ತುಲನಾತ್ಮಕವಾಗಿ ಅಭ್ಯಸಿಸಬೇಕಾಗುತ್ತದೆ. ಆದರೂ ಈ ಗಡ್ಡೆಯನ್ನು ಕುರಿತು ಸಾಕಷ್ಟು ಅಧ್ಯಯನ ನಡೆದಿದೆ. ಕಳೆದ ದಶಕದಲ್ಲಿ ಅನೇಕ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಜಿನ್‌ಸೆಂಗ್ ಕುರಿತು ವಿಶೇಷ ಚರ್ಚೆಗಳು ನಡೆದಿವೆ.

ಮುಪ್ಪಾಗುವುದನ್ನು ಕುರಿತು ಲಂಡನ್ನಿನಲ್ಲಿ ಸಂಶೋಧನೆ ನಡೆಸುತ್ತಿದ್ದಂತೆ (೧೯೭೨) ಈ 'ಮಾನವ-ಗಡ್ಡೆ' ಬಗ್ಗೆ ನನ್ನ ಆಸಕ್ತಿ ಹೆಚ್ಚಿತು. ಜಿನ್‌ಸೆಂಗಿನ ಪರಿಣಾಮದಿಂದಾಗಿ ಪ್ರಯೋಗಾಲಯದಲ್ಲಿಯ ಮಾನವ ಅಂಗಾಂಶವೊಂದರ ಆಯುಷ್ಯ ಹೇಗೆ ಹೆಚ್ಚುತ್ತ ಹೋಯಿತೆಂಬುದನ್ನು ಬರೆದು ಒಂದು ಲೇಖನ ಪ್ರಕಟಿಸಿದೆ. ಇದರ ಬಗ್ಗೆ ಆಸಕ್ತಿ ಹೆಚ್ಚಾಗಿ, ಸೊಹೊದಲ್ಲಿನ ಕೊರಿಯನ್ ಅಂಗಡಿಗೆ ಹೋಗಿ ಜಿನ್‌ಸೆಂಗಿಗಾಗಿ ಕೇಳಿದೆ. ಅಲ್ಲಿ ದೊರಕಿದ ಗಟ್ಟಿ ಹಾಗೂ ಗಾಜಿನಂಥ ಗಡ್ಡೆಯನ್ನು ತಂದೆ. ಇದಾದ ಬಳಿಕ ಕೊರಿಯಾಕ್ಕೆ ಬರೆದು ಜಿನ್‌ಸೆಂಗ್ ಗಡ್ಡೆಗಳನ್ನು ತರಿಸಿಕೊಂಡೆ.

ಈ ಗಡ್ಡೆಯನ್ನು ಕುಟ್ಟಿ, ಅದರಿಂದ ಬಂದ ಗಟ್ಟಿ ಕಂದುಬಣ್ಣದ ರಸವನ್ನು ಹಿಂಡಿದೆ. ಇದನ್ನು ಪ್ರಯೋಗಾಲಯದಲ್ಲಿ, ಸಾಕಿ ವೃದ್ಧಿಗೊಳಿಸಲಾಗಿದ್ದ ಮಾನವಕೋಶ ಕೃಷಿಕೆಯ ಮೇಲೆ ಪ್ರಯೋಗಿಸಿದೆ. ಇಲ್ಲಿ ಎರಡು ರೀತಿಯ ಫಲಿತಾಂಶಗಳನ್ನು ಕಂಡೆ. ಮೊದಲನೆಯದಾಗಿ, ಜಿನ್‌ಸೆಂಗಿನ ಪರಿಣಾಮದಿಂದಾಗಿ ಈ ಕೋಶಗಳು ಬಹಳ ತೀವ್ರಗತಿಯಿಂದ ಬೆಳೆದವು. ಎರಡನೆಯದಾಗಿ ಈ ಕೋಶಗಳು ಒತ್ತಡವನ್ನು ಪ್ರತಿಭಟಿಸುವಷ್ಟು ಶಕ್ತವಾಗಿದ್ದು, ಪ್ರಯೋಗಶಾಲೆಯ ವ್ಯತಿರಿಕ್ತ ವಾತಾವರಣದಲ್ಲೂ ಬಹಳ ದಿನಗಳವರೆಗೆ ಜೀವಂತವಾಗಿದ್ದವು.

ಈ ಗಡ್ಡೆ ಬಲವರ್ಧಕಕ್ಕಿಂತಲೂ ಹೆಚ್ಚಿನ ಕೆಲಸ ಮಾಡುತ್ತದೆಂಬುದು ಅನೇಕ ಪ್ರಯೋಗಗಳಿಂದ ಖಚಿತವಾಗಿದೆ. ೧೯೪೮ರಲ್ಲಿ ಇಸ್ರಾಯಿಲ್‌ಬ್ರೆಕ್‌ಮ್ಯಾನ್ ಎಂಬ ರಶಿಯನ್ ವಿಜ್ಞಾನಿ ರಶಿಯನ್ ಸೈನಿಕರಿಗೆ ಜಿನ್‌ಸೆಂಗ್

ಗಡ್ಡೆಯು ಹಿಂಡಿದ ರಸವನ್ನು ಕುಡಿಸಿದ. ಇದರಿಂದಾಗಿ ಈ ಸೈನಿಕರ ಓಟದಲ್ಲಿ ಶೇ. ೬ರಷ್ಟು ಸುಧಾರಣೆ ಕಂಡುಬಂದಿತು. ಆನಂತರ ಬ್ರೆಖ್‌ಮನ್ ಇದೇ ತೆರನಾದ ಪ್ರಯೋಗಗಳನ್ನು ಇಲಿಗಳ ಮೇಲೆ ನಡೆಸಿದ. ಜಿನ್‌ಸೆಂಗಿನ ಪರಿಣಾಮದಿಂದಾಗಿ ಇಲಿಗಳ ದಾರ್ಢ್ಯ (ಓಟ ಹಾಗೂ ಈಜಾಟ)ದಲ್ಲಿ ಶೇ. ೨೪ರಷ್ಟು ಸುಧಾರಣೆ ಕಂಡ.

ಬಲ್ಗೇರಿಯಾದಲ್ಲಿ ಪ್ರೊ. ಮಿಸ್ಲೀನ್ ಪೆಟ್ಕೋವ್ ಜಿನ್‌ಸೆಂಗ್ ಮೆದುಳಿನ ಮೇಲೆ ಮಾಡಬಹುದಾದ ಪರಿಣಾಮವನ್ನು ಕುರಿತು ಪ್ರಯೋಗ ನಡೆಸಿದ. ಮೊದಲು ಕೆಲವೊಂದು ಇಲಿಗಳನ್ನು ಪ್ರಯೋಗಕ್ಕೆ ಒಳಪಡಿಸಿ ಅವುಗಳ ಚಟುವಟಿಕೆಯ ಮೂಲಕ ಜಿನ್‌ಸೆಂಗ್ ಪರಿಣಾಮವನ್ನು ಅಭ್ಯಸಿಸಿದ. ಇದೇ ರೀತಿಯಲ್ಲಿ ಬೆಕ್ಕುಗಳ ಮೆದುಳಿನ ಚಟುವಟಿಕೆ (ಈ ಗಡ್ಡೆಯ ರಸವನ್ನು ಪ್ರಯೋಗಿಸುವ ಮೊದಲು ಹಾಗೂ ಅನಂತರ)ಯನ್ನು ಪರೀಕ್ಷಿಸಿ ನೋಡಿದ. ಮೂರನೆಯ ಪ್ರಯೋಗದಲ್ಲಿ ಸ್ವಪ್ರೇರಣೆಯಿಂದ ಮುಂದೆ ಬಂದ ಜನರಿಗೆ ಸುವಾಸಿತ ಪಾನೀಯಗಳನ್ನು ಕುಡಿಯಲು ಕೊಟ್ಟ. ಕೆಲವೊಂದು ಬಟ್ಟಲುಗಳಲ್ಲಿನ ಪಾನಿಯಕ್ಕೆ ಮಾತ್ರ ಜಿನ್‌ಸೆಂಗ್ ರಸವನ್ನು ಬೆರೆಸಲಾಗಿತ್ತು. ಈ ಪಾನಿಯದ ಪರಿಣಾಮದ ಸಂಕೇತವನ್ನು ಅವರು ಸೂಚಿಸಬೇಕೆಂದು ತಿಳಿಸಲಾಗಿತ್ತು. ಜಿನ್‌ಸೆಂಗಿನ ಪ್ರಯೋಗದಿಂದ ನೆನಪಿನ ಹಾಗೂ ಕಲಿಯುವ ಶಕ್ತಿಯನ್ನು ಸುಧಾರಿಸಬಹುದೆಂಬುದನ್ನು ಪೆಟ್ಕೋವ್ ಖಚಿತಪಡಿಸಿಕೊಂಡ.

ಭಿನ್ನವಾದ ಪರಿಣಾಮಗಳು: ಬ್ರೆಖ್‌ಮನ್ ಮತ್ತು ಪೆಟ್ಕೋವ್ ಅವರ ಯಶಸ್ವಿ ಪ್ರಯೋಗಗಳು, ನಂತರದ ವಿಜ್ಞಾನಿಗಳಿಗೆ ಪ್ರೇರಣೆಯಾಗಿ, ಅನೇಕ ದೇಶಗಳಲ್ಲಿ ಜಿನ್‌ಸೆಂಗ್ ಕುರಿತು ಸಂಶೋಧನೆಗಳು ನಡೆದವು. ಸ್ವೀಡನ್ನಿನ ವಿದ್ಯಾರ್ಥಿಗಳ ಮೇಲೆ, ಜರ್ಮನಿಯ ರೋಗಿಗಳ ಮೇಲೆ ಮತ್ತು ರಶಿಯಾದ ದೂರಲೇಖಕ ನಿರ್ವಾಹಕರ ಮೇಲೆ ಜಿನ್‌ಸೆಂಗ್ ಪರಿಣಾಮ ಬೀರಿತಲ್ಲದೆ ಅವರ ಶಕ್ತಿಸಾಮರ್ಥ್ಯದ ಜೊತೆಗೆ ಬುದ್ಧಿಯನ್ನು ಚುರುಕುಗೊಳಿಸಿತೆಂಬ ವರದಿ ಬಂದವು. ಈ ಗಡ್ಡೆಯ ಲಾಭಕರ ಪರಿಣಾಮದ ಬಗ್ಗೆ ಅಥವಾ ಅದು ಯಾವ ರೀತಿಯಲ್ಲಿ ಕೆಲಸ ಮಾಡುತ್ತದೆಂಬುದರ ಬಗ್ಗೆ ವಿಜ್ಞಾನಿಗಳಲ್ಲಿ ಭಿನ್ನಾಭಿಪ್ರಾಯವಿದೆ. ನನ್ನ ಅಭಿಪ್ರಾಯದಲ್ಲಿ ಜಿನ್‌ಸೆಂಗ್ ಚೋದಕಸ್ರಾವದ ಸಂದೇಶ ವ್ಯವಸ್ಥೆಯ ಕೆಲಸ ಮಾಡುವ ಗ್ರಂಥಿಗಳನ್ನು ಚುರುಕುಗೊಳಿಸುತ್ತದೆ. ಇದರಿಂದಾಗಿ ದೇಹ ಹಾಗೂ ಮೆದುಳನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಗುತ್ತದೆ.

ಈ ಗಡ್ಡೆಯ ವಿಭಿನ್ನ ಪರಿಣಾಮಕ್ಕೆ ಕಾರಣವೆಂದರೆ ಜಿನ್‌ಸೆಂಗ್‌ನಲ್ಲಿನ ಪೆಪ್ಟೈಡ್‌ನ

ಪ್ರಮಾಣದ ರಾಸಾಯನಿಕ ಸಂಯೋಜನೆ. ಈವರೆಗೆ ಸುಮಾರು ೩೦ ರಾಸಾಯನಿಕ ಸಂಯುಕ್ತಗಳನ್ನು ಬೇರ್ಪಡಿಸಲಾಗಿದೆ. ಪ್ರತಿಯೊಂದು ಸಂಯುಕ್ತದ ಗುಣಧರ್ಮಗಳು ಬೇರೆ ಬೇರೆಯಾಗಿರುವುದು ಕಂಡುಬಂದಿದೆ. ಉದಾ: ಕೆಲವು ಉದ್ರೇಕಗೊಳಿಸುವಂಥವು ಮತ್ತೆ ಕೆಲವು ಶಾಂತಗೊಳಿಸುವಂಥವು.

ಇದೊಂದು ಸರ್ವರೋಗ ನಿವಾರಕವೆಂದು ಪುರಾತನರು ತಿಳಿಯಲು ಕೆಲವು ಕಾರಣಗಳಿರಬೇಕು. ಅಂದು ಅಡವಿಗಳಲ್ಲಿ ದೊರೆಯುತ್ತಿದ್ದ ಮಾದರಿ ಗಡ್ಡೆಗಳು ಇಂದು ನಿರ್ನಾಮವಾಗಿ ಹೋಗಿವೆ. ಅತಿ ಬೆಲೆಯುಳ್ಳ ಜಿನ್‌ಸೆಂಗ್ ಮಂಚೂರಿಯಾ (ಚೀನಾ) ಮತ್ತು ಕೊರಿಯಾದ ಕೆಲವೊಂದು ಶೀತ ಪ್ರದೇಶಗಳಲ್ಲಿ ಮಾತ್ರ ಬೆಳೆಯುತ್ತದೆ. ಈ ಗಡ್ಡೆಯನ್ನು ಬೇರೆ ದೇಶಗಳಲ್ಲಿ ಬೆಳೆಸಲು ಪ್ರಯತ್ನಿಸಿದರೂ ಕೊರಿಯಾ ಮತ್ತು ಮಂಚೂರಿಯಾದಲ್ಲಿನ ಗಡ್ಡೆಯ ಸತ್ವ ಇವುಗಳಲ್ಲಿ ಕಾಣಲಿಲ್ಲ. ಯಾವ ಶಾಸ್ತ್ರೀಯ ಪ್ರಯೋಗಶಾಲೆಯಲ್ಲೂ ಇದರ ಪರೀಕ್ಷೆ ನಡೆದಿಲ್ಲ. ಪಶ್ಚಿಮ ದೇಶಗಳಲ್ಲಿ ಇದನ್ನು ಬೆಳೆಸುತ್ತಿಲ್ಲ.

ಶೋಧನೆ: ನೂರಾರು ವರ್ಷಗಳಿಂದ ಗಡ್ಡೆಗಳನ್ನು ಕಡಿದು, ಗಡ್ಡೆಯನ್ನು ಕಿತ್ತು ಮಾರುತ್ತ ಬಂದ ಮಾನವ, ಈ ಅಮೂಲ್ಯ ನಿಧಿ ನಿರ್ನಾಮವಾಗುತ್ತಿದ್ದುದನ್ನು ಗಮನಿಸಲಿಲ್ಲ. ಇಂದು ಕೊರಿಯಾದಲ್ಲಿ ಕೆಲವೆಡೆ ಮಾತ್ರ ಜಿನ್‌ಸೆಂಗ್ ಸಸ್ಯಗಳು ಕಾಣಸಿಗುತ್ತವೆ. ೫೦ ರಿಂದ ೧೦೦ ವರ್ಷ ಹಳೆಯ ಒಂದು ಗಡ್ಡೆಗೆ ಹೆಚ್ಚಿನ ಬೆಲೆ ಇರುತ್ತದೆ (ಒಂದು ಗ್ರಾಮಿಗೆ ರೂ. ೧೭೫೦ ರಿಂದ ರೂ. ೩೭೫೦ ಆಗುವುದು). ಕೆಲವೇ ಗಡ್ಡೆಗಳನ್ನು ಮಾರಿ ಶ್ರೀಮಂತರಾಗುವ ಕನಸು ಕಾಣುವ ಸುಮಾರು ೫೦೦೦ಕ್ಕೂ ಹೆಚ್ಚು ಜನರು ಪ್ರತಿವರ್ಷ ವಸಂತಋತುವಿನಲ್ಲಿ, ಪರಂಪರಾಗತವಾಗಿ ಬೆಳೆಯುವ ಅರಣ್ಯಗಳಿಗೆ, ಜಿನ್‌ಸೆಂಗ್ ಬೇಟೆಗಾಗಿ ಧಾವಿಸುತ್ತಾರೆ. ಕೆಲವೊಮ್ಮೆ ಚಿಕ್ಕ ಸಸಿಗಳು ಅವರ ಕಣ್ಣಿಗೆ ಬೀಳುವುದುಂಟು. ಅದು ಬೆಳೆಯುವವರೆಗೆ ಕಾಯಬೇಕಾಗುತ್ತದೆ. ಮತ್ತೆ ಬಂದಾಗ ಗುರುತಿಸಲು ಅನುಕೂಲವಾಗಲೆಂದು, ಒಂದು ಗೆರೆಯನ್ನೋ ಅಥವಾ ಚಿಹ್ನೆಯನ್ನೋ ಮಾಡಿ ಹೋಗುತ್ತಾರೆ. ಕೆಲವರಿಗೆ ಸುದೈವದಿಂದ ಬೆಳೆದ ಗಡ್ಡೆ ದೊರೆಯಬಹುದು. ಆಗ ಅವರು ದಿನವಿಡಿ ಪ್ರಾರ್ಥಿಸಿ ನೆಲದಿಂದ ಗಡ್ಡೆಯನ್ನು ಹೊರತೆಗೆಯುತ್ತಾರೆ. ಆ ಸ್ಥಳದಿಂದ ನಿರ್ಗಮಿಸುವ ಮೊದಲು ತೋಡಿದ ತಗ್ಗಿನಲ್ಲಿ ಜಿನ್‌ಸೆಂಗ್ ಗಿಡದ ಹಣ್ಣುಗಳನ್ನು ಉದುರಿಸಿ ಮೇಲೆ ಮಣ್ಣು ಹಾಗೂ ಎಲೆಗಳನ್ನು ಹಾಕುತ್ತಾರೆ. ಎರಡೇ ವರ್ಷಗಳಲ್ಲಿ ಅಲ್ಲಿ ಮತ್ತೆ ಗಿಡವೊಂದು ಅಂಕುರಿಸಿದರೂ ಒಳ್ಳೆಯ ಗಡ್ಡೆಯನ್ನು ಪಡೆಯಲು ೨೦ ವರ್ಷಗಳವರೆಗೆ ಕಾಯಬೇಕಾಗುತ್ತದೆ.

ಹಿಂದಿನ ಕಾಲದಲ್ಲೂ ಈ ಗಡ್ಡೆ ಕೆಲವೆಡೆ ಸಿಗುತ್ತಿದ್ದುದರ ಬಗ್ಗೆ ಚೀನಿ ಔಷಧ ಗಳ ಪುಸ್ತಕದಲ್ಲಿ ಬರೆದಿದ್ದಾರೆ. ಈ ಬರಹವನ್ನು ಪೂರಗೊಳಿಸುವಂತೆ ೧೭೧೬ರಲ್ಲಿ ಫಾದರ್ ಜೋಸೆಫ್ ಫ್ರ್ಯಾಂಕೋಯಿಸ್ ಲಿಫೀಟು ಎಂಬ ಪಾದ್ರಿ ಕುಂಕುಮ (ಕೆಂಪು) ಬಣ್ಣದ ಹಣ್ಣುಗಳಿದ್ದ ೫ ಎಲೆಯ ಸಸ್ಯವೊಂದನ್ನು ಮಾಂಟ್ರಿಯಾಲಿನ ಹತ್ತಿರದ ಕಾಡಿನಲ್ಲಿರುವುದನ್ನು ಕಂಡುಹಿಡಿದ. ಸ್ವತಃ ಸಸ್ಯಶಾಸ್ತ್ರಜ್ಞನಾಗಿದ್ದ ಈ ಪಾದ್ರಿ ಚೀನೀ ಜಿನ್‌ಸೆಂಗ್ ಸಸ್ಯದ ಚಿತ್ರವನ್ನು ಕೆನಡಾದಲ್ಲಿಯ ಭಾರತೀಯರಿಗೆ ತೋರಿಸಿದ್ದನು ಮತ್ತು ಈ ಜನರ ಸಹಾಯದಿಂದ ಹೊಸ ತರನಾದ ಜಿನ್‌ಸೆಂಗ್ ವೊಂದನ್ನು ಕಂಡುಹಿಡಿದು ಅದಕ್ಕೆ ಪೆನಾಕ್ಸ್ ಕ್ವಿಂಕ್ವೆಫೋಲಿಯಸ್ ಎಂದು ಕರೆದ.

ಮೂಲತಃ ಈ ಹೊಸ ಸಸ್ಯ ದಟ್ಟ ಹಾಗೂ ಶೀತ ಕ್ವಿಬೆಕ್ಕಿನಿಂದ ಮೊನಿಟೋಬಾ ಹಾಗೂ ಮೆಕ್ಸಿಕೋದ ಕೊಲ್ಲಿಯವರೆಗಿನ ಅರಣ್ಯಗಳಲ್ಲಿ ಸಾಕಷ್ಟು ಕಾಣಿಸಿಗುತ್ತಿತ್ತು. ಈ ವಿಷಯ ಚೀನಿಯರಿಗೆ ತಿಳಿದಂತೆ, ಉತ್ತರ ಅಮೇರಿಕೆಯಿಂದ ಆಮದು ಮಾಡಿಕೊಳ್ಳಲು ಪ್ರಾರಂಭಿಸಿದರು. ಕ್ವಿಂಕ್ವೆಫೋಲಿಯಸ್ಸಿನ ಆಮದು ಇಂದು ಕೂಡಾ ಭರದಿಂದ ನಡೆಯುತ್ತಿದೆ. ಚೀನಾದ ಕಾಡು ಜಿನ್‌ಸೆಂಗಿನಂತೆ ಈ ಅಮೇರಿಕನ್ ಜಿನ್‌ಸೆಂಗ್ ಕೂಡಾ ನಿರ್ನಾಮವಾಗುವ ಹೆದರಿಕೆ ಇದೆ. ತಮ್ಮ ದೇಶದ ಜಿನ್‌ಸೆಂಗನ್ನು ರಫ್ತು ಮಾಡುವುದನ್ನು ಅಮೇರಿಕೆಯಲ್ಲಿ ಪೂರ್ಣ ನಿಯಂತ್ರಿಸಲಾಗಿದೆ.

ಇದರ ಕೊರತೆಯನ್ನು ಪೂರೈಸಲು ಇಂದು ಕೊರಿಯಾ, ಚೀನಾ ಮತ್ತು ಜಪಾನ್ ದೇಶಗಳಲ್ಲಿ ಜಿನ್‌ಸೆಂಗ್ ಬೆಳೆಯುವುದನ್ನು ರಾಷ್ಟ್ರೀಯ ಯೋಜನೆ ಗಳಲ್ಲಿ ಹಮ್ಮಿಕೊಳ್ಳಲಾಗಿದೆ. ರಶಿಯಾದಲ್ಲೂ ಈ ಗಡ್ಡೆಯನ್ನು ಬೃಹತ್ ಪ್ರಮಾಣದಲ್ಲಿ ಬೆಳೆ ಬೆಳೆಸುತ್ತಿದ್ದಾರೆ. ಅಮೇರಿಕೆಯ ಮಧ್ಯ ವಿಸಕಾನ್ಸಿನ್ನಿನಲ್ಲಿ ಹದವಾದ ಸುಮಾರು ೩೪೦ ಹೆಕ್ಟೇರ್ ಭೂಮಿಯಲ್ಲಿ ಜಿನ್‌ಸೆಂಗ್ ಸಸಿಗಳನ್ನು ನೆಡುವ ಕೆಲಸ ನಡೆದಿದೆ. ೧೯೭೯ರಲ್ಲಿ ಅಮೇರಿಕೆಯಿಂದ ಸುಮಾರು ೧೬೦ ಮೆಟ್ರಿಕ್ ಟನ್ನಿನಷ್ಟು ಜಿನ್‌ಸೆಂಗ್ ಹಾಂಗ್‌ಕಾಂಗಿಗೆ ರಫ್ತು ಮಾಡಲಾಯಿತು. ಸಂಸ್ಕರಣೆಯ ನಂತರ ಇದರಲ್ಲಿನ ಹೆಚ್ಚಿನ ಭಾಗ ಪೂರ್ವ ಏಶಿಯಾಕ್ಕೆ ಸಾಗಿಸ ಲಾಗುತ್ತದೆ.

ಜಿನ್‌ಸೆಂಗ್ ಉತ್ತಮ ಗುಣಮಟ್ಟದ್ದೆಂಬುದನ್ನು ಅದರ ಗಡ್ಡೆಯ ಬಣ್ಣದಿಂದ ಗುರುತಿಸಲಾಗುತ್ತದೆ. ಒಣಗಿಸುವ ಮೊದಲು ಈ ಗಡ್ಡೆಯನ್ನು ಆವಿಯ ಮೂಲಕ ಹಾಯಿಸಿದಾಗ ಅದರ ಬಣ್ಣ ಕೆಂಪಾಗುತ್ತದೆ. ಬಣ್ಣ ಹೆಚ್ಚು ಗಾಢವೋ

[illegible] ಅದು ಸಾಧಾರಣ ಪ್ರಕ್ರಿಯೆಂದು ನಿರ್ಣಯಿಸುತ್ತಾರೆ. ಈ ವ್ಯವಹಾರದಲ್ಲಿ [illegible]. ಬಹಿರಂಗವಾದ [illegible] ಇವೆ. [illegible] "[illegible]" ([illegible]) [illegible] [illegible] [illegible] ಬಗ್ಗೆ [illegible] [illegible].

[illegible] [illegible] [illegible] ([illegible]) [illegible], [illegible], [illegible] [illegible] [illegible] [illegible] ಇವರ [illegible].

ಈ ಕಥೆಗೆ [illegible] [illegible] [illegible] ಜೊತೆಗೆ, [illegible] [illegible] ತ್ತದೆ.

ಗೋಪಾಲ ಆಶ್ರಿತ

[illegible] [illegible] [illegible] ಎಂದು [illegible] [illegible].

—[illegible]

ಅರ್ಬುದ ಆಕ್ರಮಿಸಿದಾಗ

ಸಾಮಾನ್ಯ ಶಸ್ತ್ರಚಿಕಿತ್ಸಕನಾಗಿ ಬಹುಮಟ್ಟಿಗೆ ಎಲ್ಲ ಬಗೆಯ ಅರ್ಬುದ ರೋಗಗಳ (ಕ್ಯಾನ್ಸರ್) ಪರಿಚಯವೂ ನನಗಾಗಿದೆ. ಕೆಲವು ರೋಗಿಗಳು ಸಣ್ಣ ಗಂತಿಗಳಿಂದಾಗಿಯೇ ಸತ್ತಿರುವುದನ್ನೂ ನಾನು ನೋಡಿದ್ದೇನೆ; ಇತರರು ಬೃಹದಾಕಾರದ ಗಂತಿಗಳೊಂದಿಗೆ ಬದುಕಿ ಉಳಿದಿರುವುದನ್ನೂ ಕಂಡಿದ್ದೇನೆ. "ಹೌದು, ಈ ಗಂತಿ ಕೇಡುಂಟುಮಾಡುವಂಥದು" ಎಂದು ಹೇಳಬೇಕಾಗಿ ಬಂದಾಗ, ನನ್ನ ಮಾತು ರೋಗಿಗಳ, ಕುಟುಂಬದವರ ಹಾಗೂ ಗೆಳೆಯರ ಮುಖದಲ್ಲಿ ಮೂಡಿಸಿದ ತಲ್ಲಣವನ್ನೂ ನಾನು ಕಣ್ಣಾರೆ ಕಂಡಿದ್ದೇನೆ.

ಅರ್ಬುದ ರೋಗಿಗಳೊಂದಿಗೆ ವ್ಯವಹರಿಸುವಾಗ ಶಸ್ತ್ರಚಿಕಿತ್ಸಕರು ವೃತ್ತಿಸಹಜವಾದ ತಾಳ್ಮೆಯನ್ನು ಮೆರೆಯಬೇಕಾಗುತ್ತದೆಯಾದರೂ ನೀವು ಅಥವಾ ನಿಮ್ಮ ಪ್ರೀತಿಪಾತ್ರರಾದವರು ಅದಕ್ಕೆ ತುತ್ತಾಗಿದ್ದೀರೆಂದು ತಿಳಿದಾಗ, ಆ ರೋಗ ಇನ್ನೇನು, ಹತ್ತಿರವೇ ಬರುತ್ತಿರುವ ಪ್ರಬಲ ಶತ್ರುವಿನಂತೆ ತೋರುತ್ತದೆ.

ಆ ಭಯಂಕರವಾದ ಹೇಳಿಕೆಯನ್ನು ನಾನೇ ಎರಡು ಬಾರಿ ಕೇಳಿದ್ದೇನೆ. ಮೊದಲನೆಯದು ಹತ್ತು ವರ್ಷಗಳ ಹಿಂದೆ—ನನ್ನ ಮೊದಲ ಹೆಂಡತಿ, ಮೇರಿ, ಎಂಟು ತಿಂಗಳ ಗರ್ಭಿಣಿಯಾಗಿದ್ದಾಗ ಲ್ಯೂಕೇಮಿಯಾ ರೋಗಕ್ಕೆ ಅಂದರೆ, ಬಿಳಿಯ ರಕ್ತಕಣಗಳು ಅಗಣಿತವಾಗಿ ವೃದ್ಧಿಯಾಗುತ್ತ ಹೋಗುವ ಒಂದು ಬಗೆಯ ಅರ್ಬುದ ರೋಗಕ್ಕೆ, ತುತ್ತಾಗಿದ್ದಾಳೆ ಎಂದು ತಿಳಿದಾಗ, ಎರಡನೆಯದು ಮೂರು ವರ್ಷಗಳಿಗೆ ಸ್ವಲ್ಪ ಹಿಂದೆ—ತೆರೆದ ಹೃದಯದ ಶಸ್ತ್ರಚಿಕಿತ್ಸೆಯ ನಾಲ್ಕು ತಿಂಗಳ ತರುವಾಯ ತೆಗೆದ ಕ್ಷ-ಕಿರಣ ಚಿತ್ರಗಳಲ್ಲೊಂದು ಆಕಸ್ಮಿಕವಾಗಿ ನನ್ನ ಎಡ ಶ್ವಾಸಕೋಶದಲ್ಲಿ ಅಸ್ಪಷ್ಟ ಛಾಯೆಯೊಂದನ್ನು ಸೆರೆಹಿಡಿದಾಗ.

ಪರ್‌ಪ್ಯೂರಾ ರೋಗದ ಚುಕ್ಕೆಗಳಂತೆ (ಅಂದರೆ, ಗುಂಡುಸೂಜಿಯ ತಲೆಯಷ್ಟು ಕಿರಿಯ ಆಕಾರದ ರಕ್ತಸ್ರಾವಗಳಿಂದಾದ ಚುಕ್ಕೆಗಳು) ತೋರುವ ಚಿಹ್ನೆಗಳನ್ನು ಮೇರಿಯ ತೋಳಿನಲ್ಲಿ ಗುರುತಿಸಿದ ಆ ಮೊಟ್ಟಮೊದಲ ಬೆಳಗ್ಗೆಯಂದೇ, ಆಕೆಯನ್ನು ಕೆಲವು ರಕ್ತಪರೀಕ್ಷೆಗಳಿಗಾಗಿ ಕಳಿಸಿಕೊಟ್ಟೆ. ಆಮೇಲೆ ನನ್ನ ಕಛೇರಿಯ ಫೋನ್ ಹೊಡೆದುಕೊಳ್ಳತೊಡಗಿತು. ಮಾತನಾಡುತ್ತಿದ್ದವರು

೧೯೬೧ರ ಜುಲೈ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಡಾ॥ ಜಾನ್ [illegible] ಅವರ 'ಮೈ ಮೇಜರ್ ಫೈಟ್ ವಿತ್ ಮಾರ್ಟಲ್ ಬ್ಯಾಟಲ್ಸ್' ಎಂಬ ಲೇಖನದ ಭಾವಾನುವಾದ.

ಡಾ॥ ಕೆನ್ ಬಟ್ಲರ್. ಟೊರಾಂಟೋ ನಗರದ ಸೈಂಟ್ ಮೈಕೆಲ್ ಆಸ್ಪತ್ರೆಯಲ್ಲಿನ ಆ ನನ್ನ ಸಹೋದ್ಯೋಗಿ ರಕ್ತಶಾಸ್ತ್ರ ವಿಭಾಗದ ಮುಖ್ಯಸ್ಥರೂ ಆಗಿದ್ದರು.

"ಜಾನ್, ಪರೀಕ್ಷೆಯ ಫಲಿತಾಂಶವನ್ನು ನಾನು ನಿನಗೆ ಹೇಳಬೇಕಾಗಿದೆ. ಬಿಳಿಯ ರಕ್ತಕಣಗಳ ಗಣನಾಂಕ ಕೇವಲ ೨೦,೦೦೦ ದಾಗಿದೆ. ಆದರೆ ರಕ್ತದ ಬಿಲ್ಲೆಗಳಲ್ಲಿ ಯಾವುದೇ ರಕ್ತಕಣಿಕೆಯೂ ನನಗೆ ಕಾಣುತ್ತಿಲ್ಲ. ಹಾಗಾಗಿ ನಾನು ಅಸ್ಥಿಮಜ್ಜೆಯ ಪರೀಕ್ಷೆಯನ್ನು ಮಾಡಬೇಕಾಗಿದೆ" ಎಂದು ಅವರು ಹೇಳಿದರು.

ನಾನು ಸ್ತಬ್ಧನಾದೆ. ಭಯಂಕರ ದುಃಸ್ವಪ್ನವೊಂದಿಗೆ ಆ ಮಾತುಗಳು ನನ್ನ ಕಿವಿಗೆ ಅಪ್ಪಳಿಸಿದವು.

ಆ ದಿನ ಮಧ್ಯಾಹ್ನ, ನಾನು ಬಿಳಿಯ ಕೋಟನ್ನು ಹೊರತೆಗೆದಿಟ್ಟೆ. ಆಗ ನೇರವಾಗಿ ಕೆನ್ನನ್ನು ಪ್ರಶ್ನಿಸಿದೆ: "ಕೆನ್, ಇದು ಲ್ಯುಕೇಮಿಯಾ ಅಲ್ಲ ತಾನೆ?"

"ನನ್ನ ಜಾನ್" ನಾನು ತಿಳಿದಂತೆ. "ಅದು ಕೆಟ್ಟದ್ದನ್ನೇ ಸೂಚಿಸುತ್ತದೆ. ಮೈಲೋಬ್ಲಾಸ್ಟಿಕ್ ಲ್ಯುಕೀಮಿಯಾ ಕಾಣುತ್ತಿದೆ. ರಕ್ತದ ಕಣಿಕೆಗಳು ತುಂಬ ಕಡಿಮೆ ಇರುವುದರಿಂದ. ರಕ್ತಸ್ರಾವದ ಅಪಾಯದ ಬಗ್ಗೆ ನಾವು ಚಿಂತಿತರಾಗಿದ್ದೇವೆ. ಅಲ್ಲದೆ, ಅದನ್ನು ಗುಣಪಡಿಸುವ ಔಷಧಿಗಳಿಂದ ನಿನಗೆ ಸೋಂಕು ತಗಲುವ ಪ್ರಸಂಗ, ಅದರ ಜೊತೆಗೆ ನೀನು ಅಪಾಯದಿಂದ ದೂರವಾಗುತ್ತೀಯೆ ಎಂದು ನಂಬಿದ್ದೇನೆ. ಆದ್ದರಿಂದ ಈಗಿಂದೀಗಲೇ ನೀನು ಆಸ್ಪತ್ರೆಗೆ ಸೇರಿಕೊಳ್ಳಬೇಕು ಎಂದು ಕೆನ್ ಆಗ್ರಹಿಸಿದರು."

ನನ್ನ ಈ ಎಲ್ಲ ವೈದ್ಯಕೀಯ ಜ್ಞಾನವೂ ಅದನ್ನು ನಂಬಲು ಸಿದ್ಧವಾಗಿರಲಿಲ್ಲ.

"ನಾನು ಪಾದ್ರಿಗಳನ್ನು ಕಾಣಲೆ?"

"ಹಾಗೆ ಮಾಡುವುದರಿಂದ ನಿನ್ನ ಮನಸ್ಸಿಗೆ ಸಮಾಧಾನವಾಗುವುದಾದರೆ, ಹಾಗೆ ಮಾಡುವುದೇ ಉತ್ತಮ."

ಮಾರನೆಯ ದಿನ ಬೆಳಗ್ಗೆ ಕೆನ್ ನನ್ನ ಮನೆಯಲ್ಲೇ ನನ್ನನ್ನು ದೂರವಾಣಿಯ ಮೂಲಕ ಸಂಪರ್ಕಿಸಿದರು. "ಜಾನ್ ಇವತ್ತು ಬೆಳಗ್ಗೆ ನೀನು ಬರುತ್ತೀಯೆ ತಾನೆ? ಸುಮಾರು ಹತ್ತುಗಂಟೆಯ ಹೊತ್ತಿಗೆ 'ಐಸಿ'ಯು ಬಳಿ ನಾನು ನಿನ್ನನ್ನು ನೋಡಬಯಸುತ್ತೇನೆ" ಎಂದು ಹೇಳಿದಾಗ ಅವರ ಧ್ವನಿ

ಸಂಯುತವೂ ವಸ್ತುಬದ್ಧವೂ ಆಗಿತ್ತು.

ಒಳ್ಳೆಯ ವೈದ್ಯನೆಂದೂ ದೂರವಾಣಿಯಲ್ಲಿ ಕೆಟ್ಟ ಸುದ್ದಿಯನ್ನು ತಿಳಿಸುವುದಿಲ್ಲ. ಆದ್ದರಿಂದ, ಕೆನ್ ನನಗೆ ಯಾವುದೋ ಭಯಂಕರವಾದ ಸುದ್ದಿಯನ್ನು ಹೇಳಲಿದ್ದಾರೆ ಎಂದು ನನ್ನ ಸಹಜ ಪ್ರವೃತ್ತಿ ನನಗೆ ಸೂಚಿಸಿತು. ನಿಂತಿದ್ದಂತೆಯೇ ನಿಟ್ಟುಸಿರು ಬಿಡುತ್ತಾ ಹೇಳಿಕೊಂಡೆ: "ಓ ದೇವರೇ, ಹಾಗಾಗದಿರಲಿ."

ಹತ್ತು ಗಂಟೆಯ ಹೊತ್ತಿಗೆ ಸರಿಯಾಗಿ ನಾನು ಡಾ| ಬಟ್ಲರ್ ಅವರನ್ನು ಕಂಡೆ. "ಏನಪ್ಪಾ ಅದು. ಕೆನ್?" ಎಂದು ಪ್ರಶ್ನಿಸಿದೆ.

"ಮೇರಿ ಸಹೋದರಿಯು ತೀವ್ರವಾದ ಲ್ಯೂಕೇಮಿಯಾ ರೋಗಕ್ಕೆ ತುತ್ತಾಗಿದ್ದಾಳೆಂಬ ಭಯ ನನಗುಂಟಾಗಿದೆ" ಎಂದು ಕೆನ್ ಉತ್ತರಿಸಿದರು.

ಕಣ್ಣೀರು ನನ್ನ ಮುಖವನ್ನು ತೊಳೆಯಿತು. ನಾನು ಸ್ವಸ್ಥಿತಿಗೆ ಮತ್ತೆ ಹಿಂದಿರುಗಿದ ಬಳಿಕ ಕೇಳಿದೆ: "ಆಕೆಯು ಬದುಕುವ ಸಂಭವ ಎಷ್ಟರಮಟ್ಟಿಗಿದೆ?"

"ಆಕೆಗೆ ರಕ್ತಪೂರಣೆ ಮಾಡದಿದ್ದರೆ, ಆರರಿಂದ ಎಂಟು ವಾರಗಳವರೆಗೆ ಮಾತ್ರ ಆಕೆ ಬದುಕಿರಬಹುದು."

ಅವರ ಮುನ್ಸೂಚನೆ ಆಶ್ಚರ್ಯಕರವೆನಿಸುವಷ್ಟು ಕರಾರುವಾಕ್ಕಾಗಿ ಪರಿಣಮಿಸಿತು. ಗಂಡು ಮಗು ಉಳಿದುಕೊಂಡಿತು. ಏಕೆಂದರೆ ಲ್ಯೂಕೇಮಿಯಾ ಜರಾಯುವಿನ ಅಡ್ಡಗೋಡೆಯನ್ನು ಭೇದಿಸಿಕೊಂಡು ಹೋಗಿ ಮಗುವನ್ನು ಸೋಂಕುವುದಿಲ್ಲ.

ಈ ಎರಡೂ ಸ್ಥಿತಿಗಳಲ್ಲಿ ಇದ್ದುದರಿಂದ, ರೋಗಕ್ಕೆ ತುತ್ತಾಗಿರುವ ವ್ಯಕ್ತಿಗಿಂತಲೂ ಆತನ ಕುಟುಂಬದವರಿಗೆ "ಸುದ್ದಿಯನ್ನು ಸ್ವೀಕರಿಸುವುದು" ತುಂಬ ಕಷ್ಟವಾಗುತ್ತದೆಂಬುದು ನನಗೆ ಗೊತ್ತಿದೆ. ಇಷ್ಟಾಗಿಯೂ ರೋಗಿಯಾಗಿ, ಬೇರೆ ಯಾವುದೇ ರೋಗಕ್ಕಿಂತ ಅರ್ಬುದ ರೋಗಕ್ಕೆ ತುತ್ತಾಗಿದ್ದೇವೆಂಬುದನ್ನು ತಿಳಿದುಕೊಳ್ಳುವುದು ತೀರ ಹೃದಯವಿದ್ರಾವಕವಾದ ಸಂಗತಿ ಎಂಬುದು ನನಗೆ ಗೊತ್ತು. ಉದಾಹರಣೆಗೆ, ತೆರೆದ ಹೃದಯದ ಶಸ್ತ್ರಚಿಕಿತ್ಸೆ ನನಗೆ ಅಗತ್ಯವಾಗಿದೆ ಎಂಬುದನ್ನು ಕಂಡುಕೊಂಡಾಗ, ನನಗದು ಆತಂಕದಲ್ಲಿ ಬಹುಮಟ್ಟಿಗೆ ದೂರವಾಗಿತ್ತು. ದೋಷವನ್ನು ಸರಿಪಡಿಸುವ ಹಾಗೂ ಮತ್ತೆ ನನಗೆ ಒಳ್ಳೆಯ ಆರೋಗ್ಯವನ್ನು ತಂದುಕೊಡುವ ಆ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡರೆ ಆಯಿತು ಎಂಬ ಭಾವನೆ ನನ್ನಲ್ಲಿ ಮೂಡಿತ್ತು. ಆದರೆ, ನನಗೆ ಅರ್ಬುದದ ಸೋಂಕು ತಗಲಿದೆ ಎಂಬುದನ್ನು ಕಂಡುಕೊಳ್ಳಲು ನಾನು ಎಷ್ಟರಮಟ್ಟಿಗೂ ಸಿದ್ಧನಾಗಿರಲಿಲ್ಲ. ನನ್ನ ಎದೆಯ ಬಲಭಾಗದಲ್ಲಿ ಶಸ್ತ್ರಕ್ರಿಯೆಯ ಛೇದನ

ನಡೆದಿದ್ದ ಭಾಗದಲ್ಲಿ ನೋವಿತ್ತು. ಆದ್ದರಿಂದ, ಬಾತುಕೋಳಿಯ ಬೇಟೆಗೆ ಒಂದು ವಾರದವಧಿಗೆ ಹೋಗಬರುವುದಕ್ಕೆ ಕೆಲವೇ ದಿವಸಗಳ ಹಿಂದೆ ಎದೆಯ ಆ ಭಾಗದ ಕ್ಷ-ಕಿರಣ ಚಿತ್ರವೊಂದನ್ನು ತೆಗೆಯುವಂತೆ ಆದೇಶ ನೀಡಿದ್ದೆ. ಆಮೇಲೆ ಆ ವಿಚಾರವನ್ನು ಸಂಪೂರ್ಣವಾಗಿ ಮರೆತುಬಿಟ್ಟಿದ್ದೆ.

ನಾನು ಹಿಂದಿರುಗಿದ ಮಾರನೆಯ ದಿವಸ ಬೆಳಗ್ಗೆ ಅಂದರೆ, ಅಕ್ಟೋಬರ್ ೨೮, ೧೯೭೫ರಂದು ಬೆಳಗ್ಗೆ–ನನ್ನ ಹೃದಯದ ಶಸ್ತ್ರಚಿಕಿತ್ಸೆಯನ್ನು ನಡೆಸಿದ್ದ ಡಾ|| ಕ್ಲೀರ್‌ಬೇಕರ್ ಅವರಿಂದ ನನಗೊಂದು ಕರೆ ಬಂದಿತು: "ಜಾನ್ ನಾನು ನಿನ್ನ ಎದೆಯ ಕ್ಷ-ಕಿರಣ ಚಿತ್ರದ ಬಗ್ಗೆ ಹೇಳುತ್ತಿದ್ದೇನೆ. ಬ್ರೂಸ್ ಬರ್ಗ್ ಇನ್ನೂ ಕೆಲವು ಚಿತ್ರಗಳನ್ನು ತೆಗೆದುಕೊಳ್ಳಬಯಸುತ್ತಾರೆ." ಬ್ರೂಸ್ ನಮ್ಮ ಪ್ರಮುಖ ಕ್ಷ-ಕಿರಣ ತಜ್ಞರಾಗಿದ್ದರು.

"ಅದು ಏನನ್ನು ತೋರಿಸಿದೆ?"

"ಏನೂ ಇಲ್ಲ. ಎಡಭಾಗದ ಮೇಲಿನ ಹಾಲೆಯಲ್ಲಿ ಒಂದು ಸಣ್ಣ ಕಲೆಯಿದೆ. ಬಹುಶಃ ಅದು ಶಸ್ತ್ರಕ್ರಿಯೆ ಅನಂತರ ಉಂಟಾಗಿರುವಂಥದು. ನಿನಗೆ ಇವತ್ತು ಬೆಳಗ್ಗೆ ಬರಲು ಸಾಧ್ಯವಾಗುವುದಾದರೆ, ಅವರು ಆ ಚಿತ್ರಗಳನ್ನು ತೆಗೆದು ಕೊಳ್ಳುತ್ತಾರೆ."

ಆ ಕರೆಯ ತೊಡಕುಗಳು ನನ್ನ ಹೃದಯದಲ್ಲಿ ತುಂಬಿಕೊಳ್ಳತೊಡಗಿದಂತೆ, ನಾನು ಕಂಪಿಸತೊಡಗಿದೆ. ಕಳೆದ ನಾಲ್ಕು ತಿಂಗಳಲ್ಲಿ ನಾನು ಅನೇಕ ಕ್ಷ-ಕಿರಣ ಚಿತ್ರಗಳನ್ನು ತೆಗೆಸಿಕೊಂಡಿದ್ದೆ. ಆದರೆ, ಯಾವುದೂ ಏನನ್ನೂ ತೋರಿಸಿರಲಿಲ್ಲ. ಇದೊಂದು ಮಾತ್ರ ಏಕೆ ಹೀಗಾಯಿತು? ನನಗೆ ತೊಂದರೆ ಕೊಡುತ್ತಿದ್ದುದು ಎದೆಯ ಬಲಭಾಗವೇ ಹೊರತು ಎಡಭಾಗವಲ್ಲ. ಹೊಸ ಸಮಸ್ಯೆಯೊಂದು ಹುಟ್ಟಿಕೊಂಡಿದೆ ಎಂದು ನನಗೆ ಖಾತರಿಯಾಯಿತು.

ಬ್ರೂಸ್ ತಮ್ಮ ಕಛೇರಿಯ ವೀಕ್ಷಣ ಸಂಪುಟದ ಮೇಲೆ ನನ್ನ ಕ್ಷ-ಕಿರಣ ಚಿತ್ರಗಳನ್ನು ಹರಡಿದಾಗ, ನನ್ನ ಜೀವಮಾನದ ಅತ್ಯಂತ ಭಗ್ನಕಾರಕ ಸಂಗತಿ ಗಳಲ್ಲಿ ಒಂದಕ್ಕೆ ನಾನೇ ಸಾಕ್ಷಿಯಾಗಿದ್ದೆ–ನನ್ನ ಎಡಶ್ವಾಸಕೋಶದಲ್ಲಿ ಅರ್ಬುದದ ಗಂತಿಯೊಂದನ್ನು ಬೆಳೆದಿದ್ದುದನ್ನು ನಾನೇ ಕಣ್ಣಾರೆ ನೋಡುತ್ತಿದ್ದೆ.

ನನಗೆ ಉಸಿರು ಸಿಕ್ಕಿಕೊಂಡಂತಾಯಿತು. ಮಹಡಿಯ ಮೆಟ್ಟಿಲುಗಳನ್ನು ದಡದಡನೆ ಇಳಿದು, ರಸ್ತೆಯನ್ನು ದಾಟಿ ಸೈಂಟ್ ಮೈಕೇಲ್ ಪ್ರಾರ್ಥನಾ ಮಂದಿರಕ್ಕೆ ಧಾವಿಸಿದೆ. ಪೀಠಾವರಣವೊಂದರಲ್ಲಿ ಮಂಡಿಯೂರಿ ಕುಳಿತಾಗ ಪ್ರಾರ್ಥನೆ ಮಾಡಲೂ ಶಕ್ತಿಇಲ್ಲದವನಾಗಿದ್ದೆ. ನಿರಾಶೆ ಮತ್ತು ಆತ್ಮವ್ಯಥೆ

ತುಂಬಿಬಂದಿದ್ದವು. ಸೇಂಟ್ ಮೈಕೇಲ್ ಪ್ರಾರ್ಥನಾ ಮಂದಿರದ ಗಂಟೆಗಳು ಮೊಳಗತೊಡಗಿದುವು. ಜಾನ್‌ಡನ್ನನ ಪಂಕ್ತಿಗಳನ್ನು ನಾನು ನೆನಪು ಮಾಡಿ ಕೊಂಡೆ: "....ಯಾರಿಗಾಗಿ ಗಂಟೆ ಮೊಳಗುತ್ತಿದೆ ಎಂಬುದನ್ನು ತಿಳಿಯಲು ಯಾರನ್ನೂ ಕೇಳಬೇಡ; ಅದು ಮೊಳಗುತ್ತಿರುವುದು ನಿನಗಾಗಿಯೇ..."

ಅರ್ಬುದದಂಥ ರೋಗಕ್ಕೆ ತುತ್ತಾದವರ ಸಂಗತಿ ತಿಳಿದ ಒಡನೆ ಉಂಟಾಗುವ ಮೊದಲ ಆಘಾತದಿಂದ ಚೇತರಿಸಿಕೊಂಡ ಬಳಿಕ, ಸಾಮಾನ್ಯ ಜನರ ಆಲೋಚನೆ ಎಂದರೆ "ಇದು ಎಷ್ಟು ಗಂಭೀರವಾಗಿದೆ?" "ನಾನು ಇನ್ನೆಷ್ಟು ಕಾಲ ಬದುಕಲಿದ್ದೇನೆ?" ಎಂಬುದನ್ನು ತಿಳಿದುಕೊಳ್ಳುವುದು. ರೋಗಿ ಯನ್ನು ಕುಟುಂಬದವರು ಗಂಭೀರವಾದ ಇಂಥ ವಿಧ್ವಂಸಕ ಸುದ್ದಿಯನ್ನು ಸ್ವೀಕರಿ ಸಲು ಸಾಧ್ಯವಿಲ್ಲ ಅನೇಕರು ಸಂಘರ್ಷಿಸುತ್ತಾರೆ.

ಅಷ್ಟೇ ಅಲ್ಲ. ನನ್ನ ರೋಗಿಗಳಿಗೆ ಇಂಥ ಸುದ್ದಿಗಳನ್ನು ತಿಳಿಸಿದಾಗ ಅವರು ತೋರಿದಂಥ ಧೈರ್ಯವನ್ನು ಮತ್ತೆ ಮತ್ತೆ ಕಂಡಾಗ ನಾನು ಒಮ್ಮೊಮ್ಮೆ ಆಶ್ಚರ್ಯಗೊಂಡಿದ್ದೇನೆ. 'ನಾನು ಅಷ್ಟು ಧೈರ್ಯಶಾಲಿಯಾಗಿ ಇರಬಲ್ಲೆನೆ?" ಎಂದು ಅನೇಕ ವೇಳೆ ನಾನೂ ಬೆರಗಾಗಿದ್ದೇನೆ. ಅಂದರೆ, ನೀವು ಆಘಾತದಿಂದ ಚೇತರಿಸಿಕೊಳ್ಳತೊಡಗಿದಂತೆ, ನಿಮ್ಮ ಬಗ್ಗೆ ನೀವು ವಿಷಾದಿಸುವುದನ್ನು ಕಡಿಮೆ ಮಾಡತೊಡಗಿದಂತೆ, ನೀವು ನಿಜವಾಗಿಯೂ ಅರ್ಬುದದ ವಿರುದ್ಧ ನಿಮ್ಮ ಯುದ್ಧವನ್ನು ಆರಂಭಿಸತೊಡಗುತ್ತೀರಿ. "ನೀವು ಮಾಡಬೇಕಾದುದನ್ನೇ ಮಾಡಿ, ಡಾಕ್ಟರ್. ನಾನು ಹೆದರುವುದಿಲ್ಲ" ಎಂದು ರೋಗಿಗಳು ಹೇಳು ವುದನ್ನು ತೃಪ್ತರಾದ ನಾವು ಕೇಳುವಾಗ ನಿಜವಾಗಿಯೂ ಈ ಸ್ಥಿತಿ ಉತ್ತಮವಾಗಿ ಇರುತ್ತದೆ.

ಒತ್ತಡಕ್ಕೊಳಗಾದಾಗ ತೋರುವ ಗಾಂಭೀರ್ಯವೇ ಧೈರ್ಯ ಎಂದು ಹೆಮಿಂಗ್‌ವೇ ಒಂದೆಡೆ ಬರೆದಿದ್ದಾನೆ. ಅಂದರೆ, "ಬಹುತೇಕವಾಗಿ ಧೈರ್ಯದ ಪರೀಕ್ಷೆ ಆಗುವುದು ಸಾಯುವುದರಲ್ಲಲ್ಲ, ಬದುಕಿರುವುದರಲ್ಲಿ" ಎಂದು ಹೇಳಿ ರುವ ಹದಿನೆಂಟನೆಯ ಶತಮಾನದ ಇಟಾಲಿಯನ್ ನಾಟಕಕಾರ ವಿಟ್ಟೋರಿಯೋ ಅಲ್‌ಫಿಯೆರಿಯ ಚಿಂತನೆಯಲ್ಲಿ ನಾನು ಒಂದಾಗಬಯಸುತ್ತೇನೆ. ಏಕೆಂದರೆ, ಅರ್ಬುದದೊಡನೆ ಬಾಳುವುದು ಒತ್ತಡಕ್ಕಿಂತಲೂ ಹೆಚ್ಚಿನ ಸಂಗತಿಯಾಗುತ್ತದೆ. ಅದು ಭಯವನ್ನು ಹುಟ್ಟಿಸುತ್ತದೆ, ಅದರೊಡನೆ ಬಾಳುವುದು; ಅದನ್ನು ಎದುರಿಸಿ ಹೋರಾಡುವುದು—ಇದೀಗ ನಿಜವಾಗಿಯೂ ಧೈರ್ಯ.

ಅರ್ಬುದದ ಚಿಕಿತ್ಸೆಯಲ್ಲಿ ಅತ್ಯಂತ ಪರಿಣಾಮಕಾರಿಯಾದ ವಿಷಯವೆಂದರೆ

ಭರವಸೆ. ಯಾವುದೇ ಹಂತದಲ್ಲಿಯಾಗಲಿ, ಚಿಕಿತ್ಸೆಗೆ ಒಳಪಡಿಸಲಾಗದ ಯಾವುದೇ ಬಗೆಯ ಅರ್ಬುದವೂ ಇಲ್ಲ. ರೋಗಿಯಲ್ಲಿ ಭರವಸೆಯನ್ನು ಮೂಡಿಸುವ ಮೂಲಕ ಈ ರೋಗಕ್ಕೆ ವಿರುದ್ಧ ಹೋರಾಡುವ ಇಚ್ಛಾಶಕ್ತಿ ಮನೋಧರ್ಮವನ್ನು ಮೂಡಿಸುವಲ್ಲಿ ನಾವು ನೆರವಾಗಬಹುದು. ಅನಾವಶ್ಯಕ ವಾದುದು, ಚಿಕಿತ್ಸೆ ಮಾಡದು ಎಂದೇ? ಇರಬಹುದು. ಆದರೆ, ಚಿಕಿತ್ಸೆ ಪರಿಣಾಮ ಕಾರಿಯಾಗಬೇಕಾದರೆ, ಅದು ಆರಂಭದ ಚಿಕಿತ್ಸೆಯ ಅಂಗವಾಗಿ ಪ್ರಾರಂಭಿಸ ಬೇಕೆಂದು ಅನೇಕ ವೈದ್ಯರು ಭಾವಿಸುತ್ತಾರೆ.

ಸುಂದರಿಯೂ ಸೌಜನ್ಯವತಿಯೂ ಆದ ಇಬ್ಬರು ಮಕ್ಕಳನ್ನು ಹಡೆದ ಆನಂದ, ದಾಂಪತ್ಯದ ಸುಖ ಹಾಗೂ ಎಂಟು ವರ್ಷ ಪ್ರೀತಿಯನ್ನು ಪಡೆಯುವ ಭಾಗ್ಯ—ಇವೆಲ್ಲ ನನ್ನದಾಗಿದ್ದುವು. ನನ್ನ ಕೆಲಸ ಸಹಜವಾಗಿ ಸವಾಲಿನ ಸ್ವರೂಪ ವುಳ್ಳದೂ ತೃಪ್ತಿಯನ್ನುಂಟುಮಾಡುವಂಥದೂ ಆಗಿತ್ತು. ನಾನು ಯಾವಾಗಲೂ ಸಂಗೀತದ ಹಾಗೂ ಪುಸ್ತಕಗಳ ಮತ್ತು ಬ್ಯಾಲೆನೃತ್ಯ ಹಾಗೂ ನಾಟಕಗಳ ಪ್ರೇಮಿಯಾಗಿದ್ದೆ. ವ್ಯಾಯಾಮ, ಟೆನ್ನಿಸ್ ಹಾಗೂ ಗಾಲ್ಫ್ ಆಟಗಳು, ಬೇಟೆ ಹಾಗೂ ಮೀನು ಹಿಡಿಯುವಿಕೆ ನನ್ನ ಹವ್ಯಾಸಗಳಾಗಿವೆ. ಉತ್ತಮ ಆಹಾರ ಪದಾರ್ಥಗಳಿಂದ ಹಾಗೂ ದ್ರಾಕ್ಷಾರಸದ ಹಾಜರಿಯಿಂದ ನನ್ನ ಊಟದ ಮೇಜು ಯಾವಾಗಲೂ ಕಂಗೊಳಿಸುತ್ತಿತ್ತು. ನನ್ನ ಮನೆ ಬೆಚ್ಚನೆಯ ಮನೆಯಾಗಿತ್ತು; ಆನಂದದ ನೆಲೆಯಾಗಿತ್ತು.

ಆದರೆ, ನನ್ನ ಸಾವು ನಿಶ್ಚಿತವಾಗಿದ್ದುದರ ಅರಿವು ನನಗುಂಟಾದ ಮೇಲೆ, ನನ್ನ ಆಲೋಚನೆಗಳು ಬದಲಾದುವು. "ನಿನ್ನ ಬಾಳಿನ ಉಳಿದ ದಿನಗಳಲ್ಲಿ ಇದು ಮೊದಲ ದಿನ" ಎಂಬಂಥ ಹೇಳಿಕೆಗಳಲ್ಲಿ ಒಂದೊಂದು ಪದಕ್ಕೂ ನಿಜವಾದ ಅರ್ಥ ಇದೆಯೆಂದು ತೋರುತ್ತಿತ್ತು. ಸೂರ್ಯೋದಯ, ಪ್ರಶಾಂತವಾದ ಹಗಲು, ಹೂವುಗಳ ಸೌಂದರ್ಯ, ಹಕ್ಕಿಯ ಹಾಡು—ಇವೆಲ್ಲವುಗಳ ಬಗೆಗಿನ ಸಂವೇದನೆ ತುಂಬ ತೀವ್ರತರವಾಗಿರುತ್ತಿತ್ತು.

ಸರಾಸರಿ ಆಯುಷ್ಯದ, ಪ್ರಯತ್ನವಿಲ್ಲದ ಹಾಗೂ ನೋವಿಲ್ಲದ ಸಾವು, ನೋವಿಲ್ಲದ ನಿಧಾನದ, ಸಂಪೂರ್ಣವಾದ ಹಾಗೂ ಸುಖದ ಸಾವ ನಿದ್ರೆಯ ಆನಂದದ ಬಗ್ಗೆ ಅದೆಷ್ಟು ಸಾರಿ ತಾನೆ ನಾವು ಆಲೋಚಿಸಿದ್ದೇವೆ? ಬಾಳು ಕೊನೆಗೊಳ್ಳುವುದು ಖಚಿತವೆಂದು ತಿಳಿದಾಗ, ಜೀವನ ಎಷ್ಟು ಅಮೂಲ್ಯವಾದುದೆಂಬುದನ್ನು ನಾವು ಮನಗಾಣುತ್ತೇವೆ.

ನಾನು ರೋಗಗ್ರಸ್ತನಾದ ಮೇಲೆ, ಈ ಮೊದಲು ನಾನು ಮುಂದೂಡಿದ್ದ

ಅನೇಕ ಕೆಲಸಗಳನ್ನು ಮತ್ತೆ ಕೈಗೆತ್ತಿಕೊಂಡೆ. ನಿವೃತ್ತಿಯ ಅನಂತರ ಓದಬೇಕೆಂದು ತೆಗೆದಿರಿಸಿದ್ದ ಪುಸ್ತಕಗಳನ್ನು ಓದಿಮುಗಿಸಿದೆ. 'ಶಸ್ತ್ರಚಿಕಿತ್ಸೆಯ ಕಲೆ' ಎಂಬ ಹೆಸರಿನ ಒಂದು ಪುಸ್ತಕವನ್ನು ಬರೆದು ಮುಗಿಸಿದೆ.

ನನ್ನ ಪತ್ನಿ ಮ್ಯಾಡಲೀನ್ ಮತ್ತು ನಾನು ಹೆಚ್ಚು ಹೆಚ್ಚು ರಜಾದಿನಗಳನ್ನು ಬಳಸಿಕೊಳ್ಳತೊಡಗಿದೆವು. ನಾವು ತಪ್ಪದಂತೆ ಟೆನಿಸ್ ಆಡತೊಡಗಿದೆವು. ಮೀನು ಹಿಡಿಯಲು ಮಕ್ಕಳನ್ನು ಕರೆದುಕೊಂಡು ಹೋಗತೊಡಗಿದೆವು. ಕಳೆದ ಕೆಲವು ವರ್ಷಗಳತ್ತ ಮರುನೋಟ ಬೀರಿದಾಗ, ನನಗೆ ಅರ್ಬುದದ ಸೋಂಕು ತಗುಲಿದಂದಿನಿಂದ ಈಚೆಗೆ, ಅನೇಕ ರೀತಿಗಳಲ್ಲಿ ಇಡೀ ಒಂದು ಜೀವಮಾನವನ್ನೇ ಕಳೆದಿದ್ದೇನೆ ಎಂದು ನನಗೆ ತೋರುತ್ತದೆ. ಬಹಾಮಾ ದ್ವೀಪದಲ್ಲಿ ಕಳೆದ ಬಾರಿ ರಜಾದಿನಗಳನ್ನು ಕಳೆದಂದು ಸಮುದ್ರ ತೀರದಲ್ಲಿ ನಡೆಯುತ್ತಿರುವಾಗ ಕಿರು ತೆರೆಗಳು ನನ್ನ ಪಾದಗಳನ್ನು ತೊಳೆಯುತ್ತ ಸಾಗಿದಾಗ, ಕಿರುಪ್ರಮಾಣದಲ್ಲಿಯೇ ಆದರೂ ವಿಶ್ವದ ಒಂದು ಭಾಗ ಮರಳಿನ ಕಣದೋಪಾದಿಯಲ್ಲಿ ಆ ಸಮುದ್ರ ತೀರದಲ್ಲಿ ಇದ್ದಂತೆ ನನಗೆ ಭಾಸವಾಯಿತು.

ನನ್ನ ವೃತ್ತಿಯ ಪ್ರಮಾಣವನ್ನು ನಾನು ಸಂಕುಚಿತಗೊಳಿಸಬೇಕಾಯಿತಾದರೂ ನನ್ನ ರೋಗಿಗಳೊಂದಿಗೆ ನಿಕಟ ಅನುಭೂತಿ ಏರ್ಪಟ್ಟಿದ್ದಂತೆ ನನಗೆ ತೋರಿತು. ತೀವ್ರತರ ಚಿಕಿತ್ಸಾ ವಿಭಾಗದೊಳಕ್ಕೆ ನಡೆದಾಗ ಗಂಭೀರವಾದ ಭಾವನೆಯೊಂದು ಮೂಡುತ್ತಿತ್ತು—ನಾನು ಒಮ್ಮೆ ಅಲ್ಲಿ ರೋಗಿಯಾಗಿದ್ದೆ ಎಂಬುದು ನೆನಪಾಗುತ್ತಿತ್ತು. ಅರ್ಬುದ ರೋಗ ಆಕ್ರಮಿಸಿಕೊಂಡಿದೆ ಎಂಬುದನ್ನು ತಿಳಿದುದರ ಫಲವಾದ ಬೇಗುದಿಯ ಬಳಿಕವೂ ಜೀವನವನ್ನು ಆನಂದಿಸುವುದು ಸಾಧ್ಯವೆಂಬುದನ್ನು ಅರಿತಂದಿನಿಂದ, ನನ್ನ ಅರ್ಬುದ ರೋಗಿಗಳನ್ನು ಸಂತೈಸುವುದು ವಿಶೇಷ ತೃಪ್ತಿ ನೀಡುವಂಥ ಸಂಗತಿಯಾಗಿತ್ತು. 'ತಣ್ಣನೆಯ ಬೆವರ್ ಬರಿಸಿತ್ತೆ' ಎಂದು ಸಂಪೂರ್ಣ ಧ್ವನಿಸಾರದ ಕೊಠಡಿಗೆ ಒಳಗಾದ ನನ್ನ ರೋಗಿಯೊಬ್ಬನನ್ನು ನೋಡಿ, ಆತನಿಗೆ ಇದನ್ನು ತಂದುಕೊಡಲು ಹೋದಾಗ, ಆತನ ಕಣ್ಣಿನಲ್ಲಿ ಮಿಂಚಿದ ಬೆಳಕನ್ನು ಕಂಡಾಗ ನನ್ನಲ್ಲಿ ಸಂತೃಪ್ತಿಯ ಭಾವನೆ ಮೂಡಿತು.

ಭೂಮಿಯ ಮೇಲಿನ ನಮ್ಮ ಬಾಳುವೆಯ ಅವಧಿ ಬ್ರಹ್ಮಾಂಡದಲ್ಲಿನ ನಿರವಧಿಯಾದ ಕಾಲದ ಒಂದು ಅಲ್ಪಾಲ್ಪ ಭಾಗವಾಗಿದೆ ಎಂಬುದನ್ನು, ಮನಗಂಡರೆ, ವರ್ಷಗಳ ಲೆಕ್ಕದಲ್ಲಿ [illegible] ನಮ್ಮ [illegible] ಮುಖ್ಯವಾಗಲಾರದು. [illegible] ಪ್ರಮಾಣದ [illegible]

ಭಾಗ್ಯ [illegible]? [illegible] ಅಭ್ಯಾಸ[illegible] [illegible], ಅದು [illegible] ನಾಜೂಕಾದುದೇ ಸರಿ.

[illegible] ನಿಶ್ಚಿತತೆ[illegible] [illegible] —ಇವೆಲ್ಲ ಬರುತ್ತ [illegible]. [illegible], [illegible] ಅಲ್ಲವೆ?

[illegible] ಎಂದು ನಾನು ನಂಬಿದ್ದೇನೆ. [illegible] ಜೀವನ[illegible] ಎಂದು ನಾನು ನಂಬಿದ್ದೇನೆ. ನನ್ನ ಧಾರ್ಮಿಕ[illegible], [illegible] ನಾನು "ತಂದೆಯ ಬಳಿಗೆ ಹಿಂದಿರುಗುತ್ತೇನೆ" ಎಂದು ನಂಬಿದ್ದೇನೆ.

[illegible] ಅನುಭವ, [illegible] ದೃಷ್ಟಿಯಿಂದ ಅದು [illegible] ಎಂದು ನಾನು ನಂಬಿದ್ದೇನೆ; ನಾನು ನನ್ನ ಹಿಂದೆ ಬಿಟ್ಟು ಹೋಗುತ್ತಿರುವ ನನ್ನ ತಾಯಿ, ಸೋದರ, ಪತ್ನಿ, ಮಕ್ಕಳು ಮತ್ತು ಪ್ರಿಯ ಸ್ನೇಹಿತರ ನೆನಪಿನಲ್ಲಿ ನನ್ನ ಅನುಭವ ಉಳಿಯುತ್ತದೆಂದು ನಾನು ನಂಬಿದ್ದೇನೆ. ನನಗೆ ಪ್ರಿಯ[illegible] ನನ್ನ [illegible] ನಾನು [illegible] ತ್ತೇನೆಂದು [illegible] ಆ ದೇವರ [illegible] ನೋಡಲು ಸಾಧ್ಯವಾಗುತ್ತದೆಂದು ನಂಬಿದ್ದೇನೆ.

ಪ್ರಧಾನ್ ಗುರುದತ್ತ

[illegible] ಹೆಚ್ಚಾಗಿರುವುದಿಲ್ಲ.

—ಅಲೆಕ್ಸಾಂಡರ ಡುಮಾ

ಕಾರ್ಯ ಮಾಡುವಾಗ ದಕ್ಷನಾಗಿರು. ಮಾತನಾಡುವಾಗ ಎಚ್ಚರದಿಂದಿರು. ಯೋಚಿಸುವಾಗ ದೂರ ದೃಷ್ಟಿಯಿಂದಿರು.

—ಮಾರ್ಕ್ಸ್

ಜನಗಣತಿಯ ಮಹತ್ವ

ಜನಗಣತಿಯೇ ಜನಸಂಖ್ಯೆಗೆ ಸಂಬಂಧಿಸಿದ ಸೂಚನೆಗಳ ಪ್ರಧಾನ ಆಕರ. ಆದ್ದರಿಂದ ಪ್ರಪಂಚದ ಯಾವುದೇ ಭಾಗದಲ್ಲಿರುವ ಜನಸಂಖ್ಯೆಯನ್ನು ನಿರ್ಧರಿಸುವ ವಿಚಾರಧಾರೆ ಅತ್ಯಂತ ಪ್ರಾಚೀನವಾದುದು. ಜನಗಣತಿ ಮಾಡುವ ಪದ್ಧತಿ ಬಹುಶಃ ಮಾನವ ನಾಗರಿಕತೆಯಷ್ಟೇ ಪ್ರಾಚೀನವಾದುದು. ಆದರೆ ೧೯ನೆಯ ಶತಮಾನದಲ್ಲಿ ಜನಗಣತಿಗೆ ಸಂಬಂಧಿಸಿದ ಆಧುನಿಕ ಮತ್ತು ವೈಜ್ಞಾನಿಕ ವಿಚಾರಧಾರೆ ಬೆಳಕಿಗೆ ಬಂದಿತು. ಇಂದು ಭಾರತ ಮತ್ತು ಚೀನದಲ್ಲಿಷ್ಟೇ ಅಲ್ಲ. ಪ್ರಪಂಚದ ಅನೇಕ ದೇಶಗಳಲ್ಲಿ ಜನಸಂಖ್ಯೆಯ ಸಮಸ್ಯೆ ಗಂಭೀರವೂ ಜ್ವಲಂತವೂ ಆದ ಸಮಸ್ಯೆಯಾಗಿ ಪರಿಣಮಿಸಿದೆ.

ಇಂದು ಜನಗಣತಿಯ ಮಹತ್ವ ಅತ್ಯಂತ ವ್ಯಾಪಕವಾಗಿದೆ. ದೇಶದ ಮಹತ್ವಪೂರ್ಣವಾದ ಯಾವುದೇ ಸಾಮಾಜಿಕ ಆರ್ಥಿಕ ಮತ್ತು ರಾಜನೈತಿಕ ಕಾರ್ಯವೇ ಆಗಲಿ ಜನಗಣತಿಯ ಹೊರತು ಪೂರ್ತಿಯಾಗಲಾರದು. ಜನಗಣತಿಯಿಂದ ದೊರೆತ ಅಂಕಿಅಂಶಗಳ ಸಹಾಯದಿಂದ ನಮಗೆ ಜನಸಂಖ್ಯೆಯ ಮೇಲೆ ಪ್ರಭಾವ ಬೀರುವಂಥ ವಿವಿಧ ಅಂಶಗಳಾದ ಜನನದರ, ಮರಣದರ ಮತ್ತು ಪ್ರವಾಸನದ ಜೊತೆಜೊತೆಗೆ ಲಿಂಗಾನುಪಾತ, ವೃತ್ತಿ, ನಿಯೋಜನೆ, ಸಂಚಾರ ಮತ್ತು ಸಂಚಾರ-ವಿಚಾರ, ವಸತಿ ವ್ಯವಸ್ಥೆ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳು ಮತ್ತು ಕೃಷಿ ವಿಕಾಸ ಮುಂತಾದುವನ್ನು ತಿಳಿಯಲು ಸಹಾಯ ದೊರೆಯುತ್ತದೆ. ಮೇಲೆ ಹೇಳಿದ ಎಲ್ಲ ಅಂಶಗಳ ವಿಶ್ಲೇಷಣೆಯ ಆಧಾರದ ಮೇಲೆ ನಾವು ದೇಶದ ಸಮೃದ್ಧಿಯ ಬಗೆಗೆ ಅಂದಾಜು ಮಾಡಬಹುದು.

ಜನಗಣತಿಯ ಮೂಲಕ ಮಾನವಿಕ ವಿಜ್ಞಾನಗಳಿಗೆ ಸಂಬಂಧಿಸಿದಂತೆ ಹೊಸ ಹೊಸ ವಿಷಯ ಸಾಮಗ್ರಿಗಳು ದೊರೆಯುತ್ತವೆ ಎಂಬುದೇನೋ ನಿಜ ; ಜೊತೆಗೆ ಜನಗಣತಿ ಸಂಶೋಧಕರಿಗೆ ಒಂದು ಮಾರ್ಗದರ್ಶಕವಾಗುತ್ತದೆ. ಇದರ ಸಹಾಯದಿಂದ ಅವರು ಜನಸಂಖ್ಯೆಗೆ ಸಂಬಂಧಿಸಿದ ಸಿದ್ಧಾಂತಗಳನ್ನು ಮತ್ತು ಹೊಸ ಹೊಸ ಯೋಜನೆಗಳನ್ನು ರೂಪಿಸಬಹುದು. ಈ ದಿಶೆಯಲ್ಲಿ ನಾವು

೧೯೮೧ರ ಮಾರ್ಚ್ ತಿಂಗಳ '[illegible]' ಎಂಬ ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಸುನೀಲ್ ಸಕ್ಸೇನಾ ಅವರ "[illegible]" ಎಂಬ ಲೇಖನದ ಸರಳಾನುವಾದ.

‘ಜನಗಣತಿಯನ್ನು ಸಾಮಾಜಿಕ ವಿಜ್ಞಾನಗಳ ಜನನಿ’ ಎಂದು ಹೇಳುತ್ತಾರೆ.

ಎರಡನೆಯ ಜಾಗತಿಕ ಯುದ್ಧದ ಅನಂತರ ಸುಮಾರು ೧೫೦ ದೇಶಗಳಲ್ಲಿ ಜನಗಣತಿ ಮಾಡಲಾಯಿತು. ಇದೇ ಇಂದು ಪ್ರಪಂಚದಲ್ಲಿ ಬಹುಶಃ ಜನಗಣತಿ ಯನ್ನು ಮಾಡದಂಥ ಒಂದೇ ಒಂದು ದೇಶವಾದರೂ ಸಿಗಲಾರದು. ಜನಗಣತಿಗೆ ಇರುವ ಮಹತ್ವವನ್ನು ತಿಳಿಯಬೇಕಾದರೆ ನಾವು ಅದರ ಇತಿಹಾಸ ವನ್ನು ಕೂಡ ನೋಡಬೇಕಾಗುತ್ತದೆ.

ಜನಗಣತಿಯ ಇತಿಹಾಸ:

ಪ್ರಾಚೀನಕಾಲದಲ್ಲಿ ಬೆಬಿಲೋನಿಯದಲ್ಲಿ ಕ್ರಿ.ಪೂ. ೩೮೦೦–೪೦೦೦ರಲ್ಲೇ ಜನಗಣತಿಗೆ ಸಂಬಂಧಿಸಿದ ಮಾಹಿತಿಗಳನ್ನು ಒಂದೆಡೆ ಸೇರಿಸಿಕೊಳ್ಳಲಾಯಿತು. ಚೀನಾದಲ್ಲಿ ಕ್ರಿ.ಪೂ. ೩೦೦೦ದಲ್ಲಿ ಮತ್ತು ಮಿಸ್ರದೇಶದಲ್ಲಿ ಕ್ರಿ.ಪೂ. ೨೫೦೦ರ ಸುಮಾರಿಗೆ ಇದನ್ನು ಪ್ರಾರಂಭಿಸಲಾಯಿತು. ವಿವಿಧ ವಸ್ತುಸಂಗ್ರಹಾಲಯ ಗಳಲ್ಲಿ ಇಡಲಾಗಿರುವ ಶಿಲೆಗಳಲ್ಲಿ ಮತ್ತು ಗ್ರಂಥಗಳಲ್ಲಿ ಪ್ರಾಚೀನಕಾಲದ ಜನಗಣತಿಗೆ ಸಂಬಂಧಿಸಿದ ದಾಖಲೆಗಳು ದೊರೆಯುತ್ತವೆ. ಅವುಗಳಲ್ಲಿಯ ಸಂದರ್ಭ [illegible] ಪ್ರಾಚೀನ [illegible] ‘ಬುಕ್ ಆಫ್ ಎಕ್ಸೋಡಸ್’ ಎಂಬ ಗ್ರಂಥದಲ್ಲಿ ದೊರೆಯುತ್ತವೆ. ಮೋಸೆಸ್ ಎಂಬಾತ ಇಸ್ರೇಲಿನ ಮಕ್ಕಳ (ಜನರ) ಗಣತಿ ಮಾಡಬೇಕೆಂದು ನಿರ್ದೇಶಿಸಿದ್ದ. ಆ ಗಣತಿ ಕ್ರಿ.ಪೂ. ಸುಮಾರು ೧೪೯೧ರಲ್ಲಿ ನಡೆಯಿತು. ಜನಸಂಖ್ಯೆಗೆ ಸಂಬಂಧಿಸಿದ ಅನೇಕ ಉಲ್ಲೇಖಗಳು ಹಳೆಯ ಒಡಂಬಡಿಕೆ ‘ಬೈಬಲ್’ನಲ್ಲಿ ದೊರೆಯುತ್ತವೆ. ಹಿಬ್ರೂ ದೊರೆ ದಾವಿದನ ಕಾಲದಲ್ಲಿ ಕ್ರಿ.ಪೂ. ೧೦೧೭ರಲ್ಲಿ ಆ ಜನಗಣತಿಯನ್ನು ಮಾಡಲಾಗಿತ್ತು. ಅನಂತರ ಇಸ್ರೇಲ್‌ನಲ್ಲಿ ಅನೇಕ ಜನ ಸಾವಿಗೀಡಾದರು. ಇದರಿಂದಾಗಿ ಅಲ್ಲಿಯ ಜನರಲ್ಲಿ, ಈಶ್ವರನ ಮಕ್ಕಳ ತಲೆಯನ್ನೆಣಿ ಸುವ ಅಧಿಕಾರ ಮನುಷ್ಯನಿಗೆ ಇಲ್ಲ ಮತ್ತು ಹೀಗೆ ಜನಗಣತಿ ಮಾಡಿದ್ದರಿಂದ ಅದರಿಂದ ಗಂಭೀರ ಅನಾಹುತವಾಗುತ್ತದೆ ಎಂಬ ಅಭಿಪ್ರಾಯ ಮೂಡಿತು. ಈಶ್ವರನ ಕೋಪದಿಂದಾಗಿಯೇ ಅಸಂಖ್ಯಾತ ಇಸ್ರೇಲಿಯನ್ನರು ಮೃತರಾದರು ಎಂಬ ಈ ಹಿನ್ನೆಲೆ ಬಹುಕಾಲದವರೆಗೆ ಅಲ್ಲಿಯ ಜನರ ಮನಸ್ಸನ್ನು ಆವರಿಸಿತ್ತು. ಇದರಿಂದಾಗಿ ಅನಂತರ ಬಹುಕಾಲದವರೆಗೆ ಇಂಗ್ಲೆಂಡಿನಲ್ಲಿ ಜನಗಣತಿ [illegible] ಆರಂಭಿಸಲು ಸಾಧ್ಯವಾಗಲಿಲ್ಲ.

ರೋಮನ್ ಸಾಮ್ರಾಜ್ಯದಲ್ಲಿ ಜನಗಣತಿ ಮಾಡುವ ಒಂದು ಅತ್ಯಂತ

ಮನೋರಂಜಕ ಪದ್ಧತಿ ಬಳಕೆಯಲ್ಲಿತ್ತು. ಸೈನಿಕರ ಸಂಖ್ಯೆಯನ್ನು ತಿಳಿಯುವುದು ಮತ್ತು ತೆರಿಗೆ ವಸೂಲಿ ಮಾಡುವುದೇ ಈ ಜನಗಣತಿಯ ಮುಖ್ಯ ಉದ್ದೇಶ. ಕ್ರಿ.ಪೂ. ೪೩೫ರ ವರೆಗೆ ಅದು ಪ್ರಚಲಿತವಿತ್ತು. ರೋಮಿನ ಆರನೆಯ ದೊರೆಯೆಂದು ಕರೆಯಲಾಗುವ ಟೂಲಿಯಸ್‌ನಿಗೆ ಜನಗಣತಿಯನ್ನು ಪ್ರಾರಂಭಿಸಿದ ಶ್ರೇಯವನ್ನು ಸಲ್ಲಿಸುತ್ತಾರೆ. ಅವನು ಜನಗಣತಿಯ ಉದ್ದೇಶಕ್ಕಾಗಿ ಎಲ್ಲ ಜಿಲ್ಲೆಗಳ ಸಂರಕ್ಷಕರ ಮೂಲಕ ಪ್ರಜೆಗಳು ದೇವತೆಗಳ ಸಲುವಾಗಿ ದೇವಸ್ಥಾನಗಳನ್ನು ನಿರ್ಮಾಣ ಮಾಡಬೇಕೆಂದು ಮತ್ತು ವರ್ಷಕ್ಕೊಮ್ಮೆ ದೇವತೆಗಳಿಗೆ ಬಲಿಯನ್ನರ್ಪಿಸಿ ಸಂತುಷ್ಟಗೊಳಿಸಲು ಪ್ರಜೆಗಳೆಲ್ಲ ಒಂದೆಡೆ ಸೇರಬೇಕೆಂದು ಆದೇಶ ನೀಡಿದ. ಇಂತಹ ಸಂದರ್ಭಗಳಲ್ಲಿ ರಾಜನು ವಿಧಿವತ್ತಾಗಿ ಸಾಮೂಹಿಕ ಉತ್ಸವಗಳನ್ನೇರ್ಪಡಿಸಿದನು ಮತ್ತು ಈ ಸಾಮೂಹಿಕ ಉತ್ಸವಗಳಿಗಾಗಿ ತಗಲುವ ವೆಚ್ಚವನ್ನು ನಿಭಾಯಿಸಲು ಜನರೆಲ್ಲರೂ ಪ್ರತಿಯೊಬ್ಬ ಒಂದೊಂದು ನಿರ್ದಿಷ್ಟ ನಾಣ್ಯವನ್ನು ಸಂಗ್ರಹಿಸಬೇಕೆಂದು ಆದೇಶ ನೀಡಿದ. ಇಲ್ಲಿಯ ಪುರುಷರು ಒಂದು ಬಗೆಯ ನಾಣ್ಯವನ್ನೂ ಮಹಿಳೆಯರು ಮತ್ತೊಂದು ಬಗೆಯ ನಾಣ್ಯವನ್ನೂ ಮಕ್ಕಳು ಮೂರನೆಯ ಬಗೆಯ ನಾಣ್ಯವನ್ನೂ ಒಟ್ಟುಮಾಡಬೇಕೆಂದು ನಿರ್ದೇಶಿಸಿದ. ಹೀಗೆ ಮಾಡಿದಾಗ ಈ ನಾಣ್ಯಗಳ ಗಣತಿಯಿಂದ ನಿವಾಸಿಗಳ ಸಂಖ್ಯೆ ಗೊತ್ತಾಗುತ್ತದೆಯಲ್ಲದೆ ಅದರ ಜೊತೆಗೆ ಸ್ತ್ರೀ-ಪುರುಷರ ಸಮಾನ ಅನುಪಾತ ಮತ್ತು ವಯೋ-ಸಂಘಟನೆಯ ಮಹತ್ವಪೂರ್ಣ ಅಂಶವೂ ತಿಳಿಯುತ್ತದೆ ಎಂದು ಅವನು ಭಾವಿಸಿದ.

ಇದೇ ಪ್ರಕಾರ ಅವನು ಅಥೆನ್ಸ್ ನಗರಗಳಲ್ಲಿಯ ನಿವಾಸಿಗಳ ಸಂಖ್ಯೆ, ಜನನ ಸಂಖ್ಯೆ ಮತ್ತು ಯೌವನಾವಸ್ಥೆಗೆ ಪಾದಾರ್ಪಣ ಮಾಡಲಿರುವ ಜನರ ಸಂಖ್ಯೆ ಮೃತ್ಯು ಎಲ್ಲವನ್ನು ತಿಳಿಯುವ ಸಲುವಾಗಿ ಅನೇಕ ಮಂದಿ ಸಂಬಂಧಿಗಳಿಗೆ ನಿರ್ದಿಷ್ಟ ಪ್ರಕಾರದ ನಾಣ್ಯಗಳನ್ನು ಸಂಗ್ರಹಿಸುವಂತೆ ಆದೇಶ ನೀಡಿದ. ಮನೆಯಲ್ಲಿ ಮಗು ಹುಟ್ಟಿದರೆ “ಜ್ಯೂನೋ ಲುಸೀನಾ” ಎಂಬ ಖಜಾನೆಯಲ್ಲಿ ಒಂದು ಬಗೆಯ ನಾಣ್ಯವನ್ನು, ಯಾರಾದರೂ ನಿಧನರಾದರೆ ‘ವೀನಸ್ ಆಫ್ ಗ್ರೂವ್ಸ್’ ಎಂಬ ಖಜಾನೆಯಲ್ಲಿ ಮತ್ತೊಂದು ಬಗೆಯ ನಾಣ್ಯವನ್ನು ವ್ಯಕ್ತಿ ಪ್ರೌಢಾವಸ್ಥೆಯನ್ನು ತಲುಪಿದಾಗ ‘ಜುವೆಂಟಸ್’ ಎಂಬ ಖಜಾನೆಯಲ್ಲಿ ಮೂರನೆಯ ಬಗೆಯ ನಾಣ್ಯವನ್ನೂ ಸಂಗ್ರಹಿಸಬೇಕಾಗುತ್ತಿತ್ತು. ವರ್ಷಾಂತ್ಯದಲ್ಲಿ ಈ ನಾಣ್ಯಗಳನ್ನು ಲೆಕ್ಕಮಾಡಿದ ಅನಂತರವೂ ಕೂಡ ಅವಶ್ಯಕತೆಯಿದ್ದರೆ ನಿವಾಸಿಗಳ ಸಂಖ್ಯೆಯನ್ನು ಗಣಿಸಬಹುದಾಗಿತ್ತು. ಇದಲ್ಲದೆ

ಸೈನಿಕರ ಸಂಖ್ಯೆ ಮತ್ತು ಅವರ ವಯಸ್ಸುಗಳೂ ತಿಳಿದುಬರುತ್ತಿದ್ದುವು. ಈ ರೀತಿಯಲ್ಲಿ ಪ್ರಾಚೀನಕಾಲದಲ್ಲಿ ಜನಗಣತಿ ಮಾಡಲು ಮತ್ತು ಅದರ ವಿಭಿನ್ನ ಅಂಶಗಳನ್ನು ತಿಳಿದುಕೊಳ್ಳಲು ಅದೊಂದು ಸಮರ್ಥ ಮಾಧ್ಯಮವಾಗಿತ್ತು ಎಂದು ಹೇಳಬಹುದು.

[illegible]ರಲ್ಲಿ ಫ್ರಾನ್ಸಿನ ರಾಜಕುಮಾರಿ ಜೊತೆಗೆ ವರದಕ್ಷಿಣೆಯ ಪ್ರಮಾಣವನ್ನು ನಿರ್ಧರಿಸಲೋಸ್ಕರ ಜನಗಣತಿ ಮಾಡಲಾಗಿತ್ತು.

ಆಧುನಿಕ ರೀತಿಯ ಜನಗಣತಿಗೆ ಸಂಬಂಧಿಸಿದಂತೆ [illegible] ಸ್ವೀಡನ್ ದೇಶವು [illegible]. ಏಕೆಂದರೆ ಅಲ್ಲಿ [illegible]ರಲ್ಲಿ ಮೊದಲ ಜನಗಣತಿಯನ್ನು ಮತ್ತು [illegible]ರಲ್ಲಿ [illegible] ಜನಗಣತಿಯನ್ನು ನಡೆಸಲಾಗಿತ್ತು. ಅನಂತರ ಪ್ರಪಂಚದ ವಿಭಿನ್ನ ಭಾಗಗಳಲ್ಲಿ ಕ್ರಮವಾಗಿ ಈ ಮುಂದಿನ ವರ್ಷಗಳಲ್ಲಿ ನಡೆಸಲಾಯಿತು. ಉದಾ : [illegible], [illegible], [illegible], [illegible], [illegible], [illegible], [illegible], [illegible], [illegible] ಮತ್ತು [illegible]. [illegible] ಶತಮಾನದ [illegible] ಅವಧಿಯಲ್ಲಿ ಜನಗಣತಿ ಆರಂಭವಾಯಿತು. [illegible] ಆಧಾರವನ್ನು ಬಿಟ್ಟು ಅನೇಕ ಜನಗಣತಿಯನ್ನು ನಡೆಸಿದ ಶ್ರೇಯವನ್ನು ಸಂಯುಕ್ತ ರಾಷ್ಟ್ರ ಅಮೆರಿಕೆಗೆ (೧೭೯೦) ಸಲ್ಲುತ್ತದೆ.

ಪ್ರಪಂಚದ ವಿಭಿನ್ನ ದೇಶಗಳಲ್ಲಿ ಪ್ರಾರಂಭದ ಜನಗಣತಿ ಎಲ್ಲಿ ನಡೆಯಿತೆಂಬ ಬಗ್ಗೆ ವಿದ್ವಾಂಸರುಗಳಲ್ಲಿ ವಿಭಿನ್ನ ಮತಗಳಿವೆ. [illegible] ಎಂಬಾತನ ಪ್ರಕಾರ ಕೆನಡಾದ [illegible] ಪ್ರಾಂತ್ಯಕ್ಕೆ ಜನಗಣತಿಯನ್ನು ಪ್ರಾರಂಭಿಸಿದ ಶ್ರೇಯವನ್ನು ಸಲ್ಲುತ್ತದೆ ಎಂದಿದೆ. ಅಲ್ಲಿ ೧೬೬೬ರಲ್ಲಿ [illegible] ಪ್ರಶಾಸನದ ಮೂಲಕ [illegible] ಸಂಪೂರ್ಣ ಜನಗಣತಿಗಳೂ ಮತ್ತು ೯ ಆಂಶಿಕ ಜನಗಣತಿಗಳೂ ನಡೆದುವು. [illegible] ಎಂಬಾತನ ಅಭಿಪ್ರಾಯದಲ್ಲಿ, "ಸಿಸಿಲಿ (ಇಟಲಿ)ಯಲ್ಲಿ ಉಪಲಬ್ಧವಾಗುವಷ್ಟು ಪ್ರಾಚೀನವಾದ, ಪೂರ್ಣವಾದ ಮತ್ತು ನಿರಂತರವಾಗಿ ಜನಗಣತಿ ನಡೆಸಿದ ಬೇರಾವುದೇ ರಾಷ್ಟ್ರ ಜಗತ್ತಿನಲ್ಲಿಯೇ ಇಲ್ಲ. ಅಲ್ಲಿ ೧೫೦೫ರಲ್ಲಿ ಪ್ರಪ್ರಥಮ ಜನಗಣತಿ ನಡೆದಿತ್ತು" ಎಂದಿದೆ. ಅದಾದ ಅನಂತರ ೧೬ನೆಯ ಶತಮಾನದಲ್ಲಿ ಅಲ್ಲಿ ಮೂರು ಬಾರಿ ಜನಗಣತಿಗಳನ್ನು ನಡೆಸಲಾಯಿತು.

೧೭ನೆಯ ಶತಮಾನದಲ್ಲಿ ಆರು ಬಾರಿಯೂ ೧೮ನೆಯ ಶತಮಾನದಲ್ಲಿ ನಾಲ್ಕು ಬಾರಿಯೂ ಜನಗಣತಿಗಳನ್ನು ನಡೆಸಲಾಯಿತು.

ಭಾರತದಲ್ಲಿ ಜನಗಣತಿಯ ಇತಿಹಾಸ:

ಭಾರತದಲ್ಲಿ ಕ್ರಿ.ಪೂ. ೩೦೦೦–೪೦೦೦ದ ಹಿಂದೆ ಸಿಂಧೂ ಕಣಿವೆಯ ನಾಗರಿಕತೆಯ ಕಾಲದಿಂದ ಜನಗಣತಿಯು ಪ್ರಾರಂಭವಾಯಿತೆಂದು ಪರಿಗಣಿಸಲಾಗುತ್ತದೆ. ಏಕೆಂದರೆ ಮೊಹೆಂಜೊದಾರೊ ಮತ್ತು ಹರಪ್ಪಾ ನಾಗರಿಕತೆಗಳು ಪ್ರಪಂಚದ ಪ್ರಾಚೀನತೆಯ ಹಾಗೂ ವಿಕಸಿತ ನಾಗರಿಕತೆಗಳಲ್ಲಿ ಒಂದಾಗಿದ್ದುವು ಮತ್ತು ಇಲ್ಲಿ ದಟ್ಟವಾದ ಜನಸಂಖ್ಯೆಯುಳ್ಳ ನಗರಗಳು ಕೂಡ ಇದ್ದುವು. ಕ್ರಿ.ಪೂ. ೩೨೬–೨೭ರಲ್ಲಿ ಸಿಕಂದರನ ಮಹಾಸೈನ್ಯ ಮತ್ತು ಕ್ರಿ.ಪೂ. ೩೨೧–೨೯೭ರಲ್ಲಿ ಚಂದ್ರಗುಪ್ತನ ಏಳು ಲಕ್ಷ ಸಿಪಾಯಿಗಳನ್ನೊಳಗೊಂಡ ಸೇನೆಯ ಉಲ್ಲೇಖ ದೊರೆಯುತ್ತದೆ. ಇದೇ ರೀತಿ ಸಾಮ್ರಾಟ ಅಶೋಕನ ಮತ್ತು ಅಕ್ಬರನ ಕಾಲದಲ್ಲಿಯ ಪ್ರಶಾಸನ, ಜನಸಂಖ್ಯೆ ಸಂಪತ್ತು ಮತ್ತು ಕೃಷಿ ಇತ್ಯಾದಿಗಳ ಗಣನೆಯ ಉಲ್ಲೇಖ ದೊರೆಯುತ್ತದೆ.

೧೭ನೆಯ ಶತಮಾನದಲ್ಲಿ ಭಾರತದ ಜನಸಂಖ್ಯೆಯನ್ನು ಕಂಡುಹಿಡಿಯುವ ಸಲುವಾಗಿ ಪ್ರಾಂತೀಯ ಸ್ತರದಲ್ಲಿ ಮತ್ತು ನಗರ–ಸ್ತರದಲ್ಲಿ ಕಾಲ-ಕಾಲಕ್ಕೆ ಜನಗಣತಿಗಳು ನಡೆಯುತ್ತಲೇ ಇದ್ದುವು.

ಭಾರತದಲ್ಲಿ ೧೮೭೨ರಲ್ಲಿ ಪ್ರಪ್ರಥಮ ಜನಗಣತಿ ಕಾರ್ಯ ನಡೆಯಿತು. ಕೇವಲ ಕೆಲವು ಕ್ಷೇತ್ರಗಳಲ್ಲಿ ಐಚ್ಛಿಕ ರೂಪದಿಂದ ಈ ಜನಗಣತಿಯನ್ನು ನಡೆಸಲಾಗಿತ್ತು. ನಂತರ ಅದೊಂದು ಸಾಮಾನ್ಯ ಪದ್ಧತಿಯಾಯಿತು. ಅಂದಿನಿಂದ ಇಂದಿನವರೆಗೆ ಕ್ರಮ ತಪ್ಪಿಹೋಗಿಲ್ಲ. ಕ್ರಿ.ಶ. ೧೮೮೧ರಲ್ಲಿ ಇಡೀ ಭಾರತದಲ್ಲಿ ತಾತ್ಕಾಲಿಕ ಜನಗಣತಿಯ ಆಯುಕ್ತರಾದ ಡಬ್ಲ್ಯು.ಸಿ. ಪ್ಲೌಡೆನ್ ಅವರ ನೇತೃತ್ವದಲ್ಲಿ ನಡೆಯಿತು ಮತ್ತು ಸ್ವತಂತ್ರ ಭಾರತದಲ್ಲಿ ೧೯೫೧ರಲ್ಲಿ ಪ್ರಥಮ ಜನಗಣತಿ ನಡೆಯಿತು. ೧೯೮೧ರ ಜನಗಣತಿಯನ್ನು ಇಲ್ಲಿಯತನಕ ಜನಗಣತಿಗಳಲ್ಲಿಯ ಅತ್ಯಂತ ವಿಸ್ತೃತವಾದ ಹಾಗೂ ನಿಯೋಜಿತ ಪ್ರಕಾರದ ಜನಗಣತಿಯೆಂದು ಪರಿಗಣಿಸಲಾಗುತ್ತದೆ. ಪ್ರಪಂಚದ ಅನೇಕ ದೇಶಗಳ ವಿದ್ವಾಂಸರು ಭಾರತದ ಜನಗಣತಿಯನ್ನು ಸಾಕಷ್ಟು ಶ್ಲಾಘಿಸಿದ್ದಾರೆ.

ನಮ್ಮಲ್ಲಿ ಸಾಮಾನ್ಯತಃ ಪ್ರತಿ ೧೦ ವರ್ಷಗಳಿಗೊಮ್ಮೆ ಜನಗಣತಿ ಕಾರ್ಯವನ್ನು ನಡೆಸುತ್ತಾರೆ. ಆದರೆ ಅವಶ್ಯಕವೆನಿಸಿದರೆ ಆ ನಡುವೆ ಚಿಕ್ಕ ಜನಗಣತಿ

ಯನ್ನು ನಡೆಸಬಹುದು. ಪ್ರತಿಯೊಂದು ದೇಶದಲ್ಲಿಯೂ ಬೇರೆ ಬೇರೆ ರೀತಿಗಳಲ್ಲಿ ಜನಗಣತಿ ಕಾರ್ಯವನ್ನು ನಡೆಸಲಾಗುತ್ತದೆ. ಅವು ಆಯಾ ದೇಶಗಳ ಸಾಮಾಜಿಕ, ಸಾಂಸ್ಕೃತಿಕ, ರಾಜನೈತಿಕ, ಪರಿಸ್ಥಿತಿಗಳಿಗೆ ಮತ್ತು ಭೌತಿಕ ವಾತಾವರಣಕ್ಕೆ ಅನುಕೂಲಕರವಾಗಿರುತ್ತದೆ. ಜನಗಣತಿಯ ವಿಧಾನಗಳು ಎರಡು ಬಗೆಯವು ಗಳು. ೧. ಡಿ-ಫ್ಯಾಕ್ಟೊ ವಿಧಾನ: ಇದರ ಪ್ರಕಾರ ಜನಗಣತಿ ನಡೆಯುವ ಸ್ಥಳದಲ್ಲಿರುವ ಎಲ್ಲ ಜನರನ್ನು ಅಲ್ಲಿಯ ಜನರೆಂದೇ ಭಾವಿಸಿ ಗಣಿಸಲಾಗುತ್ತದೆ. ಅವರ ನಿವಾಸಸ್ಥಾನ ಅಲ್ಲದೇ ಇರಲಿ ಅಥವಾ ಇಲ್ಲದೆ ಇರಲಿ ಅದು ಅಲ್ಲಿ ಗೌಣ. ಉದಾಹರಣೆಗೆ ಈ ವಿಧಾನದಲ್ಲಿಯೇ ಜನಗಣತಿಯನ್ನು ಮಾಡಲಾಯಿತು. ೨. ಡಿ-ಜ್ಯೂರ್ ವಿಧಾನ: ಇದರ ಪ್ರಕಾರ ಜನಗಣತಿ ನಡೆಯುವ ಸ್ಥಳದಲ್ಲಿ ಖಾಯಂ ಆಗಿ ವಾಸಿಸುತ್ತಿರುವವರ ಅಥವಾ ಸ್ವಾಭಾವಿಕ ನಿವಾಸಿಗಳ ಸ್ಥಿತಿಯ ಲೆಕ್ಕ ಇರುವನ್ನು ಗಣಿಸಲಾಗುತ್ತದೆ. ಈ ಎರಡು ವಿಧಾನಗಳಿಗೆ ಅವುಗಳದೇ ಆದ ಗುಣದೋಷಗಳು ಇವೆ. ಭಾರತದಲ್ಲಿ ೧೮೮೧ರಿಂದ ಈ ವಿಧಾನದಲ್ಲಿಯೇ ಜನಗಣತಿಯನ್ನು ಮಾಡಲಾಗುತ್ತಿದೆ.

ಸ್ವತಂತ್ರ ಭಾರತದಲ್ಲಿ ಇದುವರೆಗೆ ಮೂರು ಬಾರಿ ಹತ್ತು ವರ್ಷಗಳಿಗೆ ಒಮ್ಮೆಯಂತೆ ಜನಗಣತಿಯನ್ನು ನಡೆಸಲಾಗಿದೆ. ಪ್ರತಿಯೊಂದು ಜನಗಣತಿಯಲ್ಲೂ ದೇಶದ ಜಟಿಲ ಸಮಸ್ಯೆಗಳ ಹಲವಾರು ಅಂಶಗಳನ್ನು ಪರಿಶೀಲಿಸಲು ಸಿದ್ಧವಾಗಿ ಮುಂದೆ ದೇಶದ ಬೆಳವಣಿಗೆಯ ಯೋಜನೆಗೆ ನೆರವಾಗಲು ಸಾಧ್ಯವಾಗಿದೆ. ೧೯೬೧ರ ಜನಗಣತಿ ಸ್ವತಂತ್ರ ಭಾರತದ ಮತ್ತು ಒಟ್ಟಿನಲ್ಲಿ ಹತ್ತನೆಯ ಜನಗಣತಿಯಾಗಿದೆ. ಇದರಿಂದ ನಮಗೆ ಜನಸಂಖ್ಯೆಗೆ ಸಂಬಂಧಿಸಿದ ಎಲ್ಲ ಅಂಶಗಳ ಅರಿವು ಪ್ರಾಪ್ತವಾಗಿದೆ. ಆಗ ನಾವು ಕೈಕೊಂಡ ನಮ್ಮ ಯೋಜನೆಯಲ್ಲಿ ಎಷ್ಟರಮಟ್ಟಿಗೆ ಸಫಲರಾಗಿದ್ದೇವೆ ಮತ್ತು ಅಸಫಲರಾಗಿದ್ದೇವೆ ಎಂದು ತಿಳಿಯಬೇಕು. ಹೀಗಾದರೆ ಆಗ ಅದು ಗುರಿಸಾಧನೆಯಲ್ಲಿ ನಮ್ಮ ಎದುರಿನಲ್ಲಿ ಇರುತ್ತದೆ.

ಸಿ. ರಾಮಂಕಯ್ಯ

ನಿನ್ನನ್ನು ನೀನೇ ಉದ್ಧರಿಸಿಕೊಳ್ಳಬೇಕು ಮಾನವ. ಎಲ್ಲದರಲ್ಲಿಯೂ ಆತ್ಮನನ್ನು ಭಾವಿಸಿ ಶ್ರೇಷ್ಠನಾಗು ನಿನ್ನನ್ನು ಸಂಯಮದಿ ಆರಾಧಿಸುವವನು.

—ಶ್ರೀ ಕೃಷ್ಣ

ನನ್ನಿಂದಾಗಿ ಗಾಂಧೀಜಿಯವರ ಆಶ್ರಮ ಸರ್ಕಾರದ ಕೈವಶವಾಗುವುದು ತಪ್ಪಿತು

ಉಪರಾಷ್ಟ್ರಪತಿ ಹಿದಾಯತ್‌ಉಲ್ಲಾ ಅವರ ಆತ್ಮಕಥನದಿಂದ ಕೆಲವು ಪ್ರಸಂಗಗಳು.

ನನ್ನ ಶಾಲೆಯ ದಿನಗಳಲ್ಲಿ ಒಮ್ಮೆ ಒಂದು ನಾಗರಹಾವು ನನ್ನ ಮೈಯನ್ನು ಸುತ್ತುಗಟ್ಟಿತ್ತು. ನನಗೆ ಆಗ ಏನು ಮಾಡಬೇಕೆಂದೆ ತೋರಲಿಲ್ಲ. ಅಷ್ಟರಲ್ಲಿ ಅದು ನನ್ನ ಮೈಯಿಂದ ಜಾರಿ ಇಳಿದು ಹೊರಟುಹೋಯಿತು. ಈ ವಿಷಯ ಅಲ್ಲಿಗೇ ನಿಲ್ಲಲಿಲ್ಲ. ಮನೆಯವರು ಒಬ್ಬ ಪುರೋಹಿತರಿಗೆ ಹೇಳಿ ಕಳುಹಿಸಿದರು. ಪುರೋಹಿತರ ಹಿಂದೇ ಬಂತು. ನಡೆದ ಘಟನೆಯ ಬಗ್ಗೆ ಕೇಳಿದ ಮೇಲೆ ಹಿರಿಯ ಪುರೋಹಿತರು ಹೇಳಿದರು: “ನಾಗರಾಜ ಮಗುವನ್ನು ಸುತ್ತುಹಾಕಿಕೊಂಡರೂ ಏನೂ ಮಾಡಲಿಲ್ಲ, ಕಚ್ಚಲಿಲ್ಲ. ಅಂದರೆ ಇದರ ಅರ್ಥ ಮಗುವಿನ ಭವಿಷ್ಯ ತುಂಬ ಉಜ್ವಲವಾಗಿದೆ. ದೊಡ್ಡವನಾಗಿ ಇವನು ತುಂಬ ಒಳ್ಳೆಯ ಹೆಸರು ಗಳಿಸುತ್ತಾನೆ”.

ಆದಾದ ಮೇಲೆ ಒಂದು ಗಡಿಗೆಯಲ್ಲಿ ಸಾಸಿವೆಎಣ್ಣೆ ತಂದರು. ಅದರಲ್ಲಿ ಮುಖ ನೋಡಿಕೊಳ್ಳಲು ನನಗೆ ಹೇಳಿದರು. ಹೊರಡುವುದಕ್ಕೆ ಮೊದಲು ಪುರೋಹಿತರು ನನ್ನ ಮನೆಯವರಿಗೆ ನಾಗರಹಾವಿನ ಚಿನ್ನದ ಪ್ರತಿಮೆಯೊಂದನ್ನು ಮಾಡಿಸಿ ದೇವಸ್ಥಾನಕ್ಕೆ ಕಳಿಸಿಕೊಡುವಂತೆ ಹೇಳಿಹೋದರು.

ಶಾಲೆಯಲ್ಲಿ ನೂರು ಗಜ ಓಟದ ಸ್ಪರ್ಧೆ ನಡೆದಾಗ ನಾನೇ ಎಲ್ಲರಿಗಿಂತ ಹಿಂದಿದ್ದೆ. ಫುಟ್‌ಬಾಲ್ ನನಗೆ ತುಂಬ ಭಾರಿಯಾಗಿ ಕಾಣುತ್ತಿತ್ತು. ಆದರಿಂದ ಅದನ್ನು ದೂರ ಒದೆಯಲು ನನಗೆ ಸಾಧ್ಯವಾಗುತ್ತಿರಲಿಲ್ಲ. ಕ್ರಿಕೆಟ್ ಚೆಂಡಂತೂ ನನಗೆ ತುಂಬ ಗಟ್ಟಿಯಾದುದೂ ಬಲವಾಗಿಯೂ ತಗಲುತ್ತಿತ್ತು.

ನನ್ನ ಮನೆಯವರೆಲ್ಲ ಹಿಂದೂ ಜ್ಯೋತಿಷಿಗಳ ಮತ್ತು ಪುರೋಹಿತರ ಜೊತೆಯಲ್ಲಿ ಹತ್ತಿರದ ಸಂಬಂಧವನ್ನಿಟ್ಟುಕೊಂಡಿದ್ದರು. ನಾವುಗಳು ಮನೆಯಲ್ಲಿ ದೀಪ ಬೆಳಗಿಸಿ ದೀಪಾವಳಿ ಹಬ್ಬವನ್ನು ಬಹು ಸಂಭ್ರಮದಿಂದ ಆಚರಿಸುತ್ತಿದ್ದೆವು. ಹಿಂದೂಗಳ ಅನೇಕ ಸಂಪ್ರದಾಯಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತಿದ್ದೆವು. ಹೋಳಿಯು

ಮೇ, ೧೯೮೦ ರ ‘ಸಂಡೇ’ ನಲ್ಲಿ ಪ್ರಕಟವಾದ ಉಪರಾಷ್ಟ್ರಪತಿ ಹಿದಾಯತುಲ್ಲಾ ಅವರ ಆತ್ಮಕಥೆಯಿಂದ ಆಯ್ದ ಕೆಲವು ಪ್ರಸಂಗಗಳ ಕನ್ನಡ ರೂಪಾಂತರ.

ಮಾಂಸ ನಮ್ಮ ಪಾಲಿಗೆ ಎಷ್ಟು ನಿಷಿದ್ಧವಾಗಿತ್ತೊ, ಗೋಮಾಂಸವನ್ನೂ ಅಷ್ಟೇ ಕಡೆಗಣ್ಣಿನಿಂದ ಕಾಣುತ್ತಿದ್ದೆವು.

ಶಾಲೆಯ ಓದು ಮುಗಿದ ಮೇಲೆ ನಾನು ನಾಗಪುರದ ಹಿಸ್ಲಾಪ್ ಕಾಲೇಜಿನಲ್ಲಿ ಹೆಚ್ಚಿನ ಅಧ್ಯಯನಕ್ಕಾಗಿ ಸೇರಿದೆ. ಅಲ್ಲಿನ ವಾತಾವರಣ ತುಂಬ ಸೌಹಾರ್ದಮಯ ವಾಗಿತ್ತು. ನಾವು ವಿದ್ಯಾರ್ಥಿಗಳೆಲ್ಲ ಒಬ್ಬರು ಇನ್ನೊಬ್ಬರ ಧಾರ್ಮಿಕ ನಂಬಿಕೆ ಗಳಿಗೆ ಆಚರಣೆಗಳಿಗೆ ಗೌರವ ತೋರಿಸುತ್ತಿದ್ದೆವು. ಕಾಲೇಜಿನಲ್ಲಿ ನಡೆಯುತ್ತಿದ್ದ ಎಲ್ಲಾ ಸಮಾರಂಭಗಳಿಗಾಗಿ ಎಲ್ಲ ವಿದ್ಯಾರ್ಥಿಗಳು ಅನೇಕ ದಿನಗಳ ಕಾಲ ಕೆಲಸ ದಲ್ಲಿ ತೊಡಗಿರುತ್ತಿದ್ದರು. ಗಣಪತಿ ಹಬ್ಬಕ್ಕಾಗಿ ಮುಸಲ್ಮಾನ ವಿದ್ಯಾರ್ಥಿ ಗಳಾಗಿದ್ದ ನಾವು ದೊಡ್ಡ ದೊಡ್ಡ ಡ್ರಾಯಿಂಗ್ ಶೀಟುಗಳ ಮೇಲೆ ಬಗೆಬಗೆಯ ವಿನ್ಯಾಸಗಳನ್ನು ಬರೆದು ಕತ್ತರಿಸುತ್ತಿದ್ದೆವು. ವಿನ್ಯಾಸಗಳನ್ನು ರಚಿಸುವದರಲ್ಲಿ ನನ್ನ ಸೋದರ ಅಹಮದುಲ್ಲಾ ಖಾನ್, ರಾಮರಾವ್ ಪ್ರಸಾದ್ ಹಾಗೂ ಬೇರೆ ವಿದ್ಯಾರ್ಥಿಗಳು ಸೇರುತ್ತಿದ್ದರು. ನಮ್ಮಲ್ಲಿ ಹಿಂದೂ ಮುಸ್ಲಿಮರಲ್ಲದೆ ಕ್ರೈಸ್ತರು, ಪಾರಸಿ ಗಳೂ ಇದ್ದರು. ನಾವೆಲ್ಲ ಕತ್ತರಿಯಿಂದ ಕಾಗದದ ಮೇಲೆ ಅಲಂಕಾರಕ್ಕಾಗಿ ರಂಧ್ರಗಳನ್ನು ಮಾಡುತ್ತಿದ್ದೆವು. ಗಣಪತಿಯನ್ನು ವಿಸರ್ಜನೆ ಮಾಡುವಾಗಲಂತೂ ವಿದ್ಯಾರ್ಥಿಗಳೆಲ್ಲ ಒಟ್ಟು ಸೇರಿ ನದಿಯ ಮೇಲೆ ವಿಗ್ರಹವನ್ನು ಎತ್ತಿ ಒಯ್ಯು ತ್ತಿದ್ದೆವು.

ಅದೇ ರೀತಿಯಲ್ಲಿ ಈದ್‌ಮಿಲಾದ್‌ನ ಸಂದರ್ಭದಲ್ಲಿ ಮುಸಲ್ಮಾನ ವಿದ್ಯಾರ್ಥಿ ಗಳು ಕಾಲೇಜಿನ ಅಂಗಳದಲ್ಲೇ ಪರಸ್ಪರ ಶುಭಾಶಯ ಕೋರುತ್ತಿದ್ದರು. ನಾನು ಯಾವುದನ್ನೂ ಉತ್ಪ್ರೇಕ್ಷಿಸಿ ಹೇಳುತ್ತಿಲ್ಲ. ಏಕೆಂದರೆ ಕಾಲೇಜಿನ ಪ್ರತಿಯೊಬ್ಬ ಹಿಂದೂ, ಮುಸಲ್ಮಾನ, ಕ್ರೈಸ್ತ ಹಾಗೂ ಪಾರಸಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಇದರಲ್ಲಿ ತುಂಬ ಉತ್ಸಾಹದಿಂದ ಪಾಲುಗೊಳ್ಳುತ್ತಿದ್ದರು. ಸಂಖ್ಯೆ ಯಲ್ಲಿ ಕಡಿಮೆಯಿದ್ದರೂ ಕಾಲೇಜಿನ ಮುಸಲ್ಮಾನ ವಿದ್ಯಾರ್ಥಿಗಳು ಸಾಕಷ್ಟು ಚಂದಾ ಹಣ ವಸೂಲು ಮಾಡುವುದರಲ್ಲಿ ಯಶಸ್ವಿಯಾಗುತ್ತಿದ್ದರು.

ನನ್ನ ತಂದೆಯವರು ಅಖಿಲ ಭಾರತ ಮುಸಲ್ಮಾನ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾಗಿದ್ದರು. ನಾಗಪುರದ ಅಂಜುಮಾನ್ ಪ್ರೌಢಶಾಲೆಯ ಜೊತೆಗೂ ಅವರು ಸಾಕಷ್ಟು ಸಂಪರ್ಕ ಇಟ್ಟುಕೊಂಡಿದ್ದರು. ಪ್ರೌಢಶಾಲೆಯ ಕಟ್ಟಡವನ್ನು ನಾಗಪುರದ ರಾಜಾರಾಮ ದೀಕ್ಷಿತ ಎಂಬುವವರು ಮುಸಲ್ಮಾನರು ಚಂದಾ ಹಣ ವಸೂಲಿ ಮಾಡಿ ಕಟ್ಟುವುದಕ್ಕಿಂತ ಮುಂಚೆಯೆ ಕಟ್ಟಿಸಲು ಶುರು ಮಾಡಿದ್ದರು ಎಂಬುದಾಗಿ ಅವರು ನನಗೆ ಹೇಳುತ್ತಿದ್ದರು. ಧರ್ಮ ನಿರಪೇಕ್ಷ

ನಾಡಾದ ನಮ್ಮ ಭಾರತದಲ್ಲಿ ಎಷ್ಟು ಮಂದಿಗೆ ತಾನೆ ಈ ಲೋಕೋಪಕಾರಿ ಹಿಂದುವಿನ ಈ ಸತ್ಕಾರ್ಯದ ಬಗ್ಗೆ ತಿಳಿದಿದೆ?

ನಾನೇ ಅಲ್ಲದೆ ನನ್ನ ಕುಟುಂಬದ ಇತರರು ಸಹ ಸಾರ್ವಜನಿಕ ಜೀವನದೊಡನೆ ಸಂಪರ್ಕವಿಟ್ಟುಕೊಂಡಿದ್ದರು. ನನ್ನ ದೊಡ್ಡ ಅಣ್ಣ ಇಕ್ರಾಮುಲ್ಲಾ ಖಾನ್ ಫ್ರಾನ್ಸಿನಲ್ಲಿ ಪಾಕಿಸ್ತಾನದ ರಾಯಭಾರಿಯಾಗಿದ್ದರು. ನನ್ನ ತಂದೆಯವರು ಸೆಂಟ್ರಲ್ ಅಸೆಂಬ್ಲಿಯ ಒಬ್ಬ ಸ್ವತಂತ್ರ ಸದಸ್ಯರಾಗಿದ್ದರು. ಎರಡನೇ ಚುನಾವಣೆಯಲ್ಲಿ ಅವರು ಸೋತಿದ್ದರು. ಏಕೆಂದರೆ ಕಾಂಗ್ರೆಸ್ ಮಂತ್ರಿಗಳ ಬೆಂಬಲ ಪಡೆದಿದ್ದ ಸಿದ್ದೀಕ್ ಅಲಿಖಾನ್ ಎಂಬ ಉಮೇದುವಾರರನ್ನು ಅವರ ವಿರುದ್ಧ ಚುನಾವಣೆಗಾಗಿ ನಿಲ್ಲಿಸಲಾಗಿತ್ತು. ತಂದೆಯವರು ಸರ್ಕಾರಿ ನೌಕರರಾಗಿದ್ದು ಇಂಗ್ಲಿಷ್ ಸರಕಾರದಿಂದ ಬಿರುದನ್ನು ಪಡೆದಿದ್ದುದು ಸಹ ಅವರ ಸೋಲಿಗೆ ಇನ್ನೊಂದು ಕಾರಣವಾಗಿತ್ತು. ಆದರೆ ಸ್ವಲ್ಪ ಕಾಲಾನಂತರ ಸಿದ್ದೀಕ್ ಅಲಿಖಾನ್‌ಗೆ ಸಹ ಇಂಗ್ಲಿಷರು ಖಾನ್‌ಬಹಾದೂರ್ ಎಂಬ ಬಿರುದನ್ನು ಕೊಟ್ಟರು. ಆಮೇಲೆ ಅವರು ಕಾಂಗ್ರೆಸನ್ನು ಬಿಟ್ಟು ಮುಸ್ಲಿಂಲೀಗ್ ಸೇರಿಕೊಂಡರು. ಅದೂ ಆದ ಮೇಲೆ ಭಾರತವನ್ನು ಬಿಟ್ಟು ಪಾಕಿಸ್ತಾನದ ಪ್ರಜೆಯಾದರು.

ವಿಧಾನಸಭೆ ಸದಸ್ಯರಾಗಿದ್ದಾಗ ನನ್ನ ತಂದೆಯವರು ಸಾಧಾರಣವಾಗಿ ಸರ್ಕಾರದ ಪರವಾಗಿ ಮತ ನೀಡುತ್ತಿದ್ದರು. ಆದರೆ ಯಾವಾಗಲೂ ಹೀಗೆಯೆ ಆಗುತ್ತಿರಲಿಲ್ಲ. ಒಮ್ಮೆ ಯಾವುದೋ ಒಂದು ಮಸೂದೆಯ ಪರವಾಗಿ ನನ್ನ ತಂದೆಯವರು ಮತ ನೀಡಲೆಂದು ಸರಕಾರ ತುಂಬ ಪ್ರಯತ್ನಿಸುತ್ತಿತ್ತು. ಮತದಾನ ಶುರುವಾದಾಗ ಸಿಂಧ್ ಪ್ರಾಂತ್ಯದ ಸದಸ್ಯರಾಗಿದ್ದ ದಿವಂಗತ ಹರವಿಲಾಸ ಶಾರದಾ ಅವರು ತಂದೆಯವರ ಬಳಿಗೆ ಬಂದು ಕಾಗದದಲ್ಲಿ ಒಂದು ಶೇರನ್ನು [ಒಂದು ವಿಧವಾದ ಕವಿತೆ] ಕೊಟ್ಟರು. ಅದರ ಭಾವ ಹೀಗಿದೆ:

ಬನ್ನಿ ರಾಜರೂ ಇತ್ತ ಬಾ ಗೆಳೆಯ ಸಾಗಿ ನಮ್ಮೆಡೆಗೆ
ಮನದಾಸೆ ನಮ್ಮದು ಸಹ ಈಡೇರಲಿ ಒಮ್ಮೆ

ಧರ್ಮಾಂಧತೆಯ ಅಂಥ ಸಾಲುಗಳು ಮತ್ತು ನನ್ನ ತಂದೆಯವರ ಕಾವ್ಯಪ್ರೇಮ. ಎರಡರ ಪರಿಣಾಮವಾಗಿ ಶಾರದಾ ಸಾಹೇಬರನ್ನು ತಂದೆಯವರು ಆಲಿಂಗಿಸಿಕೊಂಡರು. ಅವರೊಡನೆಯೆ ಮತದಾನ ಮಾಡಿದರು. ಕೇವಲ ಒಂದು ಮತದಿಂದ ಸರಕಾರ ಸೋಲಬೇಕಾಯ್ತು. ಆದರೆ ತನ್ನ ಸೋಲಿಗೆ ಪ್ರತ್ಯಕ್ಷವಾಗಿ ಯಾರು ಕಾರಣರಾಗಿದ್ದರು ಎಂಬುದು ಸರಕಾರಕ್ಕೆ ಕಡೆಯವರೆಗೂ ಗೊತ್ತಾಗಲೇ ಇಲ್ಲ.

ನನ್ನ ಸರದಿ ಬಂದಾಗ ನಾನು ಸಹ ಸರಕಾರದ ಬಗೆಗೆ ಕುರುಡು ನಂಬಿಕೆ

ಗಳನ್ನು ತಳೆಯಬಾರದೆಂದು ತೀರ್ಮಾನಿಸಿದೆ. ಹಾಗೆ ನೋಡಿದರೆ ನಾನು ಒಬ್ಬ ವಿಶಿಷ್ಟ ನ್ಯಾಯಶಾಸ್ತ್ರ ಪ್ರಾಧ್ಯಾಪಕನೆಂದೂ ವಕೀಲನೆಂದೂ ಹೆಸರು ಗಳಿಸಿದ್ದನಾದರೂ ನನ್ನ ಯಶಸ್ಸಿನಲ್ಲಿ ಅದೃಷ್ಟದ ಕೃಪಾದ ಬಹಳವಾಗಿತ್ತೆಂದು ಭಾವಿಸುತ್ತೇನೆ. ೧೯೪೩ ರಲ್ಲಿ ಗವರ್ನರ್ ತ್ಯಾಯಿಸಂ ನನ್ನನ್ನು ಅಡ್ವೋಕೇಟ್ ಜನರಲ್ ಆಗಿ ನೇಮಕ ಮಾಡಿದರು. ಆದರೆ ವಾಸ್ತವವಾಗಿ ಆರು ಮಂದಿಯ ಪಟ್ಟಿಯಲ್ಲಿ ನನ್ನದೇ ಕೊನೆಯ ಹೆಸರು. ಮುಖ್ಯ ನ್ಯಾಯಾಧೀಶ ಫ್ರೆಡರಿಕ್ ಗ್ರಿಲ್ ಅವರಿಗೆ ಇದು ಸರಿತೋರಲಿಲ್ಲ. ಆದರೂ ಸರಕಾರದಿಂದ ಉಪಕೃತನಾದರೂ ನಾನು ನನಗೆ ನ್ಯಾಯೋಚಿತವೆಂದು ಕಂಡುಬಂದ ಅಭಿಪ್ರಾಯಗಳನ್ನೇ ಸರಕಾರಕ್ಕೆ ಕೊಡುತ್ತಿದ್ದೆ. ಸರಕಾರವನ್ನು ಓಲೈಸುವ ನೀತಿಯನ್ನು ನಾನು ಎಂದೂ ಅಳವಡಿಸಿಕೊಳ್ಳಲಿಲ್ಲ.

ಸರಕಾರ 'ಇಂಡಿಯ ಇನ್ ೧೯೪೨' ಎಂಬ ಸರಕಾರಿ ಪ್ರಕಾಶನವನ್ನು ಆಧಾರವಾಗಿಟ್ಟುಕೊಂಡು 'ಗಢನಾಳಿ ಚಿತ್ರಾವಳಿ'ಯ ವಿವರಗಳನ್ನು ಪ್ರಕಟಪಡಿಸಿದುದಕ್ಕಾಗಿ ಒಂದು ಪತ್ರಿಕೆಯ ಮೇಲೆ ಕ್ರಮ ಕೈಗೊಳ್ಳಲು ಬಯಸಿದಾಗ ನಾನು ತೀವ್ರವಾಗಿ ಅದನ್ನು ವಿರೋಧಿಸಿದೆ. ಗವರ್ನರ್ ನಿರುಪಾಯರಾಗಿ ನನ್ನ ಮಾತುಗಳಿಗೆ ಬೆಲೆ ಕೊಡಬೇಕಾಯಿತು. ಹಾಗಾಗಿ ಪತ್ರಿಕೆಯ ವಿರುದ್ಧ ಕ್ರಮ ಕೈಗೊಳ್ಳುವುದು ನಿಂತಿತು.

ಮಹಾಯುದ್ಧ ನಡೆದ ದಿನಗಳು. ಗವರ್ನರ್ ಮಹಾಶಯರು ವಾರ್ಧಾದಲ್ಲಿನ ಗಾಂಧೀಜಿಯವರ ಆಶ್ರಮವನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಲು ಬಯಸಿದರು. ನನ್ನ ಅಭಿಪ್ರಾಯವನ್ನು ಕೋರಿ ಅದರ ಸಂಬಂಧಪಟ್ಟ ಕಡತವನ್ನು ನನ್ನ ಬಳಿಗೆ ಕಳುಹಿಸಿದರು. ಕಾಂಗ್ರೆಸ್ಸನ್ನು ಅಂದಿನವರೆಗೆ ಕಾನೂನು ವಿರೋಧಿ ಸಂಸ್ಥೆಯೆಂದು ಘೋಷಿಸಿರಲಿಲ್ಲವೆಂಬ ಆಧಾರದ ಮೇಲೆ ನಾನು ಸರಕಾರ ಉದ್ದೇಶಿಸಿದ್ದ ಈ ಕ್ರಮವನ್ನು ವಿರೋಧಿಸಿದೆ. ಹಾಗೆಯೇ ಆಶ್ರಮದ ಕಡೆಯಿಂದ ಯಾವುದೇ ಹಾನಿಕರವಾದ ಇಲ್ಲವೆ ಅನಾನುಕೂಲಕರವಾದ ಕೆಲಸ ನಡೆದಿಲ್ಲವೆಂದು ಸ್ಪಷ್ಟಪಡಿಸಿದೆ. ಗವರ್ನರ್ ಅವರಿಗೆ ನನ್ನ ಅಭಿಪ್ರಾಯದಿಂದ ಸಮಾಧಾನವಾಗಲಿಲ್ಲ. ಅವರು ತಮ್ಮ ಕೈಯಿಂದಲೆ 'ಅಡ್ವೊಕೇಟ್-ಜನರಲ್ ಇನ್ನೊಮ್ಮೆ ಪರಿಶೀಲಿಸಲು ಸಾಧ್ಯವೆ?' ಎಂಬ ಟಿಪ್ಪಣಿ ಬರೆದು ಇನ್ನೊಮ್ಮೆ ಮರುಪರಿಶೀಲನೆಗಾಗಿ ಕಡತವನ್ನು ನನ್ನ ಬಳಿಗೆ ಕಳುಹಿಸಿದರು. 'ಈ ಬಗ್ಗೆ ನಾನು ಮತ್ತೇನೂ ಹೇಳುವುದೇನಿಲ್ಲ' ಎಂಬುದಾಗಿ ಟಿಪ್ಪಣಿ ಬರೆದು ನಾನು ಅವರಿಗೆ ಹಿಂದಿರುಗಿಸಿದೆ. ಗವರ್ನರ್ ಕಡತವನ್ನು ಭಾರತ ಸರಕಾರದ ಬಳಿಗೆ ಕಳುಹಿಸಿದರು. ಸರ್ಕಾರ

ನನ್ನ ಸಲಹೆಯನ್ನು ಒಪ್ಪುವಂತೆ ಅವರಿಗೆ ನಿರ್ದೇಶನ ನೀಡಿತು. ಇದರಿಂದಾಗಿ ಗಾಂಧೀಜಿಯವರ ಆಶ್ರಮ ಸರಕಾರದ ಕೈಸೇರುವುದು ತಪ್ಪಿತು.

ಅದೇ ವರ್ಷ ನಾನು ನ್ಯಾಯಾಧೀಶ ಕೂಡ ಆದೆ [೧೯೪೬]. ನನಗೆ ಓ.ಬಿ.ಇ. ಪದವಿ ಸಹ ಸಿಕ್ಕಿತು. ಅವರೂ ಈ ಘಟನೆಯ ಅನಂತರ ಗವರ್ನರ್ ಅವರಿಗೆ ನನ್ನ ಬಗೆಗೆ ವಿಶ್ವಾಸ ಅಷ್ಟಕ್ಕಷ್ಟೆ ಇತ್ತು. ಅದೇ ವರ್ಷ ಅವರಿಗೆ ವರ್ಗವಾಯಿತು. ಬೀಳ್ಕೊಡುಗೆ ಸಮಾರಂಭದಲ್ಲಿ ನಾವಿಬ್ಬರೂ ಪರಸ್ಪರ ಕೈ ಸಹ ಕುಲುಕಲಿಲ್ಲ. ಅವರು ತಮ್ಮ ಅಧಿಕಾರಾವಧಿಯಲ್ಲಿ ಗಾಂಧೀಜಿಯವರ ಆಶ್ರಮವನ್ನು ಕೈವಶ ಮಾಡಿಕೊಂಡ 'ಕೀರ್ತಿ'ಯನ್ನು ಪಡೆಯಬಯಸಿದ್ದರು. ಆದರೆ ಅವರ ಬಯಕೆ ಈಡೇರಲು ನಾನು ಅವಕಾಶ ಕೊಟ್ಟಿರಲಿಲ್ಲ.

ನಾಡಿನ ವಿಭಜನೆಯಾದಾಗ ನಮ್ಮ ನೆರೆಹೊರೆಯವರಾಗಿದ್ದ ಆರು ಮುಸಲ್ಮಾನ ಕುಟುಂಬಗಳ ಪೈಕಿ ಕೇವಲ ಎರಡು ಮಾತ್ರ ಭಾರತದಲ್ಲಿ ಉಳಿಯಿತು. ಜಿನ್ನಾ, ಜಫರುಲ್ಲಾಖಾನ್ ಮತ್ತು ಗುಲಾಂಮಹಮ್ಮದ್ ಪಾಕಿಸ್ತಾನಕ್ಕೆ ಬಂದುಬಿಡುವಂತೆ ನನ್ನನ್ನು ತುಂಬ ಪುಸಲಾಯಿಸಿದರು. ನನ್ನನ್ನು ಆ ಕೂಡಲೇ ಪಾಕಿಸ್ತಾನದ ಫೆಡರಲ್ ಕೋರ್ಟಿನ ನ್ಯಾಯಾಧೀಶನನ್ನಾಗಿ ನೇಮಕ ಮಾಡುವ ಪ್ರಸ್ತಾವನೆಯನ್ನು ಸಹ ಜಫರುಲ್ಲಾಖಾನ್ ಮುಂದಿಟ್ಟರು. ಭಾರತದಲ್ಲಿ ನನಗೆ ಎಂದೂ ಮುಂದೆ ಬರುವ ಅವಕಾಶ ಸಿಕ್ಕದೆಂದು ಆಗ್ರಹಪೂರ್ವಕವಾಗಿ ಹೇಳಿದರು. ಆದರೆ ಅವರ ಪ್ರಯತ್ನಗಳೆಲ್ಲ ನೀರಿನಲ್ಲಿ ಹೋಮ ಮಾಡಿದಂತಾಯಿತು. ನಾನು ಭಾರತದಲ್ಲಿ ಮುಖ್ಯ ನ್ಯಾಯಾಧೀಶನಾದಾಗ ಬಹುಶಃ ಅವರಿಗೆ ಭಾರತದಲ್ಲಿ ಇಂಥ ನೇಮಕಗಳನ್ನು ಮಾಡುವಾಗ ಧರ್ಮ ಅಡ್ಡ ಬರುವುದಿಲ್ಲವೆಂಬ ಅಂಶ ಮನವರಿಕೆಯಾಗಿರಬೇಕು.

ನಾನು ನನ್ನ ವೃತ್ತಿ ಜೀವನದಲ್ಲಿ ಅನೇಕ ಮಹತ್ವಪೂರ್ಣ ವಿಷಯಗಳ ಬಗ್ಗೆ ತೀರ್ಮಾನವಿತ್ತಿದ್ದೇನೆ. ಇಂಥದೇ ತುಂಬ ಆಸಕ್ತಿ ಹುಟ್ಟಿಸುವಂತಹ ಒಂದು ಪ್ರಸಂಗ ನನ್ನ ನೆನಪಿಗೆ ಬರುತ್ತಿದೆ. ಲಾಹೋರ್ (ನಾನು ಅಲ್ಲಿಯವನೇ) ಕ್ಷೇತ್ರದ ಒಬ್ಬ ಸೋತ ಜನಸಂಘದ ಉಮೇದುವಾರ ಹಾಲಿ ಮಂತ್ರಿಯೊಬ್ಬರ ವಿರುದ್ಧ ಅಪೀಲು ಸಲ್ಲಿಸಿದ್ದ. ಚುನಾವಣೆಯಲ್ಲಿ ಸರ್ಕಾರಿ ನೌಕರರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗಿದೆಯೆಂಬುದು ಅವನ ಅಹವಾಲಾಗಿತ್ತು. ಹಾಲಿ ಮಂತ್ರಿಯವರು ಮುಸಲ್ಮಾನರು, ನನ್ನ ಕುಟುಂಬದ ಹತ್ತಿರದ ಮಿತ್ರರು. ಮಂತ್ರಿಯವರು ಮುಸಲ್ಮಾನರಾದುದರಿಂದ ಪರಿಚಿತರಾದುದರಿಂದ ನಾನು ಅವರ ಪರವಾಗಿರುತ್ತೇನೆಂಬ ಅನುಮಾನ ಅಪೀಲುದಾರರದಾಗಿತ್ತು. ಶ್ರೀಸೇನ್ ಅವರು

ನನ್ನ ಜೊತೆಯ ನ್ಯಾಯಾಧೀಶರು. ಅವರ ಬಗ್ಗೆ ಅಪೀಲುದಾರರಿಗೆ ಅನುಮಾನವಿರಲಿಲ್ಲ. ಅವರ ವಕೀಲರು ಅನೇಕ ಕಾರಣಗಳನ್ನು ನೀಡಿ ಮೊಕದ್ದಮೆಯನ್ನು ಸ್ಥಗಿತಗೊಳಿಸಲು ಕೋರಿಕೆ ಸಲ್ಲಿಸಿದರು. ಆದರೆ ನಾನು ಒಪ್ಪಲಿಲ್ಲ.

ಮಂತ್ರಿ ಮಹಾಶಯರ ವಿರುದ್ಧ ಸಲ್ಲಿಸಲಾಗಿದ್ದ ಸಾಕ್ಷ್ಯಗಳಲ್ಲಿ ಒಂದಂತೂ ಮೊಕದ್ದಮೆಯನ್ನು ತೀರ್ಮಾನಕ್ಕೆ ಕೊಂಡೊಯ್ಯುವುದರಲ್ಲಿ ತುಂಬಾ ನೆರವಾಗಿತ್ತು. ಚುನಾವಣೆಯ ದಿನಗಳಲ್ಲಿ ಭೂಪಾಲಿನಿಂದ ಸೆಹೋರಿಗೆ ಮತ್ತು ಸೆಹೋರಿನಿಂದ ಭೂಪಾಲಿಗೆ ಮಂತ್ರಿಯವರ ಹಾಗೂ ಸೆಹೋರಿನ ಜಿಲ್ಲಾ ನ್ಯಾಯಾಧೀಶರ ನಡುವೆ ನಡೆದ ದೂರವಾಣಿ ಸಂಭಾಷಣೆಗಳ ಪಟ್ಟಿ ಬಹಳ ಮುಖ್ಯವಾದ್ದಾಗಿತ್ತು. ಇದರಿಂದ ಮಂತ್ರಿಯವರು ಈ ಅಧಿಕಾರಿಯಿಂದ ಅನುಚಿತ ನೆರವನ್ನು ಪಡೆದಿದ್ದರೆಂಬುದಕ್ಕೆ ಸ್ಪಷ್ಟವಾದ ಸೂಚನೆ ದೊರೆಯುತ್ತಿತ್ತು. ಒಂದು ನಿರ್ಣಾಯಕ ಅಂಶವೆಂದರೆ ಈ ಅಧಿಕಾರಿಗೆ ಮತ್ತು ಮಂತ್ರಿಗಳಿಗೆ ಸರಕಾರಿ ಕೆಲಸ ಹೊರತಂತೆ ಯಾವ ನೇರವಾದ ಸಂಬಂಧವೂ ಇರಲಿಲ್ಲ. ಅಂದರೆ ಅವರ ಸಂಬಂಧಿಕರಿಗೂ ಈ ಅಧಿಕಾರಿಗೂ ಯಾವ ಸಂಬಂಧವೂ ಇಲ್ಲ ಎಂಬುದು ಸ್ಪಷ್ಟವಾಗಿತ್ತು. ಚುನಾವಣೆಯ ದಿನಗಳಲ್ಲಿ ಈ ಅಧಿಕಾರಿಯೊಡನೆ ಇಷ್ಟೊಂದು ಸಂಭಾಷಣೆ ನಡೆಸುವ ಅಗತ್ಯ ಏನಿತ್ತೆಂಬ ಬಗೆಗೆ ಮಂತ್ರಿಗಳು ತೃಪ್ತಿಕರವಾದ ಉತ್ತರ ನೀಡಲಾಗಲಿಲ್ಲ. ನ್ಯಾಯಾಲಯದ ತೀರ್ಪಿನನುಗುಣವಾಗಿ ಮಂತ್ರಿ ಮಹಾಶಯರು ತಮ್ಮ ಸ್ಥಾನವನ್ನು ಬಿಟ್ಟುಕೊಡಬೇಕಾಯಿತು. ನಾನು ಮುಸಲ್ಮಾನ ಮಂತ್ರಿಯ ಪರವಾಗಿ ತೀರ್ಪು ನೀಡುತ್ತೇನೆಂಬ ಆತಂಕವಿದ್ದವರಿಗೆ ಈ ನನ್ನ ತೀರ್ಪಿನಿಂದ ಸಂತೋಷವಾಗಿರಬೇಕು.


ಶ್ರೀ ಜಾಕಿರ್ ಹುಸೇನ್ ಅವರು ನಿಧನರಾದ ಮೇಲೆ ಉಪರಾಷ್ಟ್ರಪತಿ ಶ್ರೀ ಗಿರಿಯವರು ರಾಷ್ಟ್ರಪತಿಯ ಸ್ಥಾನಕ್ಕಾಗಿ ಚುನಾವಣೆಗೆ ನಿಲ್ಲಲು ತೀರ್ಮಾನಿಸಿದಾಗ ನಾನು ಮೂವತ್ತೈದು ದಿನಗಳ ಕಾಲ ರಾಷ್ಟ್ರಪತಿಯಾಗಿದ್ದೆ. ಆದರೆ ಈ ಅವಧಿಯಲ್ಲಿ ನಾನು ರಾಷ್ಟ್ರಪತಿ ಭವನದಲ್ಲಿ ಹೋಗಿ ಇರಲು ಒಪ್ಪಲಿಲ್ಲ. ಅಮೆರಿಕದ ಅಧ್ಯಕ್ಷ ನಿಕ್ಸನ್ ಅವರು ಭಾರತಕ್ಕೆ ಪ್ರವಾಸ ಬಂದಿದ್ದಾಗ ಮಾತ್ರ. ಕೇವಲ ಎರಡು ದಿನಗಳ ಕಾಲ ನಾನು ಅಲ್ಲಿಗೆ ಹೋಗಿ ಇರಬೇಕಾಯಿತು.

ನಾನು ನಾಗಪುರದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶನಾಗಿದ್ದಾಗ ನಡೆದ ಮಾತು. ಆಗ ಭಾರತದ ಅಂದಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಎಸ್. ಆರ್. ದಾಸ್‌ರವರು ಕಲ್ಕತ್ತ ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ಹುದ್ದೆಯ ಬಗ್ಗೆ ನನ್ನ ಅಭಿಪ್ರಾಯ ಏನೆಂದು ಕೇಳಿದರು. 'ನನ್ನದೇನೂ

ಅಭಿಪ್ರಾಯವಿಲ್ಲ' ಎಂಬುದಾಗಿ ಹೇಳಿದೆ. ಈ ಮಾತು ಅಲ್ಲಿಗೇ ನಿಂತಿತು. ಸ್ವಲ್ಪ ದಿನಗಳು ಕಳೆದ ಮೇಲೆ ಅವರ ಅಳಿಯ ಮತ್ತು ಕಾನೂನು ಸಚಿವರಾಗಿದ್ದ ಶ್ರೀ ಎ.ಕೆ. ಸೇನ್ ಅವರು ಕಲ್ಕತ್ತೆಯ ಮುಖ್ಯ ನ್ಯಾಯಾಧೀಶ ಶ್ರೀ ಕೆ. ಸಿ. ದಾಸಗುಪ್ತರೊಂದಿಗೆ ಪರಸ್ಪರ ವರ್ಗ ಮಾಡಿಸಿಕೊಳ್ಳಲು ಸಿದ್ಧವೇ ಎಂದು ವಿಶೇಷವಾಗಿ ಕೇಳಿದರು. ಸುಪ್ರೀಂ ಕೋರ್ಟಿನ ನ್ಯಾಯಾಧೀಶ ಶ್ರೀ ಇಮಾಂ ಅವರು ನಿವೃತ್ತರಾದ ಮೇಲೆ ಆ ಹುದ್ದೆಯನ್ನು ನನಗೆ ಕೊಡುವುದಾಗಿ ಸಹ ಹೇಳಿದರು. ಬೇರೆ ಮಾತಿನಲ್ಲಿ ಹೇಳುವುದಾದರೆ ಸುಪ್ರೀಂ ಕೋರ್ಟಿನಲ್ಲಿ ಮುಸಲ್ಮಾನರಿಗಾಗಿ ಕಾದಿರಿಸಿರುವ ಹುದ್ದೆಯನ್ನು ನನಗೆ ನೀಡುವುದಾಗಿ ಪ್ರಸಲಾಯಿಸುತ್ತಿದ್ದರು. ನಾನು ಆ ಸಲಹೆಯನ್ನು ಅಲ್ಲಿಯೆ ತಿರಸ್ಕರಿಸಿಬಿಟ್ಟೆ. ಶ್ರೀ ಸೇನರು ಮರುನುಡಿಯಲಿಲ್ಲ.

ಅನಂತರ ನಾನು ದಾಸಗುಪ್ತರಿಗಿಂತ ಮೊದಲೇ ಸುಪ್ರೀಂ ಕೋರ್ಟಿಗೆ ಹೋಗಿ ನ್ಯಾಯಮೂರ್ತಿ ಇಮಾಂ ಅವರ ಜೊತೆಯಲ್ಲೇ ಇನ್ನೊಬ್ಬ ಮುಸಲ್ಮಾನ ನ್ಯಾಯಾಧೀಶನಾದೆ. ಒಂದು ವಿಧದಲ್ಲಿ ಹೇಳುವುದಾದರೆ ಸುಪ್ರೀಂ ಕೋರ್ಟಿನಲ್ಲಿ ಮುಸಲ್ಮಾನರಿಗಾಗಿ ಮೀಸಲಿಟ್ಟಿರುವ ಹುದ್ದೆಯಿಂದ ಬೇರೆಯಾಗಿಯೆ ನೇಮಕಗೊಂಡ ಸುಪ್ರೀಂ ಕೋರ್ಟಿನ ಮೊದಲ ನ್ಯಾಯಾಧೀಶ ನಾನೇ ಆಗಿದ್ದೆ.

ಲಕ್ಷ್ಮೀನಾರಾಯಣ ಅರೋರಾ



ದೇವರು ಬೇಡುವವನಿಗೆ ಬೇಡಿದಷ್ಟನ್ನು ಕೊಡುವನು. ಆತ್ಮ ಸಮರ್ಪಣ ಮಾಡಿಕೊಂಡು ತನ್ನನ್ನು ಬೇಡದವನಿಗೆ ದೇವನು ಕೊಡುವುದನ್ನೆಲ್ಲ ಕೊಟ್ಟು ಜೊತೆಗೆ ಇರಿಸಿಕೊಂಡು ಕಾಪಾಡುವ ಬಂದು ಬುತ್ತಿಯನ್ನೇ ಕೂಡಿಡುತ್ತಾನೆ.

ಶ್ರೀ ಅರವಿಂದ

ಪ್ರನಾಳ ವೃಕ್ಷ

ಸಸ್ಯದ ವಿವಿಧ ಭಾಗಗಳನ್ನು ಕೃತಕವಾದ ವಾತಾವರಣದಲ್ಲಿ ಬೆಳೆಸಿ, ಇಡೀ ಸಸ್ಯವಾಗಿ ರೂಪುಗೊಳ್ಳಲು ಬೇಕಾದಂಥ ಕಾಂಡ, ಬೇರು, ಹೂವುಗಳನ್ನು ಪಡೆದಂಥ ಸಸ್ಯಕ್ಕೆ ವಿಶಾಲ ಅರ್ಥದಲ್ಲಿ 'ಪ್ರನಾಳ ವೃಕ್ಷ' ಎಂದು ಕರೆಯುತ್ತಾರೆ. ಈ ರೀತಿ ಕೃತಕವಾದ ವಾತಾವರಣದಲ್ಲಿ ಸಸ್ಯ ಅಥವಾ ಸಸ್ಯದ ಅಂಗಭಾಗಗಳನ್ನು ಕ್ರಿಮಿಶೂನ್ಯವಾಗಿ ಬೇರ್ಪಡಿಸಿ ಬೆಳೆಸುವಂಥ ಕೃಷಿಗೆ ಪ್ಲಾಂಟ್ ಟಿಶ್ಯೂ ಕಲ್ಚರ್ ಎಂದೂ ಕರೆಯುತ್ತಾರೆ.

ಪ್ರಾಯೋಗಿಕವಾಗಿ ಪ್ರನಾಳಗಳಲ್ಲಿ ಸಸ್ಯದ ಅಂಗಭಾಗಗಳನ್ನು ಬೇರ್ಪಡಿಸಿ ಯಶಸ್ವಿಯಾಗಿ ಬೆಳೆಸುವುದು ಅಷ್ಟು ಸುಲಭವಾದ ಕಾರ್ಯವೇನಲ್ಲ. ಸ್ವಾಭಾವಿಕವಾಗಿ ಒಂದು ಸಸ್ಯ ಬೆಳೆಯಬೇಕಾದರೆ ಅದಕ್ಕೆ ನಿರ್ದಿಷ್ಟ ಪ್ರಮಾಣದ ಗಾಳಿ-ಬೆಳಕು ಅವಶ್ಯಕವಾಗಿರುವಂತೆ, ಅನೇಕ ಬಗೆಯ ವಿಟಮಿನ್‌ಗಳು, ಹಾರ್ಮೋನುಗಳು ಅವಶ್ಯಕ. ಪ್ರನಾಳಗಳಲ್ಲಿ ಸಸ್ಯ ಅಥವಾ ಸಸ್ಯಭಾಗಗಳನ್ನು ಯಶಸ್ವಿಯಾಗಿ ಬೆಳೆಸಬೇಕಾದರೂ ಹದವಾದ ಕೃತಕ ಬೆಳಕು ಹಾಗೂ ಬೆಳೆಸುವಂಥ ದ್ರಾವಣರೂಪಿ ಮಾಧ್ಯಮ ಬಹುಮುಖ್ಯದ ಪಾತ್ರವನ್ನು ವಹಿಸುತ್ತದೆ. ಪ್ರಯೋಗಾಲಯಗಳಲ್ಲಿ ಹದವಾದ ಬೆಳಕನ್ನು ಅನೇಕ ಟ್ಯೂಬ್‌ಲೈಟ್‌ಗಳಿಂದ ಪಡೆಯಬಹುದಾಗಿದೆ. ಪ್ರನಾಳ ವೃಕ್ಷ ಬೆಳೆಸುವ ಮೊದಲು ಒಂದು ವಿಶಿಷ್ಟ ಬಗೆಯ ಮಾಧ್ಯಮದ ಅಗತ್ಯ ಬಹಳ ಮುಖ್ಯ. ಸಸ್ಯಭಾಗಗಳನ್ನು ಬೆಳೆಸಲು ಉಪಯೋಗಿಸುವಂಥ ಮಾಧ್ಯಮಗಳು ಪ್ರಧಾನವಾಗಿ ವಿಟಮಿನ್‌ಗಳು, ಹಾರ್ಮೋನುಗಳ ಸಮ್ಮಿಶ್ರಣವಾದರೂ ಅನೇಕ ಬಗೆಯ ಸಸ್ಯಜನ್ಯ ಮೂಲವಸ್ತುಗಳನ್ನು ಪಡೆದಿರುತ್ತವೆ. ಕೆಲವು ಬಗೆಯ ಮಾಧ್ಯಮಗಳಲ್ಲಿ ನಿರ್ದಿಷ್ಟ ಬಗೆಯ ಹಾರ್ಮೋನುಗಳ ಅಂಶ ಅಧಿಕವಾಗಿದ್ದರೆ ಪ್ರನಾಳಗಳಲ್ಲಿ ಬೆಳೆಯುವಂಥ ಸಸ್ಯದ ಅಂಗಭಾಗಗಳು ವೃದ್ಧಿಗೊಂಡು ಕೇವಲ ಬೇರು ಬಿಡುವುದರಲ್ಲಿ ಸಹಕರಿಸಿದರೆ ಮತ್ತೆ ಕೆಲವು ಬಗೆಯ ಮಾಧ್ಯಮಗಳು ಕಾಂಡಭಾಗವನ್ನು ಬೆಳೆಸುವುದರಲ್ಲಿ ಸಹಕರಿಸುತ್ತವೆ. ಒಂದು ಸಸ್ಯಭಾಗವನ್ನು ಸಂಪೂರ್ಣವಾಗಿ ಬೆಳೆಸಬೇಕಾದರೆ ಹಲವಾರು ಬಗೆಯ ಮಾಧ್ಯಮಗಳಲ್ಲಿ ಬೆಳೆಸಬೇಕಾಗುತ್ತದೆ. ಹಲವಾರು ಬಗೆಯ ಮಾಧ್ಯಮಗಳು ಇಂದು ಸಸ್ಯವಿಜ್ಞಾನಿಗೆ ಗೊತ್ತಿದ್ದರೂ ಪ್ರತಿಯೊಂದು ಬಗೆಯ ಸಸ್ಯವನ್ನು ಪೂರ್ಣ ಪ್ರಮಾಣದಲ್ಲಿ ಬೆಳೆಸಲು ಹಲವಾರು ಬಗೆಯ ಮಾಧ್ಯಮಗಳ ಸಹಾ

ಕೃಪೆ: ಆಕಾಶವಾಣಿ, ಮಂಗಳೂರು.

ತೋಲನ ಅತ್ಯಾವಶ್ಯಕ. ಹೀಗಾಗಿ 'ಟಿಶ್ಯೂ ಕಲ್ಚರ್' ಕೃಷಿ ಅತಿ ಕಷ್ಟಕರವಾದ ವ್ಯವಸಾಯ. ಹೀಗಿದ್ದರೂ ಈ ದಶಕದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಗಳಿಸುತ್ತಿರುವ ಸಂಶೋಧನೆ—ಪ್ರನಾಳ ವೃಕ್ಷದ ಬೆಳೆ.

ಒಂದು ಜೀವಿಯ ಅಂಗ ಅಥವಾ ಅಂಗಭಾಗಗಳನ್ನು ಪ್ರಾಯೋಗಿಕವಾಗಿ ಬೆಳೆಸುವ ಕ್ರಿಯೆ ಇತ್ತೀಚಿನ ದಿನಗಳಲ್ಲಿ ಜೀವವಿಜ್ಞಾನಿಗೆ ಹೆಚ್ಚು ಪರಿಚಿತವಾದ ಸಂಶೋಧನೆಯಾದರೂ ಸಸ್ಯವಿಜ್ಞಾನಿಗೆ ಹೊಸದೇನಲ್ಲ. ಈ ಶತಮಾನದ ಆದಿಯಲ್ಲಿ ಜರ್ಮನ್ ವಿಜ್ಞಾನಿಯೊಬ್ಬ ಸಸ್ಯಗಳಿಂದ ಜೀವಕೋಶ ಮತ್ತು ಅಂಗಾಂಶಗಳನ್ನು ಪ್ರತ್ಯೇಕಿಸಿ ಪ್ರನಾಳಗಳಲ್ಲಿ ಬೆಳೆಸಲು ಪ್ರಯತ್ನಿಸಿದ್ದ. ಈ ದಿಸೆಯಲ್ಲಿ ಆತ ಸಂಪೂರ್ಣ ಯಶಸ್ಸನ್ನು ಗಳಿಸದಿದ್ದರೂ ಪ್ರನಾಳಗಳಲ್ಲಿ ಸಸ್ಯದ ಕೋಶ ಅಥವಾ ಅಂಗಾಂಶವನ್ನು ಬೆಳೆಸಬಹುದಾದ ಸಾಧ್ಯತೆಯನ್ನು ತೋರಿಸಿದ್ದ. ೧೯೪೦ರ ವೇಳೆಗೆ ಪ್ರನಾಳಗಳಲ್ಲಿ ಸಸ್ಯಭಾಗಗಳನ್ನು ಬೆಳೆಸುವಂಥ ಅಭ್ಯಾಸ ವಿಜ್ಞಾನಿಗಳಲ್ಲಿ ಆಸಕ್ತಿಯನ್ನು ಕೆರಳಿಸಿತು. ಯಾವುದೇ ಸಸ್ಯದ ಅಂಗಭಾಗಗಳನ್ನು ಪ್ರತ್ಯೇಕಿಸಿ ಬೆಳೆಸಬೇಕಾದರೂ ಕನಿಷ್ಟಪಕ್ಷ ಅನೇಕ ಬಗೆಯ ಖನಿಜಾಂಶ ಇರುವ, ಲವಣಗಳು ಹಾಗೂ ಶಕ್ತಿಯ ಆಗರವಾದ ಸುಕ್ರೋಸ್ ಎಂಬ ಶರ್ಕರ ಅವಶ್ಯಕ. ಎಳನೀರು, [illegible] ಸಾರ, ಕೆಲವೊಮ್ಮೆ ಸಸ್ಯಭಾಗಗಳ ಸಾರ ಮಾಧ್ಯಮದಲ್ಲಿರುವುದು ಬಹುಮುಖ್ಯ. ಅಲ್ಲದೆ ಯೀಸ್ಟ್ ಸಾರ ಹಾಗೂ ದನದ ಮಾಂಸದ ಸಾರ ಮುಖ್ಯವೆಂಬ ತಿಳುವಳಿಕೆ ಬಹುಬೇಗ ಬಂದಿತು. ಹಲವಾರು ನಿಮ್ನಜಾತಿಯ ಸಸ್ಯಗಳಿಂದ ಪಾಚಿ-ಶಿಲಾವಲ್ಕಗಳನ್ನು ಪ್ರನಾಳಗಳಲ್ಲಿ ಬೆಳೆಸಬಹುದಾದ ಸಾಧ್ಯತೆಯನ್ನು ಕೆಲವು ವಿಜ್ಞಾನಿಗಳ ಗಮನ ಸೆಳೆದಿತ್ತು.

೧೯೫೫ರ ವೇಳೆಗೆ ಅಮೆರಿಕದ ವಿಜ್ಞಾನಿಯೊಬ್ಬ ಹೊಗೆಸೊಪ್ಪಿನ ಗಿಡಗಳಿಂದ ಕೋಶಗಳನ್ನು ಪ್ರತ್ಯೇಕಿಸಿ ಅನೇಕ ಬಗೆಯ ಪ್ರಾಣಯುಕ್ತ ಮಾಧ್ಯಮಗಳಲ್ಲಿ ಯಶಸ್ವಿಯಾಗಿ ಬೆಳೆಸಬಹುದೆಂಬ ಸಾಧ್ಯತೆಯನ್ನು ತೋರಿಸುವುದರ ಜೊತೆಗೆ, ಸ್ವಾಭಾವಿಕವಾಗಿ ತಳಿಕೂಡಿಸಲು ಅಸಾಧ್ಯವೆನಿಸಿದ ತಳಿಗಳನ್ನು ಪ್ರನಾಳಗಳಲ್ಲಿ ಪ್ರತ್ಯೇಕವಾಗಿ ಬೆಳೆಸಿ ತಳಿಕೂಡಿಸಬಹುದಾದ ಸಾಧ್ಯತೆಯನ್ನು ಮನಗಂಡಿದ್ದ. ಒಂದು ಜಾತಿಯ ಸಸ್ಯದಿಂದ ಪ್ರತ್ಯೇಕಿಸಿದ ಬಿಡಿ ಜೀವಕೋಶಗಳನ್ನು ವಿಶೇಷ ಮಾಧ್ಯಮದಲ್ಲಿ ಬೆಳೆಸಿದಾಗ ಅದು ವಿಭಜನೆಗೊಂಡು ಹಲವಾರು ಕೋಶಗಳ ಸಮೂಹವಾಗುತ್ತದೆ. ಇಂಥ ಕೋಶ ಸಮೂಹವನ್ನು 'ಕ್ಯಾಲಸ್' ಎಂದು ಕರೆಯುತ್ತಾರೆ. ಕ್ಯಾಲಸ್‌ನಿಂದ ಮತ್ತೆ ಕೋಶಗಳನ್ನು ಪ್ರತ್ಯೇಕಿಸಿ ಬೆಳೆಸಿದರೆ ಅವು ಮತ್ತೆ ವಿಭಜನೆಗೊಂಡು ವರ್ಧಿಸುವ ಸಾಮರ್ಥ್ಯ 'ಪ್ರನಾಳ ವೃಕ್ಷ'ದ ಸಂಶೋಧನೆ

ಯಲ್ಲಿ ಅತಿಮುಖ್ಯವಾದ ಅಂಶ. ಅಮೆರಿಕೆಯ ಮತ್ತೊಬ್ಬ ವಿಜ್ಞಾನಿ ಸ್ವಾಭಾವಿಕವಾಗಿ ವಿಭಜನೆಗೊಳ್ಳುವ ಸಾಮರ್ಥ್ಯವನ್ನು ಕಳೆದುಕೊಂಡಂಥ ಜೀವಕೋಶಗಳನ್ನು ಕ್ಯಾರೆಟ್ ಸಸ್ಯದ ಬೇರಿನಿಂದ ಬೇರ್ಪಡಿಸಿ, ಪ್ರನಾಳಗಳಲ್ಲಿ ಬೆಳೆಸಿದಾಗ ಆ ಜೀವಕೋಶ ವಿಭಜನಾ ಸಾಮರ್ಥ್ಯವನ್ನು ಪಡೆದುಕೊಂಡದ್ದಲ್ಲದೆ ಪರಿವರ್ಧಿಸಿ, ಕ್ರಮೇಣ ಸಂಪೂರ್ಣ ಗಿಡವಾಗಿ ಬೆಳೆಯುವುದನ್ನು ಕಂಡಿದ್ದನು. ಪ್ರನಾಳದಲ್ಲಿ ಬೆಳೆದ ಈ ಸಂಪೂರ್ಣ ಸಸ್ಯ ಸ್ವಾಭಾವಿಕ ವಾತಾವರಣದಲ್ಲಿ ಬೆಳೆಸಿದಾಗ, ಅದರಲ್ಲಿ ಹೂವುಗಳು ಬಿಟ್ಟದ್ದಲ್ಲದೆ, ಆ ಸಸ್ಯದಿಂದ ಬಂದ ಬೀಜಗಳು ಮತ್ತೆ ಮೊಳಕೆಯೊಡೆದು ತಮ್ಮ ಸಂತಾನವನ್ನು ವೃದ್ಧಿಸುವ ಸಾಮರ್ಥ್ಯವನ್ನು ಪಡೆದಿತ್ತು. ಈ ಬಗೆಯ ಸಂಶೋಧನೆಯಿಂದ ಲೈಂಗಿಕ ಕೋಶವಲ್ಲದಂಥ ದೈಹಿಕ ಕೋಶಗಳಿಂದಲೂ ಸಂಪೂರ್ಣ ಸಸ್ಯವನ್ನು ಪಡೆಯಬಹುದೆಂಬ ಅರಿವು ಮೂಡಿಸಿತು. ಅಲ್ಲದೆ ದೈಹಿಕ ಕೋಶಗಳನ್ನು ಪ್ರನಾಳಗಳಲ್ಲಿ ವಿಶಿಷ್ಟ ಮಾಧ್ಯಮದಲ್ಲಿ ಬೆಳೆಸುವುದರಿಂದ ಭ್ರೂಣಗಳನ್ನು ಪಡೆಯಬಹುದೆಂಬ ಹೊಸ ವಿಷಯವೂ ತಿಳಿಯಿತು. ಹೀಗೆ ಮೂಡಿದ ಭ್ರೂಣಗಳನ್ನು ಪ್ರತ್ಯೇಕಿಸಿ ಬೆಳೆಸಿದಾಗ ಸಂಪೂರ್ಣ ಸಸ್ಯವನ್ನೇ ಪಡೆಯಬಹುದಾಗಿದೆ. ಈ ಮೂಲಭೂತ ಸಂಶೋಧನೆ ಇಂದು ಜೀವ ವಿಜ್ಞಾನದಲ್ಲಿ ಜನಪ್ರಿಯವಾಗುತ್ತಿರುವ 'ಕ್ಲೋನಿಂಗ್' ಕಾರ್ಯಕ್ಕೆ ನಾಂದಿಯಾಗಿದೆ.

ಪ್ರನಾಳ ವೃಕ್ಷದ ಬೆಳವಣಿಗೆ ಕೇವಲ ವೈಜ್ಞಾನಿಕ ಕುತೂಹಲಕ್ಕಾಗಿ ಬೆಳೆದು ಬಂದ ರಹಸ್ಯವೆಂದು, ಅದು ಕೇವಲ ಅಕೆಡೆಮಿಕ್ ಎಂದು ಬಹು ವಿಜ್ಞಾನಿಗಳ ಉದ್ಗಾರವಾದರೂ ಈ ಬಗೆಯ ಕೃಷಿ ಅನೇಕ ಬಗೆಯ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಯಶಸ್ವಿಯಾಗಿದೆ. ಉದಾಹರಣೆಗೆ ರೋಗಗಳಿಗೆ ತುತ್ತಾಗದಂಥ ಅಥವಾ ಅಧಿಕ ಇಳುವರಿಯನ್ನು ನೀಡುವಂಥ ಸಸ್ಯಗಳನ್ನು ಸ್ವಾಭಾವಿಕ ಸ್ಥಿತಿಯಲ್ಲಿ ಪಡೆಯಬೇಕಾದರೆ, ಅವನ್ನು ತಳೀಕರಣ ಕ್ರಿಯೆಯಿಂದ ಪಡೆಯಬೇಕು. ಕೆಲವು ಸಸ್ಯಗಳ ಬೀಜ ಮೊಳೆತು ಮರವಾಗಿ ಮತ್ತೆ ಪುನರ್ ಉತ್ಪತ್ತಿಯಾಗಲು ಹಲವಾರು ವರ್ಷಗಳೇ ಬೇಕಾದರೆ, ಮತ್ತೆ ಕೆಲವು ಬಹು ಕಡಿಮೆ ಸಮಯದಲ್ಲಿ ಸಂತಾನೋತ್ಪತ್ತಿಯನ್ನು ಮಾಡುತ್ತವೆ. ರಬ್ಬರ್, ಯೂಕಲಿಪ್ಟಸ್ ತೇಗ ಮತ್ತು ಗಂಧದಂಥ ಮರಗಳು ಸಂತಾನೋತ್ಪತ್ತಿ ಮಾಡಲು ಹಲವಾರು ವರ್ಷಗಳು ತೆಗೆದುಕೊಳ್ಳುವಂಥವು. ಅಂಥ ಸಸ್ಯಗಳಲ್ಲಿ ನಿಯಂತ್ರಿತ ಗುಣಕ್ಕಾಗಿ ತಳಿಯ ಪ್ರಯೋಗಗಳು ನಡೆಸಬೇಕಾದರೆ ಒಬ್ಬನ ಜೀವಮಾನವೂ ಸಾಲದು. ಇಂಥ ತಾಂತ್ರಿಕ ತೊಂದರೆ ಇರುವಂಥ ಸಸ್ಯಗಳ ಒಂದು ಭಾಗವನ್ನು ಪ್ರನಾಳ

ಗಳಲ್ಲಿ ಬೆಳೆಸಿ, ಅಲ್ಪ ಸಮಯದಲ್ಲಿ ನಿರೀಕ್ಷಿತ ಫಲಿತಾಂಶವನ್ನು ಪಡೆಯಬಹುದಾಗಿದೆ. ಈ ಬಗೆಯ ಸಂಶೋಧನೆಗಳು ಬಹುಮಟ್ಟಿಗೆ ಆರ್ಥಿಕವಾಗಿ ಮಹತ್ವಗಳಿಸಿರುವ ಸಸ್ಯಗಳಲ್ಲಿ ಈಗಾಗಲೇ ನಡೆದಿವೆ. ಭಾರತದಲ್ಲಿ ಬೊಂಬಾಯಿಯ ಭಾಭಾ ಅಣುವಿಜ್ಞಾನ ಮತ್ತು ಸಂಶೋಧನಾ ಕೇಂದ್ರದಲ್ಲಿ ಔಷಧಿಗಳಿಗಾಗಿ ಉಪಯೋಗಿಸುವಂಥ ಅನೇಕ ಅಪರೂಪ ಸಸ್ಯಗಳನ್ನು ಪ್ರನಾಳಗಳಲ್ಲಿ ಬೆಳೆಸಿ, ಸಂತಾನೋತ್ಪತ್ತಿ ಮಾಡಿಸುವುದರಲ್ಲಿ ಯಶಸ್ವಿಯಾಗಿರುವುದು ಒಂದು ಪ್ರಮುಖವಾದ ಹೆಜ್ಜೆ. ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಗಂಧದ ಮರದಿಂದ ಬೇರ್ಪಡಿಸಿದ ಜೀವಕೋಶಗಳನ್ನು ವಿವಿಧ ಮಾಧ್ಯಮಗಳಲ್ಲಿ ಬೆಳೆಸಿ ರೋಗಕ್ಕೆ ತುತ್ತಾಗದಂಥ ಗಂಧದ ಮರಗಳ ಸಸಿಗಳನ್ನು ಪಡೆಯಲಾಗಿದೆ.

ಸ್ವಾಭಾವಿಕವಾಗಿ ಬೆಳೆಯುವಂಥ ಗಂಧದ ಮರದ ಸಸಿ ಸ್ಪ್ಯಾಂಡಲ್ ಸ್ಪೈಕ್ ಎಂಬ ರೋಗಕ್ಕೆ ತುತ್ತಾಗುವುದು ಬಹುಸಾಮಾನ್ಯ. ಈ ರೋಗಕ್ಕೆ ತುತ್ತಾದಂಥ ಸಸಿಯು ೩–೪ ವರ್ಷಗಳಲ್ಲಿಯೇ ಸಾಯುತ್ತದೆ. ಇದರಿಂದ ಗಂಧದ ಮರಗಳನ್ನು ವ್ಯಾಪಕವಾಗಿ ಬೆಳೆಸುವುದು ಅಸಾಧ್ಯವಾಗಿದೆ. ಅಲ್ಲದೆ ಗಂಧದ ಮರದ ಸಸಿ ಒಂದು ರೀತಿಯಲ್ಲಿ ಭಾಗಶಃ ಪರತಂತ್ರ ಜೀವಿ. ನಿರ್ದಿಷ್ಟ ಜಾತಿಯ ಸಸಿ ಗಂಧದ ಮರದೊಂದಿಗೆ ಇದ್ದರೆ ಮಾತ್ರ ಗಂಧದ ಮರದ ಸಸಿ ಆಶ್ರಿತ ಮರದಲ್ಲಿ ಬೇರುಗಳನ್ನು ಬಿಟ್ಟು ಹುಲುಸಾಗಿ ಬೆಳೆಯಬಲ್ಲದು. ಅಂದರೆ ಪ್ರನಾಳಗಳಲ್ಲಿ ಬೆಳೆಸುವ ಗಂಧದ ಸಸಿಗಳು ಆಶ್ರಿತ ಸಸ್ಯದ ನೆರವಿಲ್ಲದೆ ಬೆಳೆಯುವ ಸಾಮರ್ಥ್ಯವನ್ನು ಪಡೆದಿರಬೇಕಲ್ಲದೆ ರೋಗ ನಿರೋಧಕ ಗುಣಗಳನ್ನೂ ಪಡೆದಿರಬೇಕಾಗುತ್ತದೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಇವೆರಡೂ ಗುಣಗಳುಳ್ಳಂಥ ಗಂಧದ ಸಸಿಯನ್ನು ಪ್ರನಾಳಗಳಲ್ಲಿ ಬೆಳೆಸಿದ್ದಾರೆ. ಗಂಧದ ಮರದ ಯಾವ ಭಾಗವನ್ನು ಬಳಸಿ ದೊರೆತಂಥ ಕ್ಯಾಲಸ್ಸಿನಿಂದ ಸಂಪೂರ್ಣ ಸಸ್ಯವನ್ನು ಪಡೆಯುವುದಲ್ಲದೆ ಸುಮಾರು ೧೫–೨೦ ವರ್ಷಗಳು ತುಂಬಿದಂಥ ಗಂಧದ ಮರದಿಂದ ಬಿಡಿ ಜೀವಕೋಶಗಳನ್ನು ಬೇರ್ಪಡಿಸಿ ಪ್ರನಾಳಗಳಲ್ಲಿ ಇಡೀ ಸಸ್ಯವನ್ನು ಪಡೆಯಲಾಗಿದೆ. ಹೀಗೆ ದೊರೆತ ನೂತನ ಸಸ್ಯಗಳು ಸ್ಪ್ಯಾಂಡಲ್ ಸ್ಪೈಕ್ ಎಂಬ ರೋಗಕ್ಕೆ ನಿರೋಧಕ ಗುಣಗಳನ್ನು ಪಡೆದಿರುವುದಲ್ಲದೆ, ಸ್ವಾಭಾವಿಕ ವಾತಾವರಣದಲ್ಲಿ ಆಶ್ರಯದಾತನಿಲ್ಲದೆ ಹುಲುಸಾಗಿ ಬೆಳೆಯಬಲ್ಲವು. ಇನ್ನು ಇಂಥ ಸಸ್ಯಗಳನ್ನು ನಿರ್ಲಿಂಗ ರೀತಿಯಲ್ಲಿ ಸಂತಾನೋತ್ಪತ್ತಿ ಹೊಂದುವ ಸಾಮರ್ಥ್ಯವನ್ನು ಪಡೆದಿರುವುದು ಇನ್ನೊಂದು ವಿಶೇಷ. ಇತ್ತೀಚೆಗೆ ದಿಲ್ಲಿ ವಿಶ್ವವಿದ್ಯಾನಿಲಯದವರು ತೇಗದ ಮರದ ಸಸಿಯನ್ನೂ ಪ್ರನಾಳಗಳಲ್ಲಿ ಬೆಳೆಸಿದ್ದಾರೆ.


ಗರ್ಭಧಾರಣೆ ಸುಲಭವಾಗಿ ಆಗದಂಥ ಸಸ್ಯಗಳಲ್ಲಿ ಕೃತಕವಾಗಿ ಗರ್ಭಧಾರಣೆ ಮಾಡಿಸಿ ಹಣ್ಣುಗಳನ್ನು ಪಡೆದ ಯಶಸ್ಸು ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿವೆ. ದೆಹಲಿ ವಿಶ್ವವಿದ್ಯಾನಿಲಯದ ಶಿಕ್ಷಕರಾದ ಪ್ರೊ. ಪಿ. ಮಹೇಶ್ವರಿ ಅವರದ್ದಾಗಿದೆ. ಇತ್ತೀಚೆಗೆ ಅವರು ಸಸ್ಯಗಳಲ್ಲಿ ನಡೆಸಿದ ಪ್ರಯೋಗಗಳು ಇಂದು ಕೇಳಿಬರುತ್ತಿರುವ 'ಪ್ರನಾಳ ಶಿಶು'ವಿನ ಬಗ್ಗೆ ನಡೆಯುತ್ತಿರುವ ಸಂಶೋಧನೆಗೆ ಸಹಾಯಕವಾಗಿವೆ. ಸಾಮಾನ್ಯವಾಗಿ ಹೂಗಳಲ್ಲಿ ಗರ್ಭಧಾರಣೆಯಾಗಬೇಕಾದರೆ ಪರಾಗವು ಶಲಾಕಾಗ್ರದ ಮೇಲೆ ಬಂದು ಬೀಳಬೇಕು. ಹೀಗೆ ಬಂದು ಬಿದ್ದ ಪರಾಗವು ಬೆಳೆದು, ಬಿಸಿನಾದ ಪರಾಗ ನಳಿಕೆಯನ್ನು ಬೆಳೆಯುತ್ತದೆ. ಈ ನಳಿಕೆಯು ಸಾಧಾರಣವಾಗಿ ಶಲಾಕೆಯುದ್ದಕ್ಕೂ ಪ್ರದೇಶದಲ್ಲಿ ನುಸುಳಿಕೊಂಡು ಬೆಳೆಯುತ್ತಾ ಹೋಗುತ್ತದೆ. ಹೀಗೆ ಬೆಳೆಯುತ್ತಾ ಹೋದ ಪರಾಗ ನಳಿಕೆ ಅಂಡಾಶಯವನ್ನು ತಲುಪಿ, ಪರಾಗದಲ್ಲಿ ಪುರುಷತ್ವವುಳ್ಳ ಎರಡು ಕೋಶಗಳು ಈ ಪರಾಗ ನಳಿಕೆಯ ಮೂಲಕ ಅಂಡಾಶಯ ಪ್ರವೇಶವನ್ನು ಪಡೆದಾಗ ಗರ್ಭಧಾರಣೆಯಾಗುತ್ತದೆ. ಗರ್ಭಧಾರಣೆಯಾದನಂತರ ಅಂಡಾಶಯವು ಬೆಳೆದು ಹಣ್ಣಾಗುತ್ತದೆ. ಇದು ಬಹುತೇಕ ಸಸ್ಯಗಳಲ್ಲಿ ಕಂಡುಬರುವ ಸಹಜ ಕ್ರಮ. ಕೆಲವು ಬಗೆಯ ಸಸ್ಯಗಳಲ್ಲಿ ಪರಾಗ ನಳಿಕೆಯು ಅಂಡಾಶಯ ಪ್ರವೇಶವನ್ನು ಪಡೆಯುವುದೇ ಇಲ್ಲ. ಶಲಾಕೆಯಲ್ಲಿ ನುಸುಳಿಕೊಂಡು ಬೆಳೆಯುತ್ತಿರುವಾಗಲೇ ನುಸುಳಿಕೊಂಡು ಬೆಳೆಯುತ್ತಿರುವಂತೆಯೇ ನಾಶಹೊಂದುತ್ತದೆ. ಮತ್ತೆ ಕೆಲವು ಸಸ್ಯಗಳಲ್ಲಿ ಪರಾಗವು ಶಲಾಕಾಗ್ರದ ಮೇಲೆ ಬಂದು ಬಿದ್ದರೂ ಪರಾಗ ನಳಿಕೆಯು ಬೆಳೆಯಲಿಕ್ಕೆ ಅನುವೇ ಇಲ್ಲ. ಇಂಥ ಸಸ್ಯಗಳಲ್ಲಿ ಗರ್ಭಧಾರಣೆಯಾಗುವುದಿಲ್ಲ. ಪ್ರೊ. ಪಿ. ಮಹೇಶ್ವರಿ ಅವರು ಹೂಗಳಲ್ಲಿ ಅಂಡಾಶಯಗಳನ್ನು ಬೇರ್ಪಡಿಸಿ 'ಪೆಟ್ರಿ' ಗಾಜು ಅಂದರೆ ಅಭಿವರ್ಧನ ಗಾಜಿನಲ್ಲಿ ಕೃತಕವಾಗಿ ಗರ್ಭಧಾರಣೆಯನ್ನು ಪ್ರನಾಳಗಳಲ್ಲಿ ಮಾಡಿಸಿದ ಫಲವಾಗಿ ಪಡೆದ ಬೀಜಗಳು ಮತ್ತೆ ಸಂತಾನೋತ್ಪತ್ತಿಯನ್ನು ಮಾಡುವಂಥ ಸಾಮರ್ಥ್ಯವನ್ನು ಪಡೆದಿತ್ತು.

ಕರ್ನಾಟಕದ ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ 'ಪ್ರನಾಳ ಸಸ್ಯಗಳ' ಸಂಶೋಧನೆ ನಡೆಯುತ್ತಿದೆ. ಕೆಲವು ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆರಂಭವಾದ ಈ ಬಗೆಯ ಕೃಷಿ ಹಲವಾರು ಸಸಿಗಳನ್ನು, ಫಲಿತಾಂಶಗಳನ್ನು ನೀಡಿದೆ. ವಿವಿಧ ಜಾತಿಯ ಹುಲ್ಲು, ಹಿಪ್ಪುನೇರಳೆ ಗಿಡಗಳು ಪ್ರನಾಳಗಳಲ್ಲಿ ಬೆಳೆಸಿರುವುದರ ಜೊತೆಗೆ ಹೂಗೊಂಚಲಿನ ಭಾಗವನ್ನು ವಿವಿಧ ಹಂತಗಳಲ್ಲಿ ಪ್ರನಾಳಗಳಲ್ಲಿ ಬೆಳೆಸಿ ಸಂಪೂರ್ಣ ಸಸ್ಯವನ್ನು ಪಡೆಯಲಾಗಿದೆ. ಪರಾಗದಲ್ಲಿ

ಸಾಮಾನ್ಯವಾಗಿ 'ಗಂಡುತನ'ವನ್ನು ನಿರ್ಧರಿಸುವಂಥ ಎರಡು ಜೀವಕೋಶಗಳಿರುತ್ತವೆ. ಪ್ರಾಯೋಗಿಕವಾಗಿ ಈ ಎರಡೂ ಕೋಶಗಳನ್ನು ಪ್ರತ್ಯೇಕಿಸಿ ಪ್ರನಾಳಗಳಲ್ಲಿ ಬೆಳೆಸಬಹುದು. ಈ ಎರಡೂ ಜೀವಕೋಶಗಳಲ್ಲಿ ಮೂಲತಃ ಒಂದೇ ಬಗೆಯ ಆನುವಂಶಿಕ ಸಾಮಗ್ರಿ ಇದ್ದರೂ ಪ್ರತ್ಯೇಕವಾಗಿ ಪ್ರನಾಳಗಳಲ್ಲಿ ಬೆಳೆಸಿದಾಗ ಹೋಲಿಕೆಯೇ ಇಲ್ಲದಂಥ ವಿವಿಧ ಗುಣಗಳಿರುವಂಥ ಹಾಪ್ಲಾಯ್ಡ್ ಸಸ್ಯ ರೂಪುಗೊಂಡಿದ್ದು ಒಂದು ಪ್ರಾಯೋಗಿಕ ಯಶಸ್ಸಾಗಿದೆ.

ಇತ್ತೀಚಿನ ದಿನಗಳಲ್ಲಿ ವಿವಿಧ ಜಾತಿಯ ಸಸ್ಯಗಳ ಜೀವಕೋಶಗಳನ್ನು ಬೇರ್ಪಡಿಸಿ ಪ್ರತಿಜೀವಕಗಳಿಂದ ಅವುಗಳ ಕೋಶಭಿತ್ತಿಯನ್ನು ಒಡೆದು, ಜೀವಿತ ಕೋಶದ್ರವ್ಯವನ್ನು ಪ್ರನಾಳಗಳಲ್ಲಿ ಬೆಳೆಸುವಂತ ಕಾರ್ಯದಲ್ಲಿ ಅನೇಕ ವಿಜ್ಞಾನಿಗಳು ಯಶಸ್ಸನ್ನು ಗಳಿಸಿದ್ದಾರೆ. ಹೀಗೆ ಬೆಳೆದ ಕೋಶದ್ರವ್ಯವನ್ನು ನಿರೀಕ್ಷಿತ ಉದ್ದೇಶಕ್ಕಾಗಿ ತಳೀಕರಣ ಕಾರ್ಯದಲ್ಲಿ ಉಪಯೋಗಿಸಿಕೊಳ್ಳುವ ಅವಕಾಶ ಈಗ ಸಸ್ಯವಿಜ್ಞಾನಿಗೆ ದೊರೆತಿದೆ.

ಎ. ನಾಗಭೂಷಣರಾವ್ ಸಿಂಧೆ



ಅದು ಬೇಕು, ಇದು ಬೇಕು ಎಂದು ಹಲುಬದಿರು. ದೈವ ಪ್ರೇಮದಿಂದ ದೊರೆಯುವುದನ್ನು ಮಾತ್ರ ಸ್ವೀಕರಿಸು. ಉಪಕೃತನಾಗಿ ಬಾಕಿಪಟ್ಟುಕೊಳ್ಳಬೇಡ.

—ಟಾಗೋರ್

ಆರೋಗ್ಯದಿಂದಿರದೆ ನಾವು ಎಲ್ಲ ಸಾಮಾಜಿಕ ಸದ್ಗುಣಗಳನ್ನು ಸಾಧಿಸಲಾರೆವು. ಆದ್ದರಿಂದ 'ಆರೋಗ್ಯವನ್ನು ಕಾಪಾಡಿಕೊಳ್ಳುವುದು' ನಮ್ಮ ನೈತಿಕ ಮತ್ತು ಧಾರ್ಮಿಕ ಕರ್ತವ್ಯವೆನಿಸಿದೆ.

—ಜಾನ್ಸನ್

ಹಿಂದೂ ಪತ್ರಿಕೆ

ಭಾರತದಲ್ಲಿ ಪ್ರಕಟವಾಗುವ ಇಂಗ್ಲಿಷ್ ಪತ್ರಿಕೆಗಳಲ್ಲಿ ಹಿಂದೂ ಪ್ರಥಮ ಶ್ರೇಣಿಯ ದಿನಪತ್ರಿಕೆ. ಒಂದುನೂರು ವರ್ಷಗಳನ್ನು ಪೂರ್ಣಗೊಳಿಸಿದ್ದಕ್ಕಾಗಿ ಭಾರತದ ರಾಷ್ಟ್ರಪತಿಗಳ ಅಧ್ಯಕ್ಷತೆಯಲ್ಲಿ ಸಮಾರಂಭವೊಂದನ್ನು ಅದು ೧೯೭೮ ರಲ್ಲಿ ಏರ್ಪಡಿಸಿತು. ಯಾವುದೇ ಒಂದು ಗುಂಪು ಅಥವಾ ಪಕ್ಷಕ್ಕೆ ಸೇರದೆ ವಿಶ್ವಾಸಾರ್ಹವಾದ ಸುದ್ದಿಗಳನ್ನೇ ಈ ಪತ್ರಿಕೆ ನೀಡುತ್ತ ಬಂದಿದೆ. ಕೇವಲ ಭಾರತದಲ್ಲಿ ಮಾತ್ರ ಅಲ್ಲದೆ ವಿದೇಶಗಳಲ್ಲಿಯೂ ಈ ಪತ್ರಿಕೆಗೆ ಒಂದು ವಿಶಿಷ್ಟ ಸ್ಥಾನವಿದೆ. ಭಾರತೀಯ ಸಮಸ್ಯೆಗಳನ್ನು ಅಧ್ಯಯನ ಮಾಡುವ ವಿಚಾರಶೀಲ ಓದುಗರಿಗೆ ಈ ಪತ್ರಿಕೆಯಿಂದ ಸಹಾಯವಾಗಿದೆ. ತನ್ನ ಈ ಉಚ್ಚ ಪರಂಪರೆಯನ್ನು ಅದು ಪ್ರಾರಂಭದಿಂದ ಇಲ್ಲಿಯವರೆಗೂ ಶ್ರದ್ಧೆಯಿಂದ ಕಾಪಾಡಿಕೊಂಡು ಬಂದಿದೆ.

ಪ್ರಸಿದ್ಧ ದೇಶಭಕ್ತ ಮತ್ತು ಪ್ರಭಾವಶಾಲಿ ಲೇಖಕ ಜಿ. ಸುಬ್ರಹ್ಮಣ್ಯಂ ಅವರ ಸಂಪಾದಕತ್ವದಲ್ಲಿ ಹಿಂದೂ ಪತ್ರಿಕೆಯ ಪ್ರಥಮ ಸಂಚಿಕೆ ೧೮೭೮ರ ಸೆಪ್ಟೆಂಬರ್ ೨೦ ರಂದು ಸಾಪ್ತಾಹಿಕ ರೂಪದಲ್ಲಿ ಪ್ರಕಟವಾಯಿತು. ಈ ಪತ್ರಿಕೆ ಪ್ರಕಟವಾಗುವ ಮುನ್ನ ಮದ್ರಾಸ್ ಪ್ರಾಂತ್ಯದಲ್ಲಿ ನೇಟಿವ್ ಪಬ್ಲಿಕ್ ಒಪಿನಿಯನ್ ಮತ್ತು ಮದ್ರಾಸಿ ಎಂಬ ಇಂಗ್ಲಿಷ್ ಪತ್ರಿಕೆಗಳು ಕೆಲಕಾಲ ಪ್ರಕಟವಾಗಿ ಅಸ್ತಂಗತವಾಗಿದ್ದವು.

ಆ ಕಾಲದಲ್ಲಿ [illegible] ಭಾರತೀಯ ಪತ್ರಿಕೆಗಳು ಸ್ವತಂತ್ರವಾಗಿ ಅಭಿಪ್ರಾಯ ನೀಡುವುದು ಕಷ್ಟವಾಗಿತ್ತು. ಹೀಗಾಗಿ ಹಿಂದೂ ಪ್ರಕಟವಾದಾಗ ಅದರ ಉಳಿವಿನ ಬಗ್ಗೆ ಸಂದೇಹ ವ್ಯಕ್ತವಾದುದು ಸಹಜವಾಗಿತ್ತು. ಆದರೆ ಈ ಎಲ್ಲ ಕಷ್ಟ ಕೋಟಲೆಗಳ ನಡುವೆ ಹಿಂದೂ ಪತ್ರಿಕೆ ಬಾಳಿ ಬಂತು. ಸಂಚಾಲಕರ ಸ್ವಪ್ರಜ್ಞೆ [illegible] ಎಲ್ಲ [illegible] ವಾಚಕರಿಂದಾಗಿಯೂ ಪತ್ರಿಕೆ ಶಾಶ್ವತಸ್ಥಾನ ಗಳಿಸಿಕೊಂಡಿದೆ.

ಹಿಂದೂ ಸಾಪ್ತಾಹಿಕ ಮೊದಲಿಗೆ ಮದ್ರಾಸಿನ 'ಟ್ರಿಪ್ಲಿಕೇನ್ ಸೊಸೈಟಿಯ' ಮುಖವಾಣಿಯಾಗಿ ಪ್ರಕಟವಾಯಿತು. ಈ ಪತ್ರಿಕೆಯ ಪ್ರಕಟಣೆಯ ಸಂಪೂರ್ಣ ಹಕ್ಕು ಪ್ರಾರಂಭದಲ್ಲಿ ಇದ್ದುದು ಜಿ. ಸುಬ್ರಹ್ಮಣ್ಯಂ ಮತ್ತು ವೀರರಾಘವಾ

ನವನೀತ ಹಿಂದಿ ದೈನಿಕದಲ್ಲಿ ಪ್ರಕಟವಾದ '[illegible]' ಎಂಬ ಲೇಖನದ ರೂಪಾಂತರ.

ಚಾರ್ ಅವರಲ್ಲಿ. ಸಿ. ಕರುಣಾಕರ ಮೆನನ್, ಕೆ. ಸುಬ್ಬರಾವ್ ಮತ್ತು ಕೆ. ನಟರಾಜ ಅಯ್ಯರ್ ಅವರು ಪತ್ರಿಕೆಯ ನಿಷ್ಣಾತ ಸಹಾಯಕ ಸಂಪಾದಕರಾಗಿದ್ದರು. ಇವರಿಗೆಲ್ಲ ಒಳ್ಳೆಯ ಮಾರ್ಗದರ್ಶನ ನೀಡಿದವರು ಸರ್ಜನ್ ಮೇಜರ್ ನಿಕಲ್‌ಸನ್.

ಬ್ರಿಟಿಷ್ ಕಾನೂನಿನಲ್ಲಿನ ಅನೇಕ ದೋಷಗಳ ನಿವಾರಣೆಗಾಗಿ ನಿರ್ಭೀತ ಸಾರ್ವಜನಿಕ ಅಭಿಪ್ರಾಯ ರೂಪಿಸುವ ಸಾಮರ್ಥ್ಯ ಜಿ. ಸುಬ್ರಹ್ಮಣ್ಯಂ ಅವರಿಗಿತ್ತು. ರಾಜಕೀಯ ಮತ್ತು ಆರ್ಥಿಕ ಚಿಂತನೆ ಕುರಿತಂತೆ ಅವರ ವಿಚಾರಗಳು ಆಳವಾಗಿದ್ದವು. ಶಾಸನ ವ್ಯವಸ್ಥೆ ಮತ್ತು ಅದರ ದೋಷಗಳನ್ನು ಕುರಿತಂತೆ ಅವರು ಬರೆದ ಉಗ್ರ ಸಂಪಾದಕೀಯಕ್ಕೆ ಅಧಿಕಾರ ವರ್ಗದವರು ನಿರುತ್ತರರಾಗಿರುತ್ತಿದ್ದರು. ಜಿ. ಸುಬ್ರಹ್ಮಣ್ಯನ್ ಕೇವಲ ಪತ್ರಿಕೋದ್ಯಮಿ ಅಲ್ಲ, ಅವರು ಹಿಂದೂ ಸಮಾಜ ಸುಧಾರಣಾ ಆಂದೋಲನದ ಒಬ್ಬ ಸಕ್ರಿಯ ನೇತಾರರೂ ಆಗಿದ್ದರು.

ಹಿಂದೂ ಸಾಪ್ತಾಹಿಕ ವಾರದಲ್ಲಿ ಮೂರುಬಾರಿ ಪ್ರಕಟವಾಗತೊಡಗಿದ್ದು ೧೮೮೩ ರಿಂದ. ನ್ಯಾಷನಲ್ ಪ್ರೆಸ್ ಎಂಬ ಹೆಸರಿನಿಂದ ಮದ್ರಾಸಿನ ಮೌಂಟ್ ರೋಡಿನಲ್ಲಿ ಸ್ವತಂತ್ರ ಮುದ್ರಣಾಲಯವೊಂದು ಪ್ರಾರಂಭವಾಯಿತು. ಆ ದಿನಗಳಲ್ಲಿ ಎಸ್. ಸುಬ್ರಹ್ಮಣ್ಯ ಅಯ್ಯರ್ ಮತ್ತು ಸರ್ ಸಿ. ಶಂಕರನ್‌ನಾಯರ್ ಮುಂತಾದ ಪ್ರತಿಷ್ಠಿತ ನಾಯಕರ ಸ್ನೇಹಹಸ್ತವು ಪತ್ರಿಕೆಗೆ ಲಭ್ಯವಾಯಿತು. ಮದ್ರಾಸ್ ಪ್ರಾಂತ್ಯದಲ್ಲಿ ಜನಜಾಗೃತಿಗಾಗಿ ಸ್ಥಾಪಿಸಲ್ಪಟ್ಟ ಮಹಾಜನ ಸಭೆಯ ಸಂಘಟನಾ ಚಟುವಟಿಕೆಗಳೂ ಹಿಂದೂ ಕಾರ್ಯಾಲಯದಿಂದಲೇ ನಡೆಯುತ್ತಿದ್ದುವು. ಈ ಸಭೆಯಿಂದಲೇ ೧೮೮೪ ಡಿಸೆಂಬರ್ ತಿಂಗಳಲ್ಲಿ ಮದ್ರಾಸ್ ಪ್ರಾಂತ್ಯದ ಪ್ರಥಮ ಪರಿಷತ್ ಅಧಿವೇಶನ ನಡೆಯಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸಂಸ್ಥಾಪಕ ಏಲನ್ ಅಕ್ಟೇವಿಯನ್ ಹ್ಯೂಮ್ ಮಹಾಜನ ಸಭೆ ಮತ್ತು ಹಿಂದೂ ಪತ್ರಿಕೆಯೊಂದಿಗೆ ನಿಕಟ ಸಂಬಂಧವಿರಿಸಿಕೊಂಡಿದ್ದ. ಕಾಂಗ್ರೆಸ್ಸಿನ ೩ನೆಯ ಅಧಿವೇಶನ ೧೮೮೭ರಲ್ಲಿ ಮದ್ರಾಸಿನಲ್ಲಿ ನಡೆಯಿತು. ಅದರ ಪ್ರಚಾರ ಮತ್ತು ವ್ಯವಸ್ಥೆಯಲ್ಲಿ ಹಿಂದೂ ಸಂಪೂರ್ಣವಾಗಿ ಪಾಲುಗೊಂಡಿತ್ತು

ಹಿಂದೂ ದಿನಪತ್ರಿಕೆಯಾದದ್ದು ೧೮೮೯ರಲ್ಲಿ. ಆ ದಿನಗಳಲ್ಲಿ ಭಾರತೀಯರಿಂದ ನಡೆಸಲ್ಪಡುವ ಪತ್ರಿಕೆಗಳಿಗೆ ಪ್ರಸಾರ ತುಂಬ ಕಡಿಮೆ. ದೊಡ್ಡ ದೊಡ್ಡ ಯೂರೋಪಿಯನ್ ಕಂಪೆನಿಗಳು ಈ ಪತ್ರಿಕೆಗಳಿಗೆ ಪ್ರಚಾರ ನೀಡುತ್ತಿರಲಿಲ್ಲ. ಕೆಲವು ದೇಶೀಯ ಸಂಸ್ಥಾನಗಳ ರಾಜರು ಪತ್ರಿಕೆಗೆ ಬೆಂಬಲ ನೀಡಿದರು.

ವಿಜಯನಗರಮ್ ಸಂಸ್ಥಾನದ ಅರಸ ನಿಧನಹೊಂದಿದ್ದು (೧೮೯೭) ಪತ್ರಿಕೆಗೆ ಆರ್ಥಿಕ ಮುಗ್ಗಟ್ಟನ್ನು ತಂದಿತು. ಭಿನ್ನಾಭಿಪ್ರಾಯದಿಂದ ಜಿ. ಸುಬ್ರಹ್ಮಣ್ಯಮ್ ಪತ್ರಿಕೆಯ ಸಂಪಾದಕತ್ವಕ್ಕೆ ರಾಜೀನಾಮೆ ನೀಡಿದಾಗ ವೀರರಾಘವಾಚಾರ್ಯರು ಮುಳುಗಲಿದ್ದ ನಾವೆಯನ್ನು ಹಾಗೂ ಹೀಗೂ ಸಂರಕ್ಷಿಸಿದರು. ಪತ್ರಿಕೆಯು ಸಮೃದ್ಧವಾಗಿ ಮತ್ತು ಸ್ಥಿರವಾಗಿ ನಡೆದುಕೊಂಡು ಬರಲು ಪ್ರಬಲ ಸಂಸ್ಥೆಯೊಂದರ ಅಗತ್ಯವಿದೆ ಎಂದು ಅವರು ಭಾವಿಸಿದರು. ಇದರ ಫಲವಾಗಿ ಕಂಪನಿಯ ಸ್ಥಾಪನೆಯಾಯಿತಾದರೂ ಅದಕ್ಕೆ ನಿರೀಕ್ಷಿಸಿದಷ್ಟು ಜನಬೆಂಬಲ ದೊರೆಯಲಿಲ್ಲ.

ಅನಿಶ್ಚಿತ ಕಾಲದ ಅನಂತರ ಹಿಂದೂ ಪತ್ರಿಕೆಯ ಭಾಗ್ಯದ ಬಾಗಿಲು ತೆರೆಯಿತು. ಕೊಯಮುತ್ತೂರಿನ ವಕೀಲ ಮತ್ತು ಪ್ರಭಾವಶಾಲಿ ವಕೀಲರೆಂದು ಹೆಸರು ಗಳಿಸಿದ್ದ ಕಸ್ತೂರಿ ರಂಗಅಯ್ಯಂಗಾರರು ಹಿಂದೂ ಪತ್ರಿಕೆಯನ್ನು ಖರೀದಿಸಿದರು ಮತ್ತು ಅದರ ಸಂಪೂರ್ಣ ಸಾರಥಿಯಾದರು. ಅದೊಂದು ಭಾರೀ ಸಾಹಸ. ಹೀಗೆ ಮಾಡಿದರೆ ನಷ್ಟಕ್ಕೆ ಈಡಾಗುವರೆಂದು ಅವರ ಹಿತೈಷಿಗಳೆಲ್ಲರು ಹಲುಬಿ ನುಡಿದಿದ್ದರಂತೆ. ಕಸ್ತೂರಿ ಅಯ್ಯಂಗಾರರು ತಮ್ಮ ಛಲ ಮತ್ತು ದುಡಿಮೆಯಿಂದಾಗಿ ಹಿಂದೂ ಪತ್ರಿಕೆ ಸ್ವತಂತ್ರವಾಗಿ ನಿಲ್ಲುವಂತೆ ಮಾಡಿದರು. ಈ ಮಧ್ಯೆ ಪುನಃ ಕೆಲಸದಲ್ಲಿ ತೊಂದರೆ ಉದ್ಭವಿಸಿತು. ಸಹೋದ್ಯೋಗಿ ಕರುಣಾಕರ ಮೆನನ್ ರಾಜೀನಾಮೆ ನೀಡಿದರು. ಕಸ್ತೂರಿ ರಂಗಅಯ್ಯಂಗಾರರ ಅಣ್ಣನ ಮಗ ರಾಮಸ್ವಾಮಿ ಅಯ್ಯಂಗಾರರನ್ನು ಅವರ ಸ್ಥಾನದಲ್ಲಿ ನಿಯಮಿಸಲಾಯಿತು. ಅನಾರೋಗ್ಯದ ನಡುವೆ ಶ್ರದ್ಧೆ ಮತ್ತು ದಕ್ಷತೆಯಿಂದ ಪತ್ರಿಕೆಯ ಜನಪ್ರಿಯತೆಯನ್ನು ಮುಂದುವರಿಸಿಕೊಂಡು ಬಂದರು.

ಪ್ರಾಮಾಣಿಕ ಮತ್ತು ಉಚ್ಚದರ್ಜೆಯ ಸಂಪಾದಕೀಯ ಬರೆಯುವ ಜೊತೆಗೆ ದೇಶ ವಿದೇಶಗಳ ಅಭಿಪ್ರಾಯ ಮತ್ತು ವೈವಿಧ್ಯಮಯ ಸುದ್ದಿಗಳನ್ನು ನೀಡಬೇಕೆಂಬುದು ರಂಗಸ್ವಾಮಿಅಯ್ಯಂಗಾರರ ಇಚ್ಛೆ. ಸುದ್ದಿ ಪ್ರತಿನಿಧಿಗಳು ಎಲ್ಲ ಕ್ಷೇತ್ರದಲ್ಲಿರುವಂತೆ ಅವರು ಪ್ರೋತ್ಸಾಹಿಸಿದರು. ಇದರಿಂದಾಗಿ ಹಿಂದೂ ಪತ್ರಿಕೆಯ ಬೆಳಗ ದೊಡ್ಡದಾಯಿತು. ಇದಲ್ಲದೆ ನಿರ್ಭೀತ ನಿಲುವು ಮತ್ತು ಉಚ್ಚಮಟ್ಟದ ಸಂಪಾದಕೀಯ ಟಿಪ್ಪಣಿ ಬರೆಯುತ್ತಿದ್ದುದು ಜನಪ್ರಿಯವಾಗುತ್ತಿತ್ತು. ದೇಶಿ ಸಂಸ್ಥಾನದ ಅರಸರ ಮತ್ತು ಅರಸರ ಸಲಹೆಗಾರ ಅಥವಾ ದಿವಾನರಿಂದಾಗಿ ಹಿಂದೂಪತ್ರಿಕೆ ಮುಂದುವರಿಯಿತು. ಸ್ವದೇಶಿ ಆಂದೋಲನ ಬಂಗಾಳಿಗಳಿಂದ ದೇಶಾದ್ಯಂತ ವ್ಯಾಪಿಸಲು ಹಿಂದೂ ಸಹಾಯ ಮಾಡಿತು. ಬ್ರಿಟಿಷ್ ಸರ್ಕಾರದ ನಿರಂಕುಶ ಧೋರಣೆಗಳನ್ನು ಅದು ಸದಾ ಟೀಕಿಸುತ್ತಿತ್ತು. ರಾಷ್ಟ್ರೀಯ ಆಂದೋಲನ ಮತ್ತು

ಕಾಂಗ್ರೆಸ್ಸಿನೊಂದಿಗೆ ಹಿಂದೂ ಪತ್ರಿಕೆಯ ಸಹಾನುಭೂತಿ ಇತ್ತು. ಸ್ವರಾಜ್ಯ ದೊರೆಯುವ ಮೊದಲು ಮತ್ತು ಅನಂತರ ಕೂಡ ಹಿಂದೂ ಪತ್ರಿಕೆಯ ವಿಚಾರ ಸ್ವತಂತ್ರವೂ ತಟಸ್ಥವೂ ಮಧ್ಯಮಮಾರ್ಗ ಉಳ್ಳದ್ದೂ ಆಗಿದೆ. ಯೋಚಿಸಿ ಅನಂತರ ಅಭಿಪ್ರಾಯ ವ್ಯಕ್ತಪಡಿಸುವುದು ಈ ಪತ್ರಿಕೆಯ ವೈಶಿಷ್ಟ್ಯ.

ಮುಂಬಯಿಯ ಟೈಂಸ್ ಆಫ್ ಇಂಡಿಯ, ಕಲ್ಕತ್ತದ ಸ್ಟೇಟ್ಸ್‌ಮನ್, ಲಾಹೋರಿನ ಸಿವಿಲ್ ಮತ್ತು ಮಿಲಿಟರಿ ಗೆಜೆಟ್ ಮತ್ತು ಅಲಹಾಬಾದಿನ ಪಾಯೊನಿಯರ್ ಪತ್ರಿಕೆಗಳ ಇಂಗ್ಲಿಷ್ ಮಾಲಿಕರು ಬ್ರಿಟಿಷ್ ಶಾಸನಗಳ ಪ್ರಶಂಸೆ ಮಾಡಿ ಅವರ ಹೊಗಳುಭಟ್ಟಂಗಿತನ ಮಾಡುವುದೇ ತಮ್ಮ ಕೆಲಸವೆಂದು ಭಾವಿಸಿದ್ದರೆ, ಭಾರತೀಯರ ಆಶೆ ಆಕಾಂಕ್ಷೆಗಳನ್ನು ಇಂಗ್ಲಭಾಷೆಯಲ್ಲಿ ಅಭಿವ್ಯಕ್ತಗೊಳಿಸಿದ ಮೂರು ದೊಡ್ಡ ಪತ್ರಿಕೆಗಳಲ್ಲಿ ಹಿಂದೂ ಒಂದಾಗಿದೆ (ಉಳಿದೆರಡು ಪತ್ರಿಕೆಗಳು ಕಲ್ಕತ್ತದ ಅಮೃತ್ ಬಜಾರ್, ಅಲಹಾಬಾದಿನ ಲೀಡರ್).

ಪತ್ರಿಕೆಯ ಕಟ್ಟಣೆ, ವಿಷಯ ವಿನ್ಯಾಸ, ಮುದ್ರಣ ಇತ್ಯಾದಿಗಳಲ್ಲಿ ಕಾಲಕ್ರಮದಲ್ಲಿ ಬದಲಾವಣೆ ಆಗುತ್ತಲೇ ಇದೆ. ಹಿಂದೂ ಪತ್ರಿಕೆಯ ನೂರು ವರ್ಷಗಳ ಅವಧಿಯಲ್ಲಿ ಈ ಬದಲಾವಣೆಗಳನ್ನು ಗುರುತಿಸಬಹುದು. ಬಹಳ ವರ್ಷಗಳ ಹಿಂದೆ ಲಂಡನ್ ಟೈಮ್ಸ್ ಪತ್ರಿಕೆಯನ್ನು ಅನುಸರಿಸಿ ಹಿಂದೂ ಪತ್ರಿಕೆಯ ಮೊದಲ ಪುಟದಲ್ಲಿ ವಿಜ್ಞಾಪನೆ ಇರುತ್ತಿತ್ತು. ಟೈಮ್ಸ್ ಆಫ್ ಇಂಡಿಯ ಮತ್ತು ಒಂದು ಮರಾಠಿ ಪತ್ರಿಕೆ ಇದೇ ಕ್ರಮವನ್ನು ಅನುಸರಿಸುತ್ತಿತ್ತು. ಹಲವು ಪತ್ರಿಕೆಗಳು ವಿದೇಶ ಸಮಾಚಾರ ಮತ್ತು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ವಿಶೇಷ ಸುದ್ದಿಗಳನ್ನು ಮುಖಪುಟದಲ್ಲಿ ಪ್ರಕಟಿಸಲು ಪ್ರಾರಂಭಿಸಿದಾಗ ಹಿಂದೂ ಇದನ್ನೇ ಅನುಸರಿಸಿತು. ಬಹಳ ವರ್ಷಗಳವರೆಗೆ ಹಿಂದೂ ಪತ್ರಿಕೆಯಲ್ಲಿ ಸಮಾಚಾರ ಇತ್ಯಾದಿಗಳನ್ನು ಶೀರ್ಷಿಕೆ ಸಹಿತ ಒಂದೇ ಕಾಲಮಿನಲ್ಲಿ ಅಚ್ಚು ಮಾಡಲಾಗುತ್ತಿತ್ತು. ಹೀಗೆ ಮಾಡುತ್ತಿದ್ದುದರಿಂದ ಪತ್ರಿಕೆ ನೀರಸ ಎನಿಸುತ್ತಿತ್ತು. ವಾಚಕರು ತಮಗೆ ಬೇಕಾದ ಸಮಾಚಾರ ವಿಷಯ ಹುಡುಕುವುದು ಕಷ್ಟವಾಗುತ್ತಿತ್ತು. ಕಾಲಕ್ರಮದಲ್ಲಿ ಪತ್ರಿಕೆಯ ಮೊದಲ ಪುಟದ ವಿನ್ಯಾಸದಲ್ಲೂ ಬದಲಾವಣೆಗಳಾದುವು. ಇದರಿಂದ ಪತ್ರಿಕೆ ಸುಂದರವೂ ಆಕರ್ಷಕವೂ ಆಯಿತಲ್ಲದೆ ಅದರ ಮಾರಾಟವೂ ಹೆಚ್ಚಿತು. ಈ ನಾವೀನ್ಯತೆ ಬಂದರೂ ಹಿಂದೂ ತನ್ನ ಗಂಭೀರ ಪ್ರೌಢ ಮತ್ತು ಸಮತೋಲ ದೃಷ್ಟಿಯನ್ನು ಕಾಪಾಡಿಕೊಂಡು ಬಂದಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶ್ನೆಗಳನ್ನು ಕುರಿತಂತೆ ಹಿಂದೂ ಪತ್ರಿಕಾ ಪ್ರತಿನಿಧಿಗಳು ಮತ್ತು ವಿಶೇಷ ಲೇಖಕರು ಸತ್ಯಶಾಲಿ ಮತ್ತು

ಅಧ್ಯಯನಪೂರ್ಣ ಲೇಖನ ಬರೆಯುತ್ತಾರೆ.

ಹಿಂದೂ ಪತ್ರಿಕೆಯ ವಿಶೇಷ ವಾಚಕರ ವಾಣಿ. ಇದಕ್ಕೆ ಸಾವಿರಾರು ಜನರು ಕಾಲಮ್ ಬರೆಯಲು ವಿಶೇಷ ತಜ್ಞರು ಮಹತ್ವಪೂರ್ಣ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತಾರೆ. ಹಿಂದೂ ಪತ್ರಿಕೆಯ ಸಂಪಾದಕೀಯ ಸತ್ವಶಾಲಿಯಾದದ್ದು. ಇದನ್ನು ಸರ್ಕಾರಿ ಅಧಿಕಾರಿಗಳು ಜಾಗರೂಕತೆಯಿಂದ ಓದುತ್ತಾರೆ. ವಿಮಾನದ ಮುಖಾಂತರ ದೂರ ದೂರ ಪಟ್ಟಣಗಳಿಗೆ ಪತ್ರಿಕೆಯ ವಿತರಣೆ ಪ್ರಾರಂಭಿಸಿದ ಮೊದಲ ಭಾರತೀಯ ಪತ್ರಿಕೆ ಹಿಂದೂ. ಅಲ್ಲದೆ ವಿದೇಶಗಳಿಗೆ ಅಲ್ಪ ಭಾರದ ಕಾಗದದಲ್ಲಿ ಮುದ್ರಿಸಿ ಪತ್ರಿಕೆ ರವಾನಿಸಲಾಗುತ್ತದೆ. ವಿದೇಶಗಳಲ್ಲಿ ನೆಲೆಸಿರುವ ಭಾರತೀಯರಿಗೆ ಹಿಂದೂ ಸಾಕಷ್ಟು ಸುದ್ದಿ ಒದಗಿಸುತ್ತದೆ. ಇದರಿಂದ ಇದಕ್ಕೆ ಬೇಡಿಕೆ ಹೆಚ್ಚು. ಲಂಡನ್ನಿನಲ್ಲಿರುವ ಬ್ರಿಟಿಷ್ ಮ್ಯೂಸಿಯಮ್ಮಿನಲ್ಲಿ ಇಂದಿಗೂ ಹಿಂದೂ ಪತ್ರಿಕೆಯ ಹಳೆಯ ಪ್ರತಿಗಳನ್ನು ಆಕರವಾಗಿ ನೋಡಲಾಗುತ್ತಿದೆಯಂತೆ.

ಹಿಂದೂ ಪತ್ರಿಕೆಯ ಮುದ್ರಣದ ಸ್ವಚ್ಛತೆ ಕೂಡ ಉಲ್ಲೇಖನೀಯವಾದದ್ದು. ಹೊಸ ಪುಸ್ತಕಗಳ ಪಟ್ಟಿ ಮತ್ತು ವಿಮರ್ಶೆ ಅದರ ವಿಶೇಷ ಆಕರ್ಷಣೆ. ಮದ್ರಾಸ್ ವಿಶ್ವವಿದ್ಯಾಲಯದ ಸುತ್ತಮುತ್ತಲಿನ ಪ್ರಮುಖ ಗ್ರಂಥಾಲಯಗಳಿಗೆ ಬಂದಿರುವ ಹೊಸ ಗ್ರಂಥಗಳ ಯಾದಿಯನ್ನು ಹಿಂದೂ ಪ್ರತಿವಾರ ಪ್ರಕಟಿಸುತ್ತದೆ. ಇದರಿಂದ ಪುಸ್ತಕ ಪ್ರೇಮಿಗಳಿಗೂ ಹಿಂದೂ ಆಕರ್ಷಕವಾಗಿದೆ.

ಕೆಲವು ವರ್ಷಗಳ ಹಿಂದೆ 'ದ ಸ್ಟೋರಿ ಆಫ್ ಇಂಡಿಯಾ' ಮಾಲೆಯಲ್ಲಿ 'ದ ಸ್ಟೋರಿ ಆಫ್ ಹಿಂದೂ' ಕೂಡ ಪ್ರಕಟವಾಗುತ್ತಿತ್ತು. ಇದರಲ್ಲಿ ಸಚಿತ್ರ ಲೇಖನಗಳು ಬರುತ್ತಿದ್ದುವು. ಭಾರತದ ಪ್ರಪ್ರಥಮ ಕ್ರೀಡಾ ಪತ್ರಿಕೆ 'ಸ್ಪೋರ್ಟ್ಸ್ ಅಂಡ್ ಪಾಸ್ಟೈಮ್' ಕೂಡಾ ಪ್ರಕಟಿಸುವವರು ಹಿಂದೂ ಆಡಳಿತ ವರ್ಗದವರೇ.

ಈಗ ಹಿಂದೂ ಕಸ್ತೂರಿ ಕುಟುಂಬದ ವಶ. ಆ ಕುಟುಂಬದ ಸಾಂಸ್ಕೃತಿಕ ಪರಂಪರೆ ಸಾರ್ವಜನಿಕರ ಸೇವಾ ಭಾವನೆ ಮತ್ತು ಪ್ರಾಮಾಣಿಕತೆ ನಿಷ್ಠೆಗಳಿಂದಾಗಿ ಹಿಂದೂ ಜೀವಂತ ಪತ್ರಿಕೆಯಾಗಿ ಮುಂದುವರೆಯುತ್ತದೆ.

ಜಿ. ಎಸ್. ಭಟ್ಟ

ದ್ವೇಷ ಹಾಗೂ ಹಿಂಸೆಯ ಬೀಜ ಬಿತ್ತಿದರೆ ಯಾವ ಫಲ ದೊರಕೀತು? ದ್ವೇಷ ಹಾಗೂ ಹಿಂಸೆಯೇ ಅದರ ಫಲ.

—ಪಂಡಿತ್ ನೆಹರು

ನನ್ನ ಮನೆ

ಬಬಲಿ ಸುಮ್ಮನೆ ನಿಂತಿದ್ದಳು, ತೆರೆದ ಬಾಗಿಲ ಮರೆಯಲ್ಲಿ. ಅಲ್ಲಿ ಯಾವುದೋ ಕರುಣಾಜನಕ ಚಿತ್ರ ಮೂಡಿ ಬಂದಿದೆಯೋ ಎಂಬಂತೆ ಶೂನ್ಯದಲ್ಲಿ ದೃಷ್ಟಿನೆಟ್ಟು ಅದರಲ್ಲಿಯೇ ಮುಳುಗಿಬಿಟ್ಟಿದ್ದಳು.

'ಏನು ಸಮಾಚಾರ ಬಬಲಿ? ಯಾರಾದರೂ ಏನಾದರೂ ಅಂದರಾ? ಈಗ ಹತ್ತು ದಿನಗಳ ಮೇಲೆ ಬಂದಿರುವುದೇ ಸಾಲದೆಂಬಂತೆ ಈ ಮೌನ ಬೇರೆ, ಏನಾದರೂ ಮಾತಾಡು!' ಆದರೆ ಅವಳು ಕಿವುಡಿಯೇ ಆಗಿಬಿಟ್ಟಿದ್ದಳು. ಜೋರಾಗಿ ಬೀಸುತ್ತಿರುವ ಥಂಡಿ ಗಾಳಿಯಲ್ಲಿ ಅವಳ ಹರಿದ ಸೀರೆಯ ಕೊಳೆಯಾದ ಸೆರಗು ಹಾರಾಡುತ್ತಿತ್ತು. ಅವಳು ಚಳಿಯಲ್ಲಿ ನಡುಗುತ್ತಿದ್ದಳು. ಅದೂ ನಾನು ಸೋರೆಕಾಯಿಯ ಸಿಪ್ಪೆಯನ್ನು ಬೀದಿಗೆ ಎಸೆಯುವಾಗ ನೋಡಿದ್ದೆ. ಇಲ್ಲದಿದ್ದರೆ ಎಷ್ಟು ಹೊತ್ತಿನತನಕ ಹಾಗೆಯೇ ಚಳಿಯಲ್ಲಿ ನಡುಗುತ್ತ ಮುದುಡಿಕೊಳ್ಳುತ್ತ ನಿಂತಿರುತ್ತಿದ್ದಳೋ ಏನೋ.

ನಾನು ಅತ್ಯಂತ ವಾತ್ಸಲ್ಯದಿಂದ ಹೇಳಿದೆ—'ಬಾ, ಬಬಲಿ, ಬಿಸಿಲಿನಲ್ಲಿ ಕುಳಿತುಕೊಳ್ಳೋಣ.' ಅವಳು ಅತ್ಯಂತ ಕಷ್ಟಪಟ್ಟು ಬಲಾತ್ಕಾರವಾಗಿ ತನ್ನ ದೃಷ್ಟಿಯನ್ನು ಗೋಡೆಯ ಮೇಲಿಂದ ಕಿತ್ತುಕೊಂಡು ಅಪರಾಧಿಯಂತೆ ಒಳಕ್ಕೆ ಬಂದಳು.

ಈ ಬಡಪಾಯಿ ಬೆಳಗಿನಿಂದ ಏನಾದರೂ ತಿಂದಿದ್ದಾಳೋ ಇಲ್ಲವೋ ಯಾರಿಗೆ ಗೊತ್ತು, ಹೀಗೆಂದು ಯೋಚಿಸುತ್ತ ಕಿಚನ್‌ಗೆ ಬಂದೆ, ಅಲ್ಲಿಂದಲೇ ತುದಿಗಾಲಿನ ಮೇಲೆ ನಿಂತು ಅನೇಕ ಬಾರಿ ಆಕೆಯನ್ನು ನೋಡಿದೆ. ಅವಳು ಎಲ್ಲಿಯೋ ಬಹು ದೂರದಲ್ಲಿ ಕಳೆದುಹೋದವಳಂತೆ ಕಟ್ಟಿಗೆಯ ಮೂರ್ತಿಯಂತೆ ಕಾಣುತ್ತಿದ್ದಳು. ಸೇವಿಗೆಯ ಬಟ್ಟಲನ್ನು ನೆಲುವಿನಿಂದ ತೆಗೆಯುತ್ತಲೇ ಯೋಚಿಸತೊಡಗಿದೆ—ಈಕೆ ಇಲ್ಲಿಗೆ ಬಂದು ಒಂದು ವರ್ಷವೇ ಕಳೆಯುತ್ತ ಬಂದಿತು. ಈಗಂತೂ ಇವಳು ನನಗೆ ನನ್ನ ಮಗುವಿನಂತೆ ಪ್ರಿಯಳಾಗಿ ಕಾಣತೊಡಗಿದ್ದಾಳೆ.

'ತೆಗೆದುಕೋ, ಮೊದಲು ತಿಂಡಿ ತಿನ್ನು, ಆಮೇಲೆ ಮಾತನಾಡೋಣ.' ಸೇವಿಗೆಯ ಬಟ್ಟಲನ್ನು ಆಕೆಯ ಕೈಯಲ್ಲಿ ಇಟ್ಟುಬಿಟ್ಟೆ. ಆದರೆ ಆಕೆಯ ಮನಸ್ಸಿನ ಕೋಲಾಹಲವೆಲ್ಲ ಕಣ್ಣಿನಲ್ಲಿ ನೀರಾಗಿ ಒಟ್ಟಿಗೆ ಕೂಡಿ ತೇಲತೊಡಗಿತು....ಎರಡು ಮುತ್ತುಗಳು ಉರುಳಿ ಸೇವಿಗೆಯ ತಟ್ಟೆಯನ್ನು

ಫೆಬ್ರುವರಿ ೧೯೬೭ರ 'ನವನೀತ್' ಸಂಚಿಕೆಯ ಚಂದ್ರಕಾಂತ ಕಕ್ಕಡ್ ಅವರ 'ಅಪನಾ ಘರ್' ಹಿಂದೀ ಕತೆಯ ಅನುವಾದ,

ಸ್ಪರ್ಶಿಸುತ್ತ ಕೆಳಗೆ ಬಿದ್ದವು.... ನಂತರ ಧಾರಾಕಾರವಾದ ಮಳೆ....!

‘ಹೇಳು ನನ್ನ ಮಗು, ಇಂದು ನಿನಗೇನಾಗಬಿಟ್ಟಿದೆ?’ ಅವರ ನನ್ನ ಸಹಾನುಭೂತಿಯ ಶಬ್ದಗಳು ಒಂದು ಸಾಗರವನ್ನೇ ಹರಿಸಿಬಿಟ್ಟವು. ಇತ್ತ ನನ್ನ ವ್ಯಾಕುಲ ಹೆಚ್ಚುತ್ತಲೇ ಹೋಗುತ್ತಿತ್ತು. ನಾನು ಅವಳನ್ನು ಒಂದು ಮಗುವಿನಂತೆ ಪ್ರೀತಿಸಿದ್ದೆ. ವಿಧಿ ಅವಳ ಅಂಗೋಪಾಂಗಗಳು ಹಾಗೂ ರೂಪುರೇಖೆಗಳಿಗೆ ವಿರುದ್ಧವಾಗಿ, ಅವಳನ್ನು ಒಬ್ಬ ಕಾರ್ಮಿಕನ ಮನೆಯಲ್ಲಿ ಹುಟ್ಟಿಸಿತ್ತು.

ನಿಧಾನವಾಗಿ ಅವಳು ತಿಂಡಿ ತಿನ್ನಲು ಪ್ರಾರಂಭಿಸಿದಳು. ಅವಳ ಒಣಗಿದ ಕೆನ್ನೆಗಳ ಮೇಲೆ ಕಣ್ಣೀರಿನ ಗೆರೆಗಳು ಮೂಡಿದ್ದವು. ನಾನು ಇಡೀ ಸಮಯ ನನ್ನ ಅವಳ ನಿರ್ಭಾಗ್ಯ ಜೀವನದ ಪುಟಗಳನ್ನು ಓದುವುದರಲ್ಲಿ ಕಳೆಯುತ್ತಿದ್ದೆ. ಅರೆಬಿರಿದ ಮೊಗ್ಗಿನ ಮೇಲೆ ಆಲಿಕಲ್ಲುಗಳ ಪೆಟ್ಟು ಬಿದ್ದುಬಿಟ್ಟಿತ್ತು.

* * *

ಸರಿಯಾಗಿ ಒಂದು ವರ್ಷಕ್ಕೆ ಹಿಂದೆ—

‘ಅಮ್ಮಾವ್ರೆ! ಯಾವುದಾದರೂ ಕೆಲಸ ಅಮ್ಮಾವ್ರೆ!’

ಆಶ್ಚರ್ಯದಿಂದ ನನ್ನ ಕಣ್ಣುಗಳು ಅರಳಿದವು.

‘ನೀನೇನು ಹುಚ್ಚಿಯಲ್ಲ ತಾನೆ! ಬೆಳೆಯುವ ಹುಡುಗ ಮತ್ತೆ ಕೆಲಸ! ಸಾಲದೆಂಬಂತೆ ನೀನಿಲ್ಲಿ ಒಬ್ಬ ಮುಗ್ಧ ಬಾಲಕ! ನಿನ್ನ ತಲೆಯೇನಾದರೂ ತಿರುಗಿದೆಯೇನು?’

‘ಇವನು ನನ್ನ ತಮ್ಮ, ಅಮ್ಮಾವ್ರೆ! ಅಮ್ಮ ವಾಂತಿಭೇದಿಯಿಂದ ತೀರಿಕೊಂಡಳು. ನಿಮ್ಮ ಕಾಲಿಗೆ ಬೀಳುತ್ತೇನೆ, ಯಾವುದಾದರೂ ಕೆಲಸ ಕೊಡಿ.’

ನಾನು ನಿಶ್ಚಲವಾಗಿ ಆ ಮುಗ್ಧ ಬಾಲಿಕೆಯನ್ನು ನೋಡುತ್ತಲೇ ನಿಂತು ಬಿಟ್ಟೆ.

‘ಮತ್ತೆ ನಿಮ್ಮ ತಂದೆ?’ ನಾನು ಅತ್ಯಂತ ಮರುಕದಿಂದ ಕೇಳಿದೆ.

‘ತಂದೆ ಇದ್ದಾರೆ, ಅಮ್ಮಾವ್ರೆ. ಆಕೆಯ ಮುಗ್ಧವಾದ ಮುಖದ ಮೇಲೆ ಸುಕ್ಕು ಕಂಡುಬಂದಿತ್ತು.’

‘ಏನು ಕೆಲಸ ಮಾಡುತ್ತಾರೆ.’

‘ಕೆಲಸ! ಹೂಂ...ಹೂಂ, ಸಾರಾಯಿ ಕುಡಿಯುತ್ತಾರೆ.’

ಅವಳ ಮೀನಿನಂಥ ಕಣ್ಣುಗಳು ತುಂಬಿ ಬಂದವು.

‘ಸಾರಾಯಿ ಕುಡಿಯುತ್ತಾರೆ!’ ಈ ಮೂರು ಶಬ್ದಗಳು ಅವಳ ಇಡೀ ಕಥೆಯನ್ನು ತಿಳಿಸಿಬಿಟ್ಟಿದ್ದವು.

'ಒಳಗೆ ಬಾ ಬಬಲಿ': ಆ ದಿನವೇ ಅನಾಯಾಸವಾಗಿ ಅವಳಿಗಾಗಿ ನನ್ನ ಬಾಯಿಂದ 'ಬಬಲಿ' ಶಬ್ದ ಹೊರಬಿದ್ದಿತ್ತು. ಅಂದಿನಿಂದ ನಾನು ಅವಳನ್ನು ಈ ಹೆಸರಿನಿಂದಲೇ ಕರೆಯುತ್ತೇನೆ. ಈ ಮಧ್ಯೆ ಅವಳ ಮದುವೆಯೂ ಆಗಿಬಿಟ್ಟಿದೆ ಎಂಬುದನ್ನು ತಿಳಿದುಕೊಂಡಿದ್ದೆ. ಅವಳ ಆ ಮುಗ್ಧ ಬಾಲ ಮುಖದ ಮೇಲಿನ ವಯಸ್ಸಿನ ಮತ್ತು ವ್ಯಾಕುಲ ಮುದ್ರೆಯನ್ನು ಕಂಡು ಆಕೆಯ ವಯಸ್ಸಿನ ಪರೀಕ್ಷೆ ಮಾಡಿದ್ದೆ—ಒಂಬತ್ತು ವರ್ಷಕ್ಕಿಂತ ಹೆಚ್ಚಾಗಿರಲು ಹೇಗೆ ಸಾಧ್ಯ. ಆದರೂ ಅವಳು ಏನೇನು ಆಗಲಿಲ್ಲ! ಶೈಶವದ ಹೆಗಲಿನ ಮೇಲೆ ಸಂಸಾರದ ನೊಗ, ಆಪತ್ತಿನ ಹೊರೆ! ಪುಟ್ಟ ಮಗುವಿನ ಪಾಲನೆ ಮತ್ತು ಈಗ ಅವಳ ಕೋಮಲವಾದ ಕೈಗಳು ಎಂಜಲು ಪಾತ್ರೆಗಳನ್ನು ಉಜ್ಜಿ ತೊಳೆಯುವ ಕೆಲಸವನ್ನು ಕಲಿಸಿಕೊಂಡಿದ್ದವು.

ಬೆಳಗ್ಗೆ ಏಳುತ್ತಿದ್ದಂತೆಯೇ ಮನೆ ಕೆಲಸವನ್ನು ಮುಗಿಸಿಕೊಂಡು ತನ್ನ ಪುಟ್ಟ ತಮ್ಮನನ್ನು ಅಜ್ಜಿಯ ಮಡಿಲಲ್ಲಿ ಹಾಕಿ ಪಾತ್ರೆಗಳನ್ನು ತೊಳೆಯಲು ಬರುತ್ತಾಳೆ. ಒಂದು ದಿನ ಮನೆ ಕೆಲಸಗಳನ್ನು ಮುಗಿಸಿಕೊಂಡು ಮನೆಗೆ ಹಿಂತಿರುಗುವುದರಲ್ಲಿದ್ದಳು. ಆಗ ಕೇಳಿದೆ—'ಬಬಲಿ! ನಿನ್ನ ಗಂಡ ಹೇಗಿದ್ದಾನೆ?' ಅವಳು ನಾಚಿಕೊಂಡುಬಿಟ್ಟಳು. ಎರಡೂ ಕೈಗಳಿಂದ ಕೊಳೆಯಾದ ಸೀರೆಯ ಸೆರಗನ್ನು ಸುತ್ತಿಕೊಳ್ಳುತ್ತ ಹೇಳಿದಳು—'ಚೆನ್ನಾಗಿದ್ದಾನೆ.'

'ನೀನು ಮಾವನ ಮನೆಗೆ ಹೋಗುತ್ತಿರುತ್ತೀಯಾ?'

'ಒಂದು ಸಾರಿ ಹೋಗಿದ್ದೆ.' ಅವಳು ದೂರದಲ್ಲಿ ಎಲ್ಲೋ ಕಳೆದುಹೋಗಿದ್ದಳು.

'ನಿನ್ನ ಗಂಡ ಬೆಳ್ಳಗಿದ್ದಾನೋ ಅಥವಾ ಕಪ್ಪಗಿದ್ದಾನೊ?'

'ಕಪ್ಪಗಿಲ್ಲ, ಬೆಳ್ಳಗಿದ್ದಾನೆ, ಅಮ್ಮಾಜಿ.'

'ನಿನಗಿಂತ ದೊಡ್ಡವನಿರಬೇಕು?'

'ಅದೇನೊ ಗೊತ್ತಿಲ್ಲ, ಅಮ್ಮಾಜಿ. ನಿಮ್ಮಷ್ಟು ಎತ್ತರ ಮತ್ತು ಬಾಬೂಜಿಯಷ್ಟು ಬಲಿಷ್ಠನಾಗಿದ್ದಾನೆ' ಬಬಲಿಯ ಸರಳತೆ ನನ್ನ ಅಂತರಂಗವನ್ನೇ ಅಲ್ಲಾಡಿಸಿಬಿಟ್ಟಿತು.

ದಿನಗಳು ಉರುಳುತ್ತಿದ್ದವು. ಅವಳು ತನ್ನ ಕೆಲಸವನ್ನು ನೋಡಿಕೊಳ್ಳುತ್ತಿದ್ದಳು. ಈ ಮನೆಯವರನ್ನು ನಗಿಸುತ್ತಿದ್ದ ಆ ಹುಡುಗಿ ತನ್ನೆಲ್ಲ ಕಷ್ಟಗಳನ್ನು, ದುಃಖವನ್ನು ಮರೆತುಬಿಡುತ್ತಿದ್ದಳು. ನನ್ನ ಮನೆಯಲ್ಲೂ ಒಂದು ಮಗು ಇದೆ ಎಂದು ನನಗನ್ನಿಸುತ್ತಿತ್ತು. ನಾನು ಅವಳಿಂದಾಗಿ ನನ್ನ ಮನಸ್ಸನ್ನು

ಸಂತೋಷಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಅವಳ ಹೆಸರನ್ನು ಎಷ್ಟು ಸಾರಿ ಕರೆದರೂ ಆಯಾಸವಾಗುತ್ತಿರಲಿಲ್ಲ. ಸಂಜೆ ಹೊರಡುತ್ತಿದ್ದಾಗಂತೂ ಯಾವು ದಾದರೊಂದು ನೆಪದಿಂದ ತಡೆಯುತ್ತಿದ್ದೆ—'ಲೇ, ಇವತ್ತೇನು ಅವಸರವೇನು. ಇನ್ನೂ ಸ್ವಲ್ಪ ಹೊತ್ತು ಕುಂತುಕೊ' ಎಂದು ಹೇಳುತ್ತಿದ್ದೆ. ಆ ದಿವ್ಸ ನಾನು ಅವಳಿಗೆ ಮೂರು-ನಾಲ್ಕು ಫ್ರಾಕ್ ಹೊಲಿಸಿಕೊಟ್ಟಿದ್ದೆ ಮತ್ತು ಅವನ್ನು ಬಹಳ ಬಲವಂತ ಮಾಡಿ ತೊಡಲು ಒಪ್ಪಿಸಿದ್ದೆ—'ಬಬಲಿ! ಸೀರೆ ಉಟ್ಟರೆ ನೀನು ಥೇಟು 'ಗೌರಿ' ಹಾಗೆ ಕಾಣುತ್ತೀಯ! ಇಲ್ಲಿ ಬಾ, ನಾನು ನಿನ್ನನ್ನು ಫ್ರಾಕಿನಿಂದ ಅಲಂಕರಿಸುತ್ತೇನೆ! ಈಗ ಸ್ವಲ್ಪ ಕನ್ನಡಿಯಲ್ಲಿ ನೋಡಿಕೊ— ನಿನ್ನ ರೂಪ ಎಷ್ಟೊಂದು ಅರಳಿದೆ—ಮುಗ್ಧ, ಸರಳ ಗೊಂಬೆಯಂತೆ ಗುಂಡಗೆ-ದುಂಡಗೆ!'

* * *

ಅವಳ ಸೌಂದರ್ಯವಾದ ಮುಖವಂತೂ ನನ್ನನ್ನು ಸಮ್ಮೋಹನಗೊಳಿಸಿಬಿಟ್ಟಿತ್ತು. ಅವಳು ಹೋದರಂತೂ ಮನೆ ನನ್ನನ್ನು ಕಚ್ಚುತ್ತಿತ್ತು, ಮೌನ ವ್ಯಾಪಿಸುತ್ತಿತ್ತು, ಖಿನ್ನತೆ ಆವರಿಸುತ್ತಿತ್ತು.

ಅವಳು ಒಂದು ದಿನ ಬಂದಿರಲಿಲ್ಲ. ಇನ್ನೂ ಹುಡುಗಿ, ಒಂದು ದಿನ ರಜೆ ತೆಗೆದುಕೊಂಡರೆ ಏನಾಯಿತು ಮಹಾ ಎಂದು ಯೋಚಿಸಿದೆ. ಆದರೆ ಈ ನಿರ್ಲಜ್ಜ ಮನಸ್ಸು ಒಪ್ಪುತ್ತಲೇ ಇರಲಿಲ್ಲ! ಬಾರಿಬಾರಿಗೂ ಕಣ್ಣುಗಳು ಬಾಗಿಲ ಬಳಿ ಸುಳಿಯುತ್ತಿದ್ದುವು, ಬಬಲಿ ಇನ್ನೇನು ಬರುತ್ತಿರಬಹುದು. ಛೆ, ಬೆಪ್ಪ! ಏಕೆ ಇಷ್ಟು ಹೊತ್ತು ಮಾಡಿದಳೊ ಕಾಣೆ. ರಜೆಯೆ ಆಗಲಿ. ಇಲ್ಲಿಯೇ ಬಂದು ಕಳೆಯಬಹುದಿತ್ತಲ್ಲ, ಆದರೂ ಬಂದಿದ್ದರೆ! ಎರಡು ದಿನ, ನಾಲ್ಕು ದಿನ, ವಾರ ಅವಳು ಬರಲಿಲ್ಲ! ಅವಳ ಸಮಾಚಾರ ಏನು, ತಿಳಿದು ಬರಲಿ, ಹೀಗೆಂದು ಯೋಚಿಸಿ ಹೊರಟೆ. ಕೊಳಕು ಹಳ್ಳಿಯ ಕೊನೆ. ಹೊಲಸು ಹುಲ್ಲು-ಗರಿಯ ಗುಡಿಸಲುಗಳು. ಅಲ್ಲಲ್ಲಿ ಗುಂಡಿಗಳಲ್ಲಿ ಕೊಳೆತು ನಾರುತ್ತಿರುವ ನೀರು, ಹೆಚ್ಚುತ್ತಿರುವ ಸೊಳ್ಳೆಗಳು! ಹರಿದು ಬರುವ ಕಸದ ತಿಪ್ಪೆಗುಂಡಿ! ಎಲ್ಲಿ ಕತ್ತೆಯೊಂದಿಗೂ ಜೊತೆ ಎಳೆಯುತ್ತಿರುವ ನೊಣಗಳು ಮತ್ತು ನಾಲಿಗೆ ಜೋಲಿಸಿ ಕೊಂಡಿರುವ ನಾಯಿಗಳು. ಇನ್ನೊಂದು ಕಡೆ ಕೊಚ್ಚೆಯಲ್ಲಿ ಹೊರಳಿ ತಿರುಗು ತ್ತಿರುವ ಹಂದಿಮರಿಗಳು. ಒಂದು ಗುಡಿಸಲ ಪಕ್ಕದಲ್ಲಿಯೇ ಲಂಗವನ್ನು ಮಾತ್ರ, ಕಣ್ಣುಜ್ಜುತ್ತ ಇಬ್ಬರು ಉಪೇಕ್ಷಿತ ಬಾಲಕರು ಮಲವಿಸರ್ಜನೆ ಮಾಡುತ್ತಿದ್ದರು. ಅವರ ಮೂಗಿನಲ್ಲಿ ಗಂಗೆ-ಯಮುನೆಯರ ಪ್ರವಾಹ ಹರಿಯುತ್ತಿತ್ತು.

ಅದನ್ನು ತಮ್ಮ ಶಕ್ತಿಯನ್ನೆಲ್ಲ ಉಪಯೋಗಿಸಿ ನುಂಗುತ್ತಿದ್ದರು. ಆ ವಾತಾವರಣದ ಭಯಂಕರತೆಯನ್ನು ಊಹಿಸಿಕೊಳ್ಳುತ್ತ ಒಂದು ಗುಡಿಸಿಲನ್ನು ಪ್ರವೇಶಿಸಿದೆ. ಇದು ಬಬಲಿಯ ಮನೆಯಾಗಿತ್ತು. ಗುಡಿಸಿಲಿನ ಒಂದು ಮೂಲೆಯಲ್ಲಿ ಚೈತನ್ಯಹೀನಳಾಗಿ ನಿದ್ರಿಸುತ್ತಿದ್ದಳು. ಅವಳ ಶರೀರ ಕೆಟ್ಟದ್ದಾಗಿ ಸುಡುತ್ತಿತ್ತು. ಇನ್ನೊಂದು ಮುದುಕಿಯ ಮೂಳೆ ದೇಹ ಒಂದು ಗಂಟಿನಂತೆ ಬಿದ್ದಿತ್ತು. ಅವರಲ್ಲಿ ಪರಿಸ್ಥಿತಿಯು ಲಕ್ಷ್ಯವಿಲ್ಲದ ಮಾಂಸಪಿಂಡದಿಂದ ಕೂಡಿದ ಪ್ರಾಣಿ ನಿರ್ಲಕ್ಷ್ಯದಿಂದ ಮಲಗಿತ್ತು.

'ಬಬಲಿಗೆ ಏನಾಯಿತು, ಅಮ್ಮಾಜಿ?' ನನ್ನ ಶಬ್ದದಿಂದ ಆ ಅಸ್ಥಿಪಂಜರದಲ್ಲಿ ಸ್ವಲ್ಪ ಚಲನೆಯುಂಟಾಯಿತು. ಅವಳು ಸ್ಪಷ್ಟ ಹಾಗೂ ಸತ್ಯವನ್ನು ಅರಿಯಲು ತನ್ನ ಮಂಜಾದ ಕಣ್ಣುಗಳನ್ನು ಅಲುಗಾಡಿಸಿದಳು. ತನ್ನ ದುರ್ಬಲ ಶಬ್ದಗಳನ್ನು ಜೋಡಿಸಿ-ಜೋಡಿಸಿ ಹೇಳಿದಳು—'ಹೇ ಭಗವಂತ, ಆ ಮಗ ಕುಪುತ್ರನಾಗದಿದ್ದರೆ!....ಹೇ ರಾಮ! ನಾನು ಈ ನರಕವನ್ನೂ ನೋಡಬೇಕಾಗಿತ್ತೆ. ಅದರೆ....ಈ ಶಬ್ದ ಯಾರದು?' ತನಗೆ ತಾನೆ ಮಾತನಾಡಿಕೊಳ್ಳುತ್ತ ಬೆಚ್ಚಿದಳು. ಅತ್ತ ಆ ಬಡ ಮುಗ್ಧಜೀವ ಎದ್ದು ಹಟ ಮಾಡುತ್ತಿತ್ತು.

'ನಿಮ್ಮ ಮಗ ಎಲ್ಲಿ ಹೋದ ಅಮ್ಮಾ?'

'ನೀನು ಯಾರು, ಮಗು? ಅಯ್ಯೋ ನನಗೆ ಏನೂ ಹೊಳೆಯುತ್ತಲೇ ಇಲ್ಲ. ಇತ್ತ ಇವನೂ ಅಳತೊಡಗಿದ್ದಾನೆ; ಆ ಸುಖ್ಖೋ (ಬಬಲಿ) ಬೇರೆ ಕಡೆ ಬಿದ್ದುಕೊಂಡಿದ್ದಾಳೆ. ನನ್ನನ್ನು ಎತ್ತಿಕೊಂಡುಬಿಡು, ಭಗವಂತ! ಈಗ ಇನ್ನು ಸಹಿಸಲು ಸಾಧ್ಯವಿಲ್ಲ.'

ಕೊಂಚ ತಡೆದು ಮತ್ತೆ ಮಾತಾಡತೊಡಗಿದಳು—

'ಇಲ್ಲಿ ನೋಡು ಈ ನಿರ್ಭಾಗ್ಯ ಬಾಲಕ! ಇವನ ತಾಯಿಯನ್ನು ವಾಂತಿ-ಬೇಧಿ ತಿಂದುಕೊಂಡಿತು. ತಂದೆ ಕುಡುಕ! ಯಾವಾಗಲೋ ರಾತ್ರಿ ಬರುತ್ತಾನೆ. ಪಾಪಿನಷ್ಟು ಹೊಟ್ಟೆಕಟ್ಟಿಕೊಂಡು, ಅಮಲಿನಿಂದ ತೂರಾಡುತ್ತ....ಹೇ ರಾಮ! ಮುದುಕಿ ತಲೆಯನ್ನು ಹಿಡಿದುಕೊಂಡಳು.

ನಾನು ಹೇಳಿದೆ, ಅಮ್ಮಾ! ಮಗುವಿಗೆ ಒಂದು ತುತ್ತು ತಿನ್ನಿಸಿದರೆ ಸುಮ್ಮನಾಗುವುದು.

'ಅಯ್ಯೋ ಮಗು, ಆ ತುತ್ತು ಇದ್ದಿದ್ದರೆ ಅದರ ಮಾತೇ ಬೇರಿರುತ್ತಿತ್ತು....' ಮುಂದಕ್ಕೆ ಅವಳ ನಡುಗುತ್ತಿದ್ದ ಧ್ವನಿ ಮುಗಿದುಹೋಯಿತು. ಪೂರಾ ಶಕ್ತಿಯನ್ನು ಸಂಗ್ರಹಿಸಿಕೊಂಡು ಮತ್ತೆ ಹೇಳಿದಳು—

'ತುತ್ತು ಯಾವಾಗಲೂ ಅರ್ಧ ರಾತ್ರಿಗೆ ಬಿಟ್ಟು ಬಂದಮೇಲೆಯೇ ಸಿಗುವುದು, ಅದೂ ಎಚ್ಚರವಾಗಿದ್ದರೆ ಸರಿ, ಇಲ್ಲದಿದ್ದರೆ ಅದಕ್ಕೂ ರಜೆ!' ಅಜ್ಜಿಗೆ ಕೆಮ್ಮಿನ ಭಯಂಕರವಾದ ಆಕ್ರಮಣಪ್ರಾರಂಭವಾಗತೊಡಗಿತು. ಮನೆಯ ಉಸಿರು ಕಟ್ಟುವ ವಾತಾವರಣ ಇಡೀ ಹೃದಯವನ್ನು ಹಿಂಡುತ್ತಿತ್ತು. ಗುಡಿಸಲ ಮತ್ತೊಂದು ಮೂಲೆಯಿಂದ ಸಾರಾಯಿಯ ದುರ್ವಾಸನೆ ಮೂಗಿಗೆ ಬಡಿಯುತ್ತಿತ್ತು. ಸಾರಾಯಿಯ ಅಸಂಖ್ಯ ಖಾಲಿ ಸೀಸೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ನನ್ನ ತಲೆ ನೋಯತೊಡಗಿತ್ತು.

* * *

ತಿಂದಿ ತಿಂದು ಬಬಲಿ ಕೈತೊಳೆಯಲು ನಲ್ಲಿಯನ್ನು ತಿರುಗಿಸಿದಾಗ ಉಂಟಾದ ನೀರಿನ ಚುರ್‌ಚುರ್ ಶಬ್ದದಿಂದ ಬೆಚ್ಚಿಬಿದ್ದೆ. ಇಷ್ಟು ಹೊತ್ತಿನಿಂದ ನಾನು ಅವಳ ಗತಸ್ಮೃತಿಯಲ್ಲಿಯೇ ಮುಳುಗಿಬಿಟ್ಟಿದ್ದೆ.

'ಹೌದು, ಬಬಲಿ, ಇಂದು ನಿನಗೇನಾಗಿದೆ ಹೇಳಬಾರದೆ?' ಆದರೆ ಅವಳು ಧಾರಾಕಾರವಾಗಿ ಒಂದೇಸಮನೆ ಕಣ್ಣೀರು ಸುರಿಸುತ್ತಿದ್ದಳು. ಮನಸ್ಸಿನ ಭಾರ ಕೊಂಚ ಇಳಿದ ಮೇಲೆ ಬಿಕ್ಕಳಿಸುತ್ತ ಹೇಳಿದಳು—

'ಅಮ್ಮಾಪ್ರೆ ನಾನು ಮಾವನ ಮನೆಗೆ ಹೋಗುತ್ತೇನೆ, ಮತ್ತೆಲ್ಲೂ ಇರುವುದಿಲ್ಲ.'

'ಅರೆ, ಏನು ಹೇಳುತ್ತೀಯೆ!'

ಅವಳು ಬಿಕ್ಕಳಿಸುತ್ತ ಹೇಳಿದಳು, 'ಅಮ್ಮಾಪ್ರೆ, ಅಪ್ಪ ನನ್ನನ್ನು ಬೇರೆ ಯಾರಿಗೋ ಮಾರಬಯಸುತ್ತಾನೆ. ವ್ಯಾಪಾರ ಪಕ್ಕಾ ಆಗಿಬಿಟ್ಟಿದೆ ಎಂದು ಹೇಳುತ್ತಾನೆ. ನನ್ನ ಮೊದಲ ಗಂಡನಿಗೆ ನಷ್ಟ ತುಂಬಿಕೊಡಲು ಹೇಳಿದ್ದಾನೆ, ಅವನು ಅದಕ್ಕೆ ಒಪ್ಪಿಕೊಂಡಿದ್ದಾನೆ. ಮತ್ತೆ, ಅಮ್ಮಾಪ್ರೆ ನಾನು ಲಕ್ಷಬಾರಿ ಅಂಗಲಾಚಿದರೂ ಕೇಳದೆ ನಿನ್ನೆ ರಾತ್ರಿ ಅಪ್ಪ ದೊಣ್ಣೆಯಿಂದ ಹೊಡೆದ. ಎಷ್ಟು ಕೆಟ್ಟದಾಗಿ ಹೊಡೆದ ಎಂದರೆ, ನೋಡು ಅಮ್ಮಾಪ್ರೆ....' ಎಂದು ಹೇಳಿ ತನ್ನ ಬೆನ್ನನ್ನು ತೆರೆದು ತೋರಿದಳು.

'ಬಬಲೀ!.... ನನ್ನ ಮೈಮೇಲೆಲ್ಲ ಮುಳ್ಳುಗಳು ಚುಚ್ಚಿದಂತಾಯಿತು, ನಾನು ನಡುಗುತ್ತ ಬೆರಳುಗಳಿಂದ ಅವಳ ಬೆನ್ನಿನ ಬರೆಗಳನ್ನು ಸವರುತ್ತಿದ್ದೆ.

'ಅಮ್ಮಾಪ್ರೆ', ನಿಮ್ಮ ಕಾಲು ಹಿಡಿದು ಬೇಡಿಕೊಳ್ಳುತ್ತೇನೆ, ನನ್ನ ಅಪ್ಪನಿಗೆ ಬುದ್ಧಿ ಹೇಳಿ, ಅವನು ಇಂಥ ಪಾಪವನ್ನು ಮಾಡದಿರಲಿ. ನಾನು ಮತ್ತೆಲ್ಲಿಗೂ ಹೋಗುವುದಿಲ್ಲ! ಎಲ್ಲಿಗೂ ಇಲ್ಲ, ನಾನು ನನ್ನ ಮಾವನ ಮನೆಗೆ ಹೋಗು

ತ್ತೇನೆ. ನನ್ನ ಮನೆಗೆ!' ಅವಳು ಆವೇಶದಲ್ಲಿ ಬಡಬಡಿಸುತ್ತಿದ್ದಳು. ನನ್ನ ತಲೆ ಕುಂಬಾರನ ಚಕ್ರದಂತೆ ತಿರುಗುತ್ತ ಅವಳ ಮಾನಸ ಮನೆಯ ಸ್ಥಿತಿಯನ್ನು ಅರಿಯುತ್ತಿತ್ತು—'ಅದು ನನ್ನ ಮನೆ ಹೇಗಾದೀತು?' ಮತ್ತು ಬಲಗೈ ಬಾಲೆಯ ಗಾಯಗೊಂಡ ದುಂಬಿದ್ದ ಬೆನ್ನಿನ ಮೇಲೆ ಸ್ಥಿರವಾಗಿತ್ತು.


'ಬಬಲೀ! ನಾನು ನಿನ್ನನ್ನು ನನ್ನ ಮಗಳನ್ನಾಗಿ ಮಾಡಿಕೊಂಡು ದತ್ತು ತೆಗೆದುಕೊಳ್ಳಲೆ....ಹಾಗೆ ಮಾಡಿದರೆ ಹೇಗಿರುತ್ತದೆ? ನಿಮ್ಮಪ್ಪನಿಗೆ ದುಡ್ಡು ಬೇಕು ಅಲ್ಲವೆ?' ನನ್ನ ಬರಿದಾದ ಮಡಿಲನ್ನು ಬಬಲಿಯು ಇದ್ದಕ್ಕಿದ್ದಂತೆ ತುಂಬಿ ಬಿಟ್ಟಂತಿತ್ತು.

ಅವಳು ಚೀರಿಬಿಟ್ಟಳು—'ಓಹ್! ಅಮ್ಮಾಜೀ!'

'ಎಲ್ಲಿ ನೋಡು, ಪುಟ್ಟಿ, ಈಗ ನನ್ನನ್ನು ಅಮ್ಮಾಜೀ ಅಲ್ಲ ಅಮ್ಮಾ ಅನ್ನು, ಕಂದಾ!'

ಅವಳು ಏಕಕಾಲದಲ್ಲಿ ನನ್ನ ಹೃದಯಕ್ಕೆ ಅಂಟಿಕೊಂಡು ಅಳುತ್ತಲೂ ಇದ್ದಳು, ನಗುತ್ತಲೂ ಇದ್ದಳು.

ಡಾ॥ ಬಿ. ಸಂ. ಚಂದ್ರಯ್ಯ



ದೇವರು ಎರಡು ಸ್ಥಾನಗಳಲ್ಲಿ ನಿವಾಸ ಮಾಡುತ್ತಾನೆ. ಒಂದು ದೇವಲೋಕ (ಸ್ವರ್ಗ). ಇನ್ನೊಂದು ಕೃತಜ್ಞತಾಪೂರ್ಣವಾದ ಮಾನವನ ಹೃದಯದಲ್ಲಿ.

—ವಾಲ್ಟನ್

ಎಲ್ಲರೂ ಶ್ರೇಷ್ಠ ಧ್ಯೇಯವನ್ನು ಪ್ರೀತಿಸಿರಿ. ನೀವು ಶ್ರೇಷ್ಠ ಧ್ಯೇಯವನ್ನು ಪ್ರೀತಿಸುವರೋ ಅವರಲ್ಲಿಯ ಹೀನಾಯವೆಲ್ಲ ತನ್ನಿಂದ ತಾನೇ ಬಿಟ್ಟು ಹೋಗುವುದು.

—ವಿವೇಕಾನಂದ

ಜೀವಂತ ಸಮಾಧಿ

ಅಮೆರಿಕದ ಜಾಪ್ಲಿನ್ ನಗರದ ಹೋಟೆಲ್ ಕಾನರ್ ಎಂಟು ಅಂತಸ್ತುಗಳ ಹಳೆಯ ಭಾರೀ ಕಟ್ಟಡ. ಸುಮಾರು ೭೦ ವರ್ಷಗಳ ಕಾಲ, ಭವ್ಯ ನಿರ್ಮಾಣಗಳಲ್ಲೊಂದೆಂಬ ಕೀರ್ತಿಗೆ ಪಾತ್ರವಾಗಿ ತಲೆಯೆತ್ತಿ ನಿಂತಿದ್ದ ಅದನ್ನು ಸಾರ್ವಜನಿಕ ಗ್ರಂಥಾಲಯವಾಗಿ ಮಾರ್ಪಡಿಸಲು ದುರಸ್ತಿ ಕೆಲಸ ಸಾಗುತ್ತಿತ್ತು. ಕಟ್ಟಡದ ಹೆಚ್ಚಿನ ಭಾಗಗಳನ್ನು ಆಗಲೆ ನೆಲಸಮ ಮಾಡಲಾಗಿತ್ತು. ಮಣ್ಣು ಇಟ್ಟಿಗೆ ಕಲ್ಲುಗಳ ರಾಶಿಗಳೂ ಕಬ್ಬಿಣ ಉಕ್ಕು ಕಾಂಕ್ರೀಟು ಚಪ್ಪಡಿಗಳ ಚೂರುಪಾರುಗಳೂ ಎಲ್ಲೆಡೆ ಚದರಿಹೋಗಿದ್ದವು.

ಅಂದು ೧೯೭೮, ನವೆಂಬರ್ ೧೧, ಶನಿವಾರ. ಬೆಳಗ್ಗೆ ಸುಮಾರು ೯ ಗಂಟೆಯ ಸಮಯ. ಕೆಲಸಗಾರರ ಪೈಕಿ ಒಬ್ಬನಾದ ಅಲ್ ಎಂಬಾತ ಸಮ್ಮರ್ಸ್ ಹೋಟೆಲ್ ಕಟ್ಟಡದ ನೆಲಅಂತಸ್ತಿನ ಈಶಾನ್ಯ ಭಾಗದಲ್ಲಿ ಬಿದ್ದಿದ್ದ ತೊಲೆಗಳನ್ನು ಜೋಡಿಸುವ ಕಾರ್ಯದಲ್ಲಿ ನಿರತನಾಗಿದ್ದ. ಅವನ ವಯಸ್ಸು ಮೂವತ್ತೊಂದು. ಆಗಾಗ ಕೆಮ್ಮುತ್ತಿದ್ದ. ಕೈಯಲ್ಲಿ ಅಸಿಟಿಲೀನ್ ಟಾರ್ಚನ್ನು ಹಿಡಿದಿದ್ದ. ಇದ್ದಕ್ಕಿದ್ದಂತೆ ಮೇಲಿನಿಂದ ಗಡಗಡ ಸದ್ದು ಕೇಳಿಸಿತು. ಮೇಲೆ ನೋಡಿದ ಸಮ್ಮರ್ಸ್ ಕಂಡುದಾದರೂ ಏನು? ಚಾವಣಿಗೆ ಚಾವಣಿಯೇ ಅಲುಗಾಡುತ್ತಿತ್ತು. ಅದೇ ಕ್ಷಣದಲ್ಲಿಯೇ ಭೀಕರ ದುರಂತ ಘಟಿಸಿತ್ತು. ಅಣೆಕಟ್ಟು ಬಿರಿದುಹೋದರೆ ಹೇಗೋ ಹಾಗೆ— ಆದರೆ ಭೋರ್ಗರೆಯುತ್ತ ಹರಿದದ್ದು ನೀರಲ್ಲ; ಬದಲಾಗಿ ಕಾಂಕ್ರೀಟು ಉಕ್ಕು ಇಟ್ಟಿಗೆ ಹಾಗೂ ಪ್ಲಾಸ್ಟರುಗಳ ಅಸಂಖ್ಯಾತ ತುಣುಕುಗಳ ಪ್ರವಾಹ.

ದೃಶ್ಯ ಬದಲಾಗಿತ್ತು. ಆಗ ಅಲ್ಲುಳಿದದ್ದು ಶ್ಮಶಾನ ಮೌನ ಹಾಗೂ ಅಮಾವಾಸ್ಯೆಯ ಅಂಧಕಾರ ಮಾತ್ರ. 'ನೆಲ ಅಂತಸ್ತೇ ಕುಸಿಯಿತೇ?' ಸಮ್ಮರ್ಸ್ ಭೀತನಾದ. 'ಕಟ್ಟಡದ ಉಳಿದೆಲ್ಲ ಭಾಗಗಳೂ ಯಾವುದೇ ಕ್ಷಣದಲ್ಲಿ ಕುಸಿದು ಬೀಳಬಹುದು. ಆದ್ದರಿಂದ ಸಾಧ್ಯವಾದಷ್ಟು ಬೇಗ ತಪ್ಪಿಸಿಕೊಳ್ಳಬೇಕು. ಅಯ್ಯೋ ದೇವರೆ! ಎಂಥ ಸ್ಥಿತಿ ಬಂತು!' ಆ ಉರುಳು ಪ್ರವಾಹದಿಂದ ಹೇಗೆಂತೋ ನುಣುಚಿಕೊಂಡು ಸಮ್ಮರ್ಸ್ ಸ್ವಲ್ಪದೂರ ಬಂದ. ಅತ್ತಿತ್ತ ತಡವಿದಾಗ ತಾನೊಂದು ಗುಹೆಯಲ್ಲಿ ಸಿಕ್ಕಿಬಿದ್ದಿರುವಂತೆ ಅನಿಸಿತು. ಕೆಳಗೆ ಮುರಿದು ಜಜ್ಜಿಹೋಗಿದ್ದ ಉಕ್ಕಿನ ತೊಲೆ; ಅದರ ಮೇಲೆ ವಿಶ್ರಮಿಸಿದ ಎರಡು ಕಾಂಕ್ರೀಟು ಚಪ್ಪಡಿಗಳೂ ಇವುಗಳಿಂದ ರೂಪುಗೊಂಡ, ಒಂದು ಮೀಟರಿಗಿಂತಲೂ ಕಡಮೆ

೧೯೮೦ರ ಆಗಸ್ಟ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಲಾರಿವುಡ್ ಅವರ "ಬರೀಡ್ ಅಲೈವ್" ಎಂಬ ಲೇಖನದ ಸರಳಾನುವಾದ.

ಎತ್ತರವಾದ ತ್ರಿಕೋಣಾಕಾರದ ಬಿಲವೊಂದರಲ್ಲಿ ಬಂಧಿತನಾಗಿದ್ದ ಸಮ್ಮರ್ಸ್.

ಅವನ ಎದೆಯ ಎಡಭಾಗದ ಮೂಳೆ ನೋಯುತ್ತಿತ್ತು. ಅವನೂ ಕಾಂಕ್ರೀಟಿನ ಚಪ್ಪಡಿಯನ್ನು ನಿಧಾನವಾಗಿ ಸರಿಸಲು ಪ್ರಯತ್ನಿಸಿದ. ತನ್ನ ಕೈಗಳಿಂದಲೇ ಅವಶೇಷಗಳನ್ನು ಸರಿಸಿ ದಾರಿಮಾಡಿಕೊಂಡು ಆ ಸ್ಥಳದಿಂದ ಪಾರಾಗಲು ಸಾಧ್ಯವಾಗುವ ಕಟ್ಟಡದ ಮೃದುಭಾಗವನ್ನು ಹುಡುಕುವುದು ಅವನ ಉದ್ದೇಶವಾಗಿತ್ತು. "ಕಾಪಾಡಿ" ಎಂದು ಅವನು ಕೂಗಿದ. "ಸಹಾಯಕ್ಕೆ ಯಾರಾದರೂ ಬನ್ನಿ". ಅವನು ಅರಚಿಕೊಂಡದ್ದೇ ಬಂತು. ಯಾರಿಂದಲೂ ಉತ್ತರವಿಲ್ಲ. ಬರಿಯ ಮೌನ; ಬರಿಯ ಕತ್ತಲು. ಸಮ್ಮರ್ಸ್‌ಗೆ ತಾನು ಸಾವಿನ ಸಮೀಪ ಸಾಗುತ್ತಿದ್ದೇನೆ ಎಂದು ಅನಿಸತೊಡಗಿತು.

ಮೇಲ್ಭಾಗದಲ್ಲಿ ಉಳಿದುದೆಂದರೆ ಎರಡಂತಸ್ತುಗಳಷ್ಟು ಎತ್ತರದ ಗುಡ್ಡೆಯಾಗಿ ಬಿದ್ದುಕೊಂಡಿದ್ದ ಗಾರ್ಡ್ ಹೋಟೆಲಿನ ಭಗ್ನಾವಶೇಷಗಳು ಮಾತ್ರ. ಸಮ್ಮರ್ಸನು ಅನುಮಾನಪಟ್ಟಿದ್ದನೊ, ಅದೇ ಸಂಭವಿಸಿತ್ತು. ಮರಳಿನ ಮನೆಯಂತೆ, ಹೋಟೆಲಿನ ಇಡೀ ಕಟ್ಟಡವೇ ಕುಸಿದುಬಿದ್ದಿತ್ತು.

ಪೋಲಿಸರೂ ರಕ್ಷಣಾ ಸಿಬ್ಬಂದಿಯೂ ಧಾವಿಸಿ ಬಂದರು. ದುರಂತ ಸಂಭವಿಸಿದಾಗ ಅನೇಕ ಕೆಲಸಗಾರರು ಕಟ್ಟಡದ ಒಳಗೆ ಇದ್ದಿರಬೇಕು. ಒಂದು ಗಂಟೆಯೊಳಗೆ ಸಾಮಾನು ಎತ್ತುವ ಭಾರೀ ಯಂತ್ರಗಳೂ ಕ್ರೇನುಗಳೂ ಬುಲ್‌ಡೋಜರುಗಳೂ ಟ್ರಕ್ಕುಗಳೂ ಆ ಸ್ಥಳಕ್ಕೆ ಬಂದುವು. ರಕ್ಷಣಾದಳದವರು ಕಾರ್ಯಪ್ರವೃತ್ತರಾದರು.

ಭಗ್ನಾವಶೇಷಗಳ ಮಹಾಪರ್ವತದ ಅಡಿ ಸಿಕ್ಕಿಬಿದ್ದಿದ್ದ ಸಮ್ಮರ್ಸನಿಗೆ ಅಲ್ಲಿಯೇ ಒಂದು ಪುಟ್ಟ ನಿದ್ರೆ. ಎಚ್ಚೆತ್ತಾಗ ಅವನಿಗೆ ಸ್ವಲ್ಪ ಹಗುರೆನಿಸಿತು. ಪಕ್ಕೆ ನೋವು ಕಡಿಮೆಯಾಗಿತ್ತು. ಹಾರಾಡುತ್ತಿದ್ದ ದೂಳೆಲ್ಲ ಅಡಗಿಹೋಗಿದ್ದುದರಿಂದ ಉಸಿರಾಡಲು ಅಷ್ಟೇನೂ ಕಷ್ಟವಾಗುತ್ತಿರಲಿಲ್ಲ. ಆದರೆ ತಾನಿದ್ದ ಸ್ಥಳವನ್ನು ಬದಲಾಯಿಸಲು ಪ್ರಯತ್ನಿಸಿದಾಗ ವಿದ್ಯುತ್ ಶಾಕ್ ಹೊಡೆದಂತೆ ಯಾತನೆಯಾಯಿತು. 'ಈಗ ನಾನು ನನ್ನ ಬಲಗಾಲನ್ನು ಕದಲಿಸಲಾರೆ; ಬಲಗಾಲೆಂಬುದೊಂದು ಇದೆ ಎಂದೂ ನನಗೆ ಭಾಸವಾಗುತ್ತಿಲ್ಲ'. ಅವನ ದೇಹದ ಇಡೀ ಎಡಭಾಗ ಬೆಂಕಿ ತಾಗಿದಂತೆ ಸುಡುತ್ತಿತ್ತು.

ಅನತಿದೂರ ಭಾಗದಿಂದ ಬರುತ್ತಿರುವ ಬುಲ್‌ಡೋಜರಿನ ಚಟಪಟ ಕೇಳಿ ಬರುತ್ತಿತ್ತು. 'ಅಬ್ಬ! ರಕ್ಷಣಾ ಸಿಬ್ಬಂದಿಯವರು ಬರುತ್ತಿದ್ದಾರೆ'. "ಹೋ!" ಎಂದು ಮತ್ತೆ ಕೂಗಿದ. "ಸಹಾಯಕ್ಕೆ ಬನ್ನಿ" ಎಂದೂ ಅರಚಿಕೊಂಡ. ಆದರೆ ಉತ್ತರವೇ ಇಲ್ಲ.

ಕತ್ತಲೆಯಲ್ಲಿ ಹುಡುಕುತ್ತಿದ್ದಾಗಲೇ ಲೋಹದ ಪೈಪೊಂದು ಅವನ ಕೈಗೆ ತಗಲಿತು. ಆಗ ಉಕ್ಕಿನ ತೊಲೆಯ ಚೂರೊಂದರಿಂದ ಅದನ್ನು ಬಡಿದು ಸಮ್ಮರ್ಸ್ ಸದ್ದು ಮಾಡಲು ಪ್ರಾರಂಭಿಸಿದ. 'ಬಹುಶಃ ಇದಾದರೂ ಅವರ ಗಮನ ಸೆಳೆಯಬಹುದೇನೋ!' ಆದರೆ ಉತ್ತರವೇ ಇಲ್ಲ.

ಜಾಪ್ಲಿನ್ ನಗರದ ಹೊರವಲಯದಲ್ಲಿ ಇದ್ದ ಸಮ್ಮರ್ಸನ ಮನೆಯಲ್ಲಿ ಅವನ ಹೆಂಡತಿ ಪಾಟ್‌ಗೆ ಬಾಗಿಲು ತಟ್ಟಿದ ಸದ್ದು ಕೇಳಿಸಿತು. ಕದ ತೆರೆದಾಗ ಅವಳು ಕಂಡದ್ದು ಪಕ್ಕದ ಮನೆಯವನೊಬ್ಬನನ್ನು. "ಕಾನರ್ ಹೋಟೆಲಿನ ಸಮಾಚಾರ ವೇನಾದರೂ ನಿನಗೆ ತಿಳಿಯಿತೇ? ಅದು ಕುಸಿದುಬಿತ್ತಂತೆ" ಎಂದು ಅವನು ಹೇಳಿದ.

ಆಗ ಪಾಟಳ ಹೃದಯ ಕಂಪಿಸಿತು. ಭಗ್ನಾವಶೇಷಗಳ ರಾಶಿಯ ಗುಡ್ಡವೇ ಅವಳ ಕಣ್ಣೆದುರು ತೋರಿಬಂದಂತಾಗಿ ಅವಳಿಗೆ ಭಯವಾಯಿತು. ಯಾವ ಯಾವ ಕೆಲಸಗಾರರು ಕಾಣೆಯಾಗಿದ್ದಾರೆ ಎಂಬುದನ್ನು ಯಾರೂ ನಿಖರವಾಗಿ ಹೇಳುವಂತಿರಲಿಲ್ಲ. ಆದರೆ, ಅಲ್‌ಸಮ್ಮರ್ಸ್ ಕೂಡ ದುರಂತಕ್ಕೆ ಬಲಿಯಾದವರಲ್ಲಿ ಒಬ್ಬನಾಗಬಹುದು ಎಂಬ ಊಹೆಯಿಂದಲೇ ಪಾಟಳ ಹೃದಯ ಬಡಿದುಕೊಳ್ಳತೊಡಗಿತು. ಅವಳ ಕಾಲುಗಳು ಸೋತುಹೋದವು. ಅವಳು ಕುಸಿದುಬಿದ್ದಳು – ಕಾನರ್ ಹೋಟೆಲಿನಂತೆಯೇ.

ದುರ್ಗಂಧಯುಕ್ತವಾದ ಕತ್ತಲಬಿಲದಲ್ಲಿ ಅಲ್‌ಸಮ್ಮರ್ಸ್‌ನ ಕಿವಿಗೆ ಬೀಳುತ್ತಿದ್ದ ಯಂತ್ರಗಳ ಆರ್ಭಟ ಇದ್ದಕ್ಕಿದಂತೆ ನಿಂತುಹೋಗಿ ಮೌನ ವ್ಯಾಪಿಸಿತು. ಸದ್ದು ಏಕೆ ನಿಂತುಹೋಯಿತು? ಅವರು ಕೆಲಸ ನಿಲ್ಲಿಸಿದರೋ ನನ್ನನ್ನು ಇಲ್ಲಿಯೇ ಸಾಯಲೆಂದು ಬಿಟ್ಟು ಬಿಟ್ಟರೇ? ನಾನು ಆಗಲೇ ಸತ್ತುಹೋಗಿದ್ದೇನೆಂದು ಪ್ರಾಯಶಃ ಅವರು ಭಾವಿಸಿರಬೇಕು ಅಥವಾ ನಾನು ಇಲ್ಲಿದ್ದೇನೆಂದು ಅವರು ತಿಳಿದಿರಲಾರರೇನೋ ಗಾಬರಿಯಿಂದ ಸಮ್ಮರ್ಸ್‌ನಿಗೆ ಹೊಟ್ಟೆ ಬಿಗಿದುಹೋದಂತೆ ಅನಿಸಿತು.

ನೆಲದೊಳಗಿನ ಕಂಪನಗಳನ್ನು ಪತ್ತೆಹಚ್ಚುವಂಥ ಯಂತ್ರವೊಂದು ಕಟ್ಟಡ ಕುಸಿತದ ನಿವೇಶನಕ್ಕೆ ಬಂತು. ಆದರೆ, ಸೂಕ್ಷ್ಮಸಂವೇದನೆಯುಳ್ಳ ಈ ಯಂತ್ರವೂ ಅವಶೇಷಗಳ ಅಡಿಯಲ್ಲಿ ಸಿಕ್ಕಿಬಿದ್ದ ಯಾವನೇ ಕೆಲಸಗಾರನನ್ನು ಹುಡುಕುವಲ್ಲಿ ಸ್ವಲ್ಪವಾದರೂ ಯಶಸ್ವಿಯಾಗಲಿಲ್ಲ.

'ಅಬ್ಬ!' ಮೇಲಿನಿಂದ ಮತ್ತೆ ಸದ್ದು ಕೇಳಿಸತೊಡಗಿತು. 'ಅಂದರೆ ಮತ್ತೆ ಪ್ರಯತ್ನ ನಡೆಸತೊಡಗಿದ್ದಾರೆ—ನನ್ನನ್ನು ಪಾರುಮಾಡಲು ಅಥವಾ ಕಟ್ಟಡದ

ಉಳಿದ ಭಾಗ ಕುಸಿದುಬೀಳದಂತೆ ತಡೆಯಲು ಅವರು ಪ್ರಯತ್ನಿಸುತ್ತಿರಬಹುದೆ? ನಾನಿರುವ ಸ್ಥಳದ ಮೇಲ್ಭಾಗದಲ್ಲಿಯೇ ಬುಲ್‌ಡೋಜರ್‌ಗಳ ಸದ್ದು ಕೇಳಿಬರುತ್ತಿದೆಯಲ್ಲ! ಅವರಿಗೆ ನಾನು ಇಲ್ಲಿರುವುದು ತಿಳಿಯದೇ? ಈ ಬುಲ್‌ಡೋಜರುಗಳ ಕೆಲಸದಿಂದ ಇನ್ನಷ್ಟು ಮಣ್ಣು ಇಟ್ಟಿಗೆ ಚೂರುಗಳು ಬಿದ್ದು ನಾನು ಇಲ್ಲಿಯೇ ಸಮಾಧಿ ಹೊಂದಿದರೆ ಏನು ಗತಿ??.

ಒಂಬತ್ತು ಗಂಟೆ ರಾತ್ರಿಯ ವೇಳೆ. ಟಲ್‌ಸಮ್ಮರ್ಸ್ ನಿಜವಾಗಿಯೂ ಅವಶೇಷಗಳ ಅಡಿಯಲ್ಲಿ ಸಿಕ್ಕಿಬಿದ್ದಿದ್ದಾನೆ ಎಂಬುದು ರಕ್ಷಣಾದಳದವರಿಗೆ ಖಾತ್ರಿಯಾಯಿತು.

ಭಾನುವಾರ ಬೆಳಗ್ಗೆ ರಕ್ಷಣಾದಳದ ಮುಖ್ಯಾಧಿಕಾರಿಯಾದ ಹೆರಾಲ್ಡ್ ಸ್ನೈಡರ್ ತನ್ನ ಕೆಲಸಗಾರರೊಂದಿಗೆ ಕಲೆತು ಚರ್ಚಿಸಿದ. “ಈ ನಿವೇಶನದ ನೇರ ಕೆಳಭಾಗದಲ್ಲಿ ಭೂಗತ ಅನಿಲ ಕಾಲುವೆಯೊಂದಿದೆ. ನಮ್ಮ ಯಂತ್ರಗಳು ಅದರ ನೇರ ಮೇಲ್ಭಾಗದಲ್ಲಿ ಕೆಲಸ ನಡೆಸುತ್ತಿವೆ. ಒಂದೊಮ್ಮೆ ದುರದೃಷ್ಟವಶಾತ್ ಗ್ಯಾಸ್‌ಪೈಪ್‌ನಲ್ಲಿ ಏನಾದರೂ ಬಿರುಕುಂಟಾದರೆ ಗ್ಯಾಸ್ ಇಡೀ ಪ್ರದೇಶವನ್ನೇ ವ್ಯಾಪಿಸಬಹುದು.”

ರಕ್ಷಣಾದಳದ ಕಾರ್ಯ ಬಿರುಸಾಗಿ, ಆದರೆ ಜಾಗರೂಕತೆಯಿಂದಲೇ ಮುಂದುವರಿಯಿತು. ಭೂಗತರಾದ ಕೆಲಸಗಾರರ ಸಂಖ್ಯೆ ಮೂರು; ಅವರೇ ಟಲ್‌ಸಮ್ಮರ್ಸ್, ಥಾಮಸ್ ಎಡ್ವರ್ಡ್ ಓಕ್ಸ್ ಹಾಗೂ ಫ್ರೆಡರಿಕ್ ಕೋ ಎಂದು ನಿಖರವಾಗಿ ತಿಳಿದುಬಂತು. ಮರುದಿನ ಸ್ನೈಡರ್ ರಕ್ಷಣಾ ಕಾರ್ಯವನ್ನು ಪರಿಶೀಲಿಸುತ್ತಾ ನಿಂತಿದ್ದಾಗ ಒಬ್ಬ ಫೋರ್‌ಮನ್ ಬಂದು ಅವಶೇಷಗಳಡಿ ಯಾರೊಬ್ಬರೂ ಜೀವಂತವಾಗಿ ಉಳಿದಿರುವ ಸಂಭವ ಕಂಡುಬರುತ್ತಿಲ್ಲವೆಂದು ಹೇಳಿದ.

ಆದರೆ ಅದೇ ಸಮಯ ಅವಶೇಷಗಳ ರಾಶಿಯ ಒಂದು ಮೂಲೆಯಿಂದ ಪಾರಿವಾಳವೊಂದು ಹಾರಿಬಂತು; ಅದರ ಹಿಂದೆಯೇ ಇನ್ನೊಂದು; ಇನ್ನೊಂದರ ತರುವಾಯ ಮತ್ತೊಂದು. ಹೋಟೆಲ್ ಕಟ್ಟಡ ಕುಸಿಯುವ ಮೊದಲು ಬಹುಶಃ ಈ ಪಾರಿವಾಳಗಳು ಕಟ್ಟಡದ ಮೇಲಂತಸ್ತುಗಳಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದಿರಬೇಕು. ಸ್ನೈಡರನಲ್ಲಿ ಮತ್ತೆ ಆಸೆ ಅಂಕುರಿಸಿತು. “ಪಾರಿವಾಳಗಳು ಹೀಗೆ ಜೀವಂತವಾಗಿದ್ದು ತಪ್ಪಿಸಿಕೊಳ್ಳಬಲ್ಲವಾಗಿದ್ದ ಪಕ್ಷದಲ್ಲಿ, ಮನುಷ್ಯನಿಗೇಕೆ ಸಾಧ್ಯವಾಗದು?”

ಆ ಮಧ್ಯಾಹ್ನ, ಬುಲ್‌ಡೋಜರುಗಳನ್ನು ಬದಿಗೆ ಸರಿಸಿ ಭೂಗತರಾದವರನ್ನು ಹೊರತೆಗೆಯುವ ಕೆಲಸ ಪುನಃ ಪ್ರಾರಂಭವಾಯಿತು. ಕಟ್ಟಡದ ಈಶಾನ್ಯ ಭಾಗ

ದಲ್ಲಿ ಅನೇಕ ಪೊಳ್ಳು ಭಾಗಗಳಿದ್ದುದು ತಿಳಿದಾಗಲಂತೂ ಸ್ನೈಡರ್ ಇನ್ನಷ್ಟು ಉತ್ಸಾಹಗೊಂಡ. “ಇಲ್ಲಿಯೋ ಎಲ್ಲೋ ಸಮ್ಮರ್ಸ್ ಮತ್ತು ಬಾಳಿಬ್ಬರು ಇರಬೇಕು.”

ಆ ವೇಳೆಗೆ ಸಮ್ಮರ್ಸ್ ತನ್ನೆಲ್ಲ ಕಾಲಪ್ರಜ್ಞೆಯನ್ನು ಕಳೆದುಕೊಂಡಿದ್ದ. ಅವನ ಬಲಗಾಲು ಸಂಪೂರ್ಣ ಮರವಟ್ಟಿತ್ತು. ದೇಹವಿಡೀ ಶೀತಜ್ವರ ಬಂದಂತೆ ನಡುಗುತ್ತಿತ್ತು. ನೋವಿನಿಂದ ದನಿಯೇನೋ ಅಡಗಿತ್ತು. ಆದರೆ ಬಾಯಾರಿಕೆ ಅಡಗಿರಲಿಲ್ಲ. ಅವನ ನಾಲಗೆ, ಬಾಯಿಗಳು ಒಣಗಿ ಹೋಗಿದ್ದವು. ತುಟಿಗಳೂ ನೀರಿನ ಪಸೆಯೇ ಇಲ್ಲದೆ ಬತ್ತಿಹೋಗಿದ್ದವು; ಬಿರುಸಾಗಿದ್ದವು.

ಕ್ಷಣಸಾಗುತ್ತ ಬಂದಂತೆ, ಸಮ್ಮರ್ಸನಿಗೆ ತಾನು ನಿದ್ರಿಸಿರುವೆನೋ ಎಚ್ಚತ್ತಿರುವೆನೋ ಎಂದು ಕೂಡ ಗ್ರಹಿಸಲಾಗದಂತಾಯಿತು. ಸ್ವಲ್ಪ ಹೊತ್ತು ನಿದ್ರೆ; ಏನೇನೋ ವಿಚಿತ್ರ ಕನಸುಗಳು; ತರುವಾಯ ಎಚ್ಚರ. ಕನಸುಗಳಲ್ಲೂ ದೈತ್ಯ ಬುಲ್‌ಡೋಜರ್ ತನ್ನ ಮೇಲೆಯೇ ಏರಿಬಂದಂತೆ; ತಾನು ಆ ಕಟ್ಟಡದ ಇನ್ನಾವುದೋ ಭಾಗಕ್ಕೆ ಗಾಳಿಯಲ್ಲಿಯೇ ಚಲಿಸಿದಂತೆ.

“ನನಗೆ ಏನಾಗುತ್ತಿದೆ? ನನಗೆ ಹುಚ್ಚು ಹಿಡಿಯುತ್ತಾ ಇದೆಯೋ? ಅಥವಾ ನಾನು ಸಾಯುತ್ತಾ ಇರಬೇಕು.”

ಸೋಮವಾರ ಬೆಳಗ್ಗೆಯ ಹೊತ್ತಿಗೆ ಹೆಚ್ಚಿನ ಅವಶೇಷಗಳನ್ನು ಸ್ಥಳಾಂತರಗೊಳಿಸಲಾಗಿತ್ತು. ಆದರೆ ಕೆಲಸ ಜಾಗರೂಕತೆಯಿಂದಲೇ ಮುಂದುವರಿದಿತ್ತು. ಆ ದಿನ ಮಧ್ಯಾಹ್ನ, ರಕ್ಷಣಾ ಸಿಬ್ಬಂದಿಗೆ ಸಹಾಯ ಮಾಡುತ್ತಿದ್ದ ಮೇಲ್ವಿಚಾರಕನೊಬ್ಬ ಸ್ನೈಡರನನ್ನು ಕರೆದು “ನಮ್ಮ ಕೆಲಸವನ್ನು ಇನ್ನಷ್ಟು ವೇಗವಾಗಿ ಮುಂದುವರಿಸದೆ ಇದ್ದರೆ, ಆ ಮೂವರನ್ನು ರಕ್ಷಿಸುವ ಕಾರ್ಯದಲ್ಲಿ ಸಫಲರಾಗುವ ಸಂಭವ ಬಹಳ ಕಡಿಮೆಯಾಗುತ್ತದೆ” ಎಂದ.

“ಹೌದು” ಸ್ನೈಡರ್ ತಲೆಯಲ್ಲಾಡಿಸಿದ.

ಆ ಸಂಜೆ ಮಬ್ಬುಕತ್ತಲೆ ಕವಿದಿತ್ತು. ವಿಶೇಷ ತರಬೇತಿ ಪಡೆದ ಜರ್ಮನ್ ನಾಯಿಯೊಂದು ಕೆಲಸಗಾರರಿಗೆ ಸಹಾಯಕವಾಗಿತ್ತು. ಆದರೂ ಅವಶೇಷಗಳಡಿ ಸಿಕ್ಕಿಬಿದ್ದ ದುರ್ದೈವಿಗಳ ಪತ್ತೆಯಾಗಲೀ ಇಲ್ಲ,

‘ಈ ಬಿಲವೇ ನನ್ನ ಸಮಾಧಿಯಾಗಬಹುದೇ?’ ಸಮ್ಮರ್ಸನಿಗೆ ತಾನು ಸಾವಿನ ಬಗ್ಗೆಯೇ ಹೆಚ್ಚು ಹೆಚ್ಚು ಆಲೋಚಿಸುತ್ತಿದ್ದಂತೆ ಅನ್ನಿಸಿತು, ಆದರೂ ಅಂಥ ಯೋಚನೆಗಳನ್ನು ದೂರಸರಿಸಲು ಅವನು ಪ್ರಯತ್ನಿಸುತ್ತಿದ್ದ. “ಪಾಟ್ ಮತ್ತು ಹನ್ನೊಂದು ವರ್ಷ ವಯಸ್ಸಿನ ಮಗ ಟಾಮ್. ಅವರು ಎಷ್ಟು ಆತಂಕ

ಪಡುತ್ತಿರಬಹುದು! ನಾನು ಮತ್ತೆ ಅವರನ್ನು ಸೇರುತ್ತೇನೆಯೇ? ನಾನು ಸತ್ತಿರುವೆನೇ ಬದುಕಿರುವೆನೇ ಎಂಬುದೇ ಅವರಿಗೆ ತಿಳಿದಿರಲಿಕ್ಕಿಲ್ಲ. ಅಯ್ಯೋ ದೇವರೆ! ನನಗೆ ಸಾಯುವ ಮನಸ್ಸಿಲ್ಲ. ಸಾಯುವುದೇ ಆದರೂ ಈ ರೀತಿಯಲ್ಲಿ ಈ ಸ್ಥಳದಲ್ಲಿ ಸಾಯಲು ಖಂಡಿತ ಇಷ್ಟವಿಲ್ಲ. ಒಮ್ಮೆ ನಾನು ಇಲ್ಲಿಂದ ಪಾರಾಗುವಂತಾಗಲಿ, ನನ್ನ ಹೆಂಡತಿ ಮಕ್ಕಳನ್ನು ಸೇರುವಂತಾಗಲಿ."

ಜೀವನ ಕೊನೆಗೊಳ್ಳುತ್ತಿದ್ದಂತೆ ಅವನಿಗನಿಸಿತು. "ಇನ್ನೊಮ್ಮೆ ನಿದ್ರೆ ಬಂದರೆ ಬಹುಶಃ ನಾನು ಮತ್ತೆ ಏಳುವುದಿಲ್ಲ. ಅದೇ ನನ್ನ ಕೊನೆಯ ನಿದ್ರೆಯಾಗುತ್ತದೆ?"

ಮಂಗಳವಾರ ಬೆಳಗ್ಗೆ, ಅನೇಕ ಪೊಳ್ಳುಭಾಗಗಳನ್ನು ಹುಡುಕಲಾಯಿತು. ಸಮ್ಮರ್ಸ್ ಮತ್ತಿತರರ ಪತ್ತೆಯಾಗಲಿಲ್ಲ. ನಡುಮಧ್ಯಾಹ್ನದ ಹೊತ್ತಿಗೆ ಇನ್ನೊಂದು ಪೊಳ್ಳುಭಾಗವನ್ನು ಮುಚ್ಚಿದ ದೊಡ್ಡ ಕಾಂಕ್ರೀಟು ಚಪ್ಪಡಿಯನ್ನು ಕೆಲಸಗಾರರು ಮೇಲೆತ್ತಿದರು. ಧೂಳು ಮೇಲೇರುತ್ತಿದ್ದಂತೆ ಸ್ನೈಡರ್ "ಹೇ" ಎಂದು ಕೂಗಿದ.

"ಹೇ" ಎಂಬ ಪ್ರತ್ಯುತ್ತರ ಬಂತು.

ಸ್ನೈಡರನ ಉತ್ಸಾಹ ಗರಿಗೆದರಿತು. ಹರ್ಷದಿಂದ ಉದ್ವೇಗದಿಂದ "ಯಾರದು?" ಎಂದು ಅವನು ಪ್ರಶ್ನಿಸಿದ.

"ಅಲ್ ಸಮ್ಮರ್ಸ್"

"ಹೇಗಿದ್ದೀ?"

"ಸಾಕಷ್ಟು ಚೆನ್ನಾಗಿಯೇ."

ಸ್ವರ ಕೇಳಿ ಸಮ್ಮರ್ಸನ ಆಪ್ತ ಮಿತ್ರನಾದ ಪ್ಯಾಟ್‌ಮ್ಯಾಕ್‌ರೇ ಸ್ನೈಡರನಲ್ಲಿಗೆ ಓಡಿಬಂದ.

ಇನ್ನಷ್ಟು ಕುಸಿತವುಂಟಾಗದಂತೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಂಡ ತರುವಾಯ, ಸ್ನೈಡರ್ ಮತ್ತು ಮ್ಯಾಕ್‌ರೇ ತಮ್ಮ ಕೈಗಳಿಂದಲೇ ನಿಧಾನವಾಗಿ ಅವಶೇಷಗಳನ್ನು ಬದಿಗೆ ಸರಿಸತೊಡಗಿದರು. ಪ್ಲಾಸ್ಟರ್ ಚೂರುಗಳು, ಇಟ್ಟಿಗೆಯ ತುಣುಕುಗಳು, ಧೂಳು, ಮಣ್ಣು ಹೀಗೆ ಸುಮಾರು ಅರ್ಧ ಮೀಟರಿನಷ್ಟು ರಂಧ್ರ ಕೊರೆದಾಗ ಸಮ್ಮರ್ಸ್ ಬಂಧಿತನಾಗಿದ್ದ ಕತ್ತಲಬಿಲಕ್ಕೆ ದಾರಿ ಉಂಟಾಯಿತು. ತಾನು ಸಾಯಲೇಬಾರದು ಎಂಬ ಹಠ ತೊಟ್ಟಂತಿದ್ದ ಸಮ್ಮರ್ಸ್ ಕೂಡ ತನ್ನ ಕೈಗಳಿಂದ ತಲೆಯ ಮೇಲ್ಭಾಗದಲ್ಲಿರುವ ಅವಶೇಷಗಳನ್ನು ಜಾಗರೂಕತೆಯಿಂದ ದೂರಸರಿಸುವ ಕೆಲಸವನ್ನು ಸಾಗಿಸಿದ್ದ. ಆ ಅಪರಾಹ್ನ ಎರಡೂವರೆ ಗಂಟೆಯ ಹೊತ್ತಿಗೆ ಸಮ್ಮರ್ಸ್ ಹಾಗೂ ಸ್ನೈಡರರ

ಕೈಗಳು ಪರಸ್ಪರ ಭೇಟಿಯಾದುವು ಹೋಟೆಲ್ ಕಟ್ಟಡ ಕುಸಿದು ಆಗಲೇ ಮೂರು ದಿನಗಳು ಕಳೆದುಹೋಗಿದ್ದುವು.

"ಹೇ, ಆಲ್" ರಂಧ್ರದಲ್ಲಿ ತಲೆ ತೂರಿಸುತ್ತ ಮ್ಯಾಕ್‌ಲೀ ಕೂಗಿದ; "ನಾನು, ನಿನ್ನ ಸ್ನೇಹಿತ ಮೈಕ್".

"ಹೇ, ನಿನ್ನ ಧನಿ ಇಷ್ಟು ಇಂಪು ಎಂದು ನನಗೆ ತಿಳಿಯುತ್ತಿರುವುದು ಇವತ್ತೇ ನೋಡು"—ಸಮ್ಮರ್ಸ್ ಹೇಳಿದ.

"ನೀನು ಈ ಬಿಲ ಸೇರಿ ಎಷ್ಟು ಸಮಯವಾಗಿರಬಹುದು?"

"ಸುಮಾರು ಒಂದು ಒಂದೂವರೆ ದಿನ".

"ಅಲ್ಲ; ಮೂರೂವರೆ ದಿನ".

"ಹಾಗಿದ್ದರೆ, ಇದು ದೊಡ್ಡ ಶನಿವಾರ; ತುಂಬ ದೊಡ್ಡದಾದ ಶನಿವಾರ".

ಸಮ್ಮರ್ಸ್ ಬದುಕಿ ಉಳಿದಿರುವ ಸುದ್ದಿ ತಿಳಿದಾಗ ಎಲ್ಲರಿಗೂ ಸಂತೋಷ. ಎಲ್ಲರಿಗೂ ಆಶ್ಚರ್ಯ. ದೇವರ ದಯೆ ಪಾಟಳ ಕಣ್ಣುಗಳು ತುಂಬಿ ಬಂದವು. ಟಾಮಿ ಸಂತೋಷದಿಂದ ಕುಣಿದಾಡಿದ. "ಅಪ್ಪ ನಮ್ಮನ್ನು ಬಿಟ್ಟು ಹೋಗುವುದಿಲ್ಲವೆಂದು ನನಗೆ ಗೊತ್ತಿತ್ತು".

ಆದರೆ ಸಮ್ಮರ್ಸನನ್ನು ಬಿಲದಿಂದ ಮುಕ್ತಗೊಳಿಸುವ ಕೆಲಸ ಬಹಳ ನಿಧಾನವಾಗಿ ಸಾಗಿತು. ಕೊನೆಗೆ ಏಳೂವರೆ ಗಂಟೆಯ ಸುಮಾರಿಗೆ ಹೋಟೆಲ್ ಕಾನರ್ ಕಟ್ಟಡ ಕುಸಿದ ಎಂಬತ್ತೆರಡೂವರೆ ಗಂಟೆಗಳ ದೀರ್ಘಕಾಲದ ತರುವಾಯ ಆಲ್‌ಸಮ್ಮರ್ಸ್ ತನ್ನ ಹೆಂಡತಿ ಮಕ್ಕಳೊಡನೆ ಸಹ ಕೆಲಸಗಾರರೊಡನೆ ಬೆರೆತ. ಅವನ ಗೆಳೆಯರು ಕೈ ಚಪ್ಪಾಳೆ ತಟ್ಟಿದರು: ಎಲ್ಲೆಡೆ ಸಂತೋಷ, ಹರ್ಷೋದ್ಗಾರಗಳು.

ಪೋಲಿಸ್ ಕಾರು ಸಮ್ಮರ್ಸನನ್ನು ಆಸ್ಪತ್ರೆಗೆ ಕರೆದೊಯ್ದಾಗ, ಅವನನ್ನು ಪರೀಕ್ಷಿಸಿದ ಡಾಕ್ಟರರು ಅವನ ಆರೋಗ್ಯ ಚೆನ್ನಾಗಿದೆಯೆಂದು ತಿಳಿಸಿದರು. ಆದರೆ ಮೂಳೆಗೆ ಮೂರು ಕಡೆ ಮಾತ್ರ ಪೆಟ್ಟಾಗಿತ್ತು.


ಮತ್ತೆರಡು ದಿನಗಳ ತರುವಾಯ ಓಕ್ಸ್ ಮತ್ತು ಕೋ ಅವರ ಶವಗಳನ್ನು ಹೊರತೆಗೆಯಲಾಯಿತು. ದುರಂತ ಕೊನೆಗೂ ಇಬ್ಬರನ್ನು ಬಲಿ ತೆಗೆದುಕೊಂಡಿತ್ತು.

ಇದೇನೂ ಅನಿರೀಕ್ಷಿತವಲ್ಲವಾದರೂ ಓಕ್ಸ್ ಮತ್ತು ಕೋ ಅವರ ವಿಚಾರ ತಿಳಿದಾಗ ಸಮ್ಮರ್ಸನ ಎದೆ ನಡುಗಿತು.

ನಾಲ್ಕು ದಿನಗಳಲ್ಲಿಯೇ ಸಮ್ಮರ್ಸ್ ಪೂರ್ತಿ ಚೇತರಿಸಿಕೊಂಡ. ಆ ಎಂಬತ್ತೆರ

ಮೂವರೆ ಗಂಟೆಗಳ ಕಾಲದ ನೆನಪನ್ನು ಮಾಡಿಕೊಳ್ಳುತ್ತ ಅವನು ಈಗಲೂ ಹೀಗೆನ್ನುತ್ತಾನೆ: "ಕೌಟುಂಬಿಕ ಬಂಧನದ ನಿಜವಾದ ಮಹತ್ವ ನಮಗೆ ತಿಳಿಯುವುದು ನಾವು ನಮ್ಮ ಕುಟುಂಬದ ಸದಸ್ಯರಿಂದ ದೂರವಾದಾಗ. ನಾವು ಸಾವಿಗೆ ಸಮೀಪವಾಗುತ್ತಾ ಹೋದಂತೆ, ಬದುಕಿಗೂ ಮತ್ತು ನಾವು ಪ್ರೀತಿಸುವ ಜನರಿಗೂ ಸಮೀಪವಾಗುತ್ತಾ ಹೋಗುತ್ತೇವೆ.

ಹಂಸ ಐತಾಳ



ಕೇವಲ ರಾಜಕೀಯ ಅಥವಾ ಸಾಮಾಜಿಕ ಜೀವನದಿಂದಲೇ ನಾವು ಪರಿಪೂರ್ಣರಾಗಲಾರೆವು. ಧಾರ್ಮಿಕ ಜೀವನದಲ್ಲಿ ನಾವು ಆಸಕ್ತರಾದರೆ ಮಾತ್ರ ಸಾರ್ಥಕವಾಗಿ ಜೀವಿಸಬಲ್ಲೆವು.

—ವಿವೇಕಾನಂದ

ಇಡೀ ಜಗತ್ತನ್ನು ನಮ್ಮದೆಂದು ನೋಡಲು ಕಲಿಯಬೇಕು. ಇಲ್ಲಿ ಪರಕೀಯರು ಯಾರಿದ್ದಾರೆ? ಜಗತ್ತೆಂಬುದ ಮನೆಯಲ್ಲಿರುವವರೆಲ್ಲರೂ ನಮ್ಮ ಕಡೆಯವರೇ ಅಲ್ಲವೆ?

—ಶಾರದಾಮಾತೆ

ನ್ಯಾಯವಾದ ಉದ್ದೇಶಕ್ಕಾಗಿ ಅವಿರತವಾಗಿ ಶ್ರಮಿಸುವುದೇ ನಿಜವಾದ ಸ್ಥೈರ್ಯ. ಹುಚ್ಚು ಸಾಹಸ ಕೃತ್ಯಗಳಲ್ಲಿ ಸ್ಥೈರ್ಯದ ಸಾಧನೆಗಳಿಲ್ಲ.

—ಪ್ಲುಟಾರ್ಕ

ಪರರ ದೋಷಗಳನ್ನು ಎಣಿಸಬೇಡಿ. ನೀವು ದೋಷಮುಕ್ತರಾಗಿರಿ. ಇತರರು ದೋಷ ಮಾಡಿದರೂ ಪ್ರೀತಿಸಿರಿ. ಈ ತ್ರಿಸೂತ್ರದಿಂದಲೇ ನಿಮಗೆ ಮನಶಾಂತಿ ಸಾಧ್ಯ.

—ಶಾರದಾಮಾತೆ

ಪುಸ್ತಕ ವಿಮರ್ಶೆ

ಆಹಾರ ಪೋಷಣೆ : ಜಿ. ಸರಸ್ವತಿ, ಕನ್ನಡ ಅಧ್ಯಯನಸಂಸ್ಥೆ ಪ್ರಕಟಣೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು-೫೭೦೦೦೬, ಪ್ರಥಮ ಮುದ್ರಣ ೧೯೮೦, ಪುಟ x+೨೨೦, ಬೆಲೆ : ರೂ. ೧೦-೦೦.

'ಆಹಾರ ಪೋಷಣೆ' ಕನ್ನಡ ಅಧ್ಯಯನ ಸಂಸ್ಥೆಯ ಬಹುಮಾನ ಯೋಜನೆಯ ಅಂಗವಾಗಿ ೧೯೭೫-೭೬ರಲ್ಲಿ ಪ್ರಥಮ ಬಹುಮಾನವನ್ನು ಪಡೆದ ಕೃತಿ. ಗ್ರಾಮ ಸೇವಕರು, ಗೃಹಿಣಿಯರು, ಸಮಾಜ ಸೇವಕರು ದಾದಿಯರಿಗೆ ಮಾತ್ರವಲ್ಲದೆ ಗೃಹವಿಜ್ಞಾನ, ಕೃಷಿವಿಜ್ಞಾನ, ವೈದ್ಯವಿಜ್ಞಾನ ಮತ್ತು ಆಹಾರ ತಾಂತ್ರಿಕ ವಿಜ್ಞಾನವನ್ನು ಅಧ್ಯಯನ ಮಾಡುವವರಿಗೆ ಉಪಯುಕ್ತವಾಗುವಂತಹ ಗ್ರಂಥ ಇದು.

ಪ್ರಕೃತ ಗ್ರಂಥದಲ್ಲಿ ೧) ಪ್ರಸ್ತಾವನೆ ೨) ಆಹಾರದ ಆವಶ್ಯಕತೆ ೩) ಆಹಾರ ದೇಹದಲ್ಲಿ ಜೀರ್ಣವಾಗುವ ರೀತಿ ೪) ಆಹಾರ ಪೌಷ್ಟಿಕಾಂಶಗಳು ೫) ಪೌಷ್ಟಿಕಾಂಶಗಳ ಪರಸ್ಪರ ಸಂಬಂಧಗಳು ೬) ವಿಶೇಷ ಸ್ಥಿತಿಯಲ್ಲಿರುವವರ ಆಹಾರ ಪೋಷಣೆ ೭) ಭೋಜನದ ಯೋಜನೆ ೮) ನಮ್ಮ ವಿವಿಧ ಆಹಾರಗಳು ೯) ಭಾರತೀಯರ ಆಹಾರ ಪೋಷಣೆಯ ಸ್ಥಿತಿಗತಿ—ಎಂಬ ಅಧ್ಯಾಯಗಳಿವೆ. ಕೃತಿಯ ಪ್ರಸ್ತಾವನೆಯಲ್ಲಿ ನಮ್ಮ ದೇಶದ ಬಡಜನರಿಗೆ ಒಂದು ಹೊತ್ತು ಊಟ ಸಿಗುವುದೇ ಕಷ್ಟ. ಈ ಸ್ಥಿತಿಯಲ್ಲಿ ಜನರಿಗೆ ಪೌಷ್ಟಿಕ ಆಹಾರವನ್ನು ಸೇವಿಸಿ ಎಂದು ಉಪದೇಶಿಸುವುದು ಮೂರ್ಖತನವೆಂದು ಆಕ್ಷೇಪಿಸಬಹುದು! ಈ ಮಾತಿನಲ್ಲಿ ಸತ್ಯವಿದ್ದರೂ ಪೌಷ್ಟಿಕಾಂಶವೆಂದರೇನು? ಆಹಾರಕ್ಕೂ ಆರೋಗ್ಯಕ್ಕೂ ಇರುವ ಸಂಬಂಧವೇನು? ಯಾವ ಯಾವ ಆಹಾರಗಳು ನಮಗೆ ಒಳ್ಳೆಯದು? ಎಷ್ಟು ಪ್ರಮಾಣದಲ್ಲಿ ಸೇವಿಸಬೇಕು?—ಎಂದು ತಿಳಿಯುವುದರಲ್ಲಿ ಭಾರತೀಯರು ಬಡವರಾಗಬಾರದು. ವಿಷಯಜ್ಞಾನ ಸಮಯದಲ್ಲಿ ಸಹಾಯ ಮಾಡುತ್ತದೆ.... ಆಹಾರ ಪೌಷ್ಟಿಕಾಂಶ ಮತ್ತು ಪೋಷಣೆಯ ಜ್ಞಾನ ಎಲ್ಲರನ್ನು ವಿಚಾರಪರರನ್ನಾಗಿ ಮಾಡುತ್ತದೆ. ವೈಜ್ಞಾನಿಕ ಜ್ಞಾನದ ಅನುಷ್ಠಾನದಿಂದ ಭಾರತೀಯರ ಆರೋಗ್ಯ ಸ್ಥಿತಿ ಉತ್ತಮವಾಗುತ್ತದೆ—ಎಂಬುದಾಗಿ ಲೇಖಕಿ ಹೇಳಿಕೊಂಡಿದ್ದಾರೆ. ಎರಡನೆಯ ಅಧ್ಯಾಯದಲ್ಲಿ, ದೇಹಕ್ಕೆ ಆಹಾರದ ಅವಶ್ಯಕತೆಯನ್ನು ಕುರಿತು ಚರ್ಚಿಸಿದ್ದಾರೆ. ಸಂಪೂರ್ಣ ಆರೋಗ್ಯಕ್ಕೆ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ನೆಮ್ಮದಿಯನ್ನು ನೀಡುವ ಆಹಾರ ಅತ್ಯಾವಶ್ಯಕವೆಂಬ

ಅಂಶವನ್ನು ಸ್ಪಷ್ಟಪಡಿಸಲಾಗಿದೆ. ಆಹಾರ ದೇಹದಲ್ಲಿ ಜೀರ್ಣವಾಗುವ ರೀತಿ, ಜೀರ್ಣಕ್ರಿಯೆಯ ಮೇಲೆ ಪ್ರಭಾವ ಬೀರುವ ಅಂಶಗಳಾದ ಮಾನಸಿಕ ಸ್ಥಿತಿಗತಿ, ಆಹಾರದ ಗುಣಗಳು ಮತ್ತು ದೇಹದ ಸ್ಥಿತಿಗತಿ ಕುರಿತು ಸಂಕ್ಷಿಪ್ತವಾದ ವಿವರಗಳಿವೆ. ಮಾನಸಿಕ ಸಂತೋಷ, ಕಣ್ಣಿಗೆ ಇಂಪಾದ, ಇಷ್ಟವಾದ ಆಹಾರ ಸೇವಿಸಿದಾಗ ಜೀರ್ಣಕ್ರಿಯೆ ಉತ್ತಮವಾಗುವುದು. ಆಹಾರದ ಗುಣಗಳು ದ್ರವರೂಪದ ಆಹಾರಗಳು ಬೇಗನೆ ಜೀರ್ಣವಾಗುವುವು, ಆರೋಗ್ಯವಾಗಿರುವವರ ಜೀರ್ಣಶಕ್ತಿ ಉತ್ತಮವಾಗಿರುತ್ತದೆ ಎಂಬ ಅಂಶಗಳನ್ನು ಸೂಚಿಸಲಾಗಿದೆ.

ಶಕ್ತಿಯನ್ನು ನೀಡುವ ಪೌಷ್ಟಿಕಾಂಶಗಳಾದ ಶರ್ಕರಪಿಷ್ಟ, ಮೇದಸ್ಸು, ಪ್ರೋಟೀನು, ಬೆಳವಣಿಗೆಗೆ ಬೇಕಾಗುವ ಪೌಷ್ಟಿಕಾಂಶಗಳಾದ ಪ್ರೋಟೀನು, ಕ್ಯಾಲ್ಸಿಯಂ, ಮ್ಯಾಂಗನೀಸ್, ರಂಜಕ, ಗಂಧಕ, ಪೊಟ್ಯಾಷಿಯಂ, ಸೋಡಿಯಂ ಮತ್ತು ಕ್ಲೋರೈಡ್, ಮೆಗ್ನೀಸಿಯಂ, ಕಬ್ಬಿಣ, ತಾಮ್ರ ಸತು ಮುಂತಾದ ಖನಿಜಗಳು ಹಾಗೂ ರಕ್ಷಣೆಯನ್ನು ನೀಡುವ ಪೌಷ್ಟಿಕಾಂಶಗಳಾದ ಪ್ರೋಟೀನು, ಜೀವಸತ್ವಗಳು—ಎಂಬುದಾಗಿ ಪೌಷ್ಟಿಕಾಂಶಗಳನ್ನು ವಿಂಗಡಿಸಲಾಗಿದೆ. ಪೌಷ್ಟಿಕಾಂಶಗಳ ಕೊರತೆಯುಂಟಾದಾಗ ಮಧುಮೇಹ, ಹೃದಯರೋಗ, ಕ್ವಾಶಿಯೋರ್ಕರ್ (ಪಿಳ್ಳಟವಾದ ಮಗು) ಎಂಬ ಸ್ಥಿತಿ ಉಂಟಾಗುವುದು, ಅಂಗಾಂಗಗಳ ಕ್ಷೀಣತೆ, ರಕ್ತಹೀನತೆ, ಮರಾಸ್ಮಸ್ ಸ್ಥಿತಿ (ಚಲನವಲನ ಕಷ್ಟಸಾಧ್ಯವಾಗುವುದು), ವಾಂತಿ, ಭೇದಿ, ಪಿತ್ತಕೋಶದ ರೋಗ, ಗಳಗಂಡರೋಗ (ಗಾಯಿಟರ್), ಕುಬ್ಜತೆ ಮುಂತಾದ ರೋಗಗಳು ಕಾಣಿಸಿಕೊಳ್ಳುವುದು ಎಂಬ ವಿಚಾರಗಳು ಸ್ಪಷ್ಟವಾಗಿವೆ.

ಜೀವಸತ್ವಗಳ ಇರುವಿಕೆಯ ಬಗೆಗೆ ಕಂಡುಹಿಡಿದನಂತರ ಆಹಾರ ಶೋಧನೆಯ ವಿಜ್ಞಾನದ ಅಧ್ಯಯನದಲ್ಲಿ ಒಂದು ಹೊಸ ತಿರುವು ಮೂಡಿತು. ನಮ್ಮ ದೇಹಕ್ಕೆ ಬೇಕಾದ ಜೀವಸತ್ವಗಳ ಪ್ರಮಾಣ ಅಣು ಮಾತ್ರವಾದರೂ ಅವುಗಳ ಕಾರ್ಯರಂಗ ಹರಹತ್ತಿಯಲ್ಲೂ ವಿಶಾಲ! ಜೀವಸತ್ವಗಳನ್ನು ಕಂಡುಹಿಡಿದ ಬಗೆಯನ್ನು ತಿಳಿಸಿಕೊಟ್ಟಿರುವುದಲ್ಲದೆ, ಯಾವಯಾವ ಜೀವಸತ್ವಗಳ ಕೊರತೆಯುಂಟಾದರೆ ನಿಶಾಂಧತೆ, ಹಕ್ಕಿರೋಗ (ರಿಕೆಟ್ಸ್), ಆಸ್ಟಿಯೋ ಮಲೇಷಿಯಾ, ಧನುರ್ವಾಯು, ಬೆರಿಬೆರಿ, ಚರ್ಮರೋಗ, ಗ್ಲಾಸೈಟಿಸ್ ಪೆಲಾಗ್ರ, ಮೆಗಲೋಬ್ಲಾಸ್ಟಿಕ್ ರೂಪದ ರಕ್ತಹೀನತೆ, ಪರ್ನಿಷಿಯಸ್ ರೂಪದ ರಕ್ತಹೀನತೆ, ಸ್ಕರ್ವಿರೋಗ (ಚರ್ಮದ ಒಳಭಾಗ ಮತ್ತು ಹಲ್ಲಿನ ಒಸಡುಗಳಿಂದ ರಕ್ತಸ್ರಾವ, ಸಂಧಿಗಳ ಸ್ನಾಯುಗಳಲ್ಲಿ ನೋವು, ಮಕ್ಕಳ ಬೆಳವಣಿಗೆ ಕುಂಠಿತ

ವಾಗುವಿಕೆ)—ಮುಂತಾದ ರೋಗಗಳು ಬರುತ್ತವೆ ಎನ್ನುವುದನ್ನು ಸವಿಸ್ತಾರವಾಗಿ ನಿರೂಪಿಸಲಾಗಿದೆಯಲ್ಲದೆ, ಬೇರೆಬೇರೆ ಜೀವಸತ್ತ್ವಗಳು (ಎ,ಡಿ,ಇ,ಕೆ,ಬಿ, ಬಿ$_{12}$,ಸಿ) ಯಾವಯಾವ ಆಹಾರಗಳಲ್ಲಿ ಲಭಿಸುತ್ತವೆ ಎಂಬುದನ್ನು ತಿಳಿಸಿಕೊಟ್ಟಿರುವ ರೀತಿ ಸುಲಭ ಗ್ರಾಹ್ಯವಾಗುವಂಥದು. ನೀರು ಮಾನವನ ಮುಖ್ಯ ಅವಶ್ಯಕತೆಗಳಲ್ಲೊಂದು ಅಂಶ. ದೇಹದ ಸಂಯೋಜನೆಯಲ್ಲಿ ನೀರು ಗಮನಾರ್ಹವಾದುದು. ನಮ್ಮ ದೇಹದ ಒಟ್ಟು ತೂಕದಲ್ಲಿ ೬೦–೭೦ ಭಾಗ ನೀರಿನ ಅಂಶವಿದೆ. ನೀರಿನ ಸಮತೋಲನದ ಮೇಲೆ ಪ್ರಭಾವ ಬೀರುವ ಅಂಶಗಳು—ಬಾಯಾರಿಕೆ, ಹಾರ್ಮೋನು (ಆ್ಯಂಟಿ ಡೈಯುರೆಟಿಕ್) ಮತ್ತು ಲವಣ (ಸೋಡಿಯಂ ಕ್ಲೋರೈಡ್). ನೀರು ಮತ್ತು ಉಪ್ಪಿನ ಕೊರತೆಯ ಪರಿಣಾಮಗಳು—ಅತಿಯಾದ ವಾಂತಿ ಹಾಗೂ ಭೇದಿಯುಂಟಾಗುವುದು, "ಆಹಾರ ವಿಲ್ಲದೆ ಕೆಲವು ದಿನ ಬದುಕಬಹುದು ಆದರೆ ನೀರಿಲ್ಲದೆ ಹೆಚ್ಚು ದಿನ ಬದುಕುವುದು ಸಾಧ್ಯವಿಲ್ಲ"—ಎಂಬುದಾಗಿ ನೀರಿನ ಅವಶ್ಯಕತೆಯನ್ನು ಕುರಿತು ಹೇಳಲಾಗಿದೆ. 'ಆಹಾರ ಪೌಷ್ಟಿಕಾಂಶಗಳು' ಎನ್ನುವ ಅಧ್ಯಾಯದಲ್ಲಿ, ಮೇಲೆ ಹೇಳಿರುವ ವಿಚಾರಗಳನ್ನು ಸಾಕಷ್ಟು ವಿಸ್ತಾರವಾಗಿ ಲೇಖಕರು ತಿಳಿಸಿಕೊಟ್ಟಿದ್ದಾರೆ. ಈ ಅಧ್ಯಾಯ ಇಡೀ ಕೃತಿಯಲ್ಲಿ ಪ್ರಮುಖವಾದುದು ಅಲ್ಲದೆ ಓದುಗರು ಹೆಚ್ಚು ಮನನ ಮಾಡಬೇಕಾದುದು.

ಪೌಷ್ಟಿಕಾಂಶಗಳ ಪರಸ್ಪರ ಸಂಬಂಧಗಳು ಎಂಥವು? ವಿಶೇಷ ಸ್ಥಿತಿಯಲ್ಲಿರುವವರು (ಗರ್ಭಿಣಿಯರು, ಶಿಶುವಿಗೆ ಹಾಲೂಡುವ ತಾಯಂದಿರು, ಶಿಶುಗಳು) ತೆಗೆದುಕೊಳ್ಳಬೇಕಾದ ಪೌಷ್ಟಿಕಾಂಶಗಳ ಪ್ರಮಾಣವನ್ನು ಕುರಿತು, ಸಂಬಂಧಿಸಿದ ಅಧ್ಯಾಯಗಳಲ್ಲಿ ಸಂಕ್ಷೇಪವಾಗಿ ವಿವರಿಸಲಾಗಿದೆ. ಆಹಾರಗಳ ಆಯ್ಕೆ, ನಿತ್ಯದ ಊಟೋಪಚಾರ, ಆಹಾರಗಳ ತಯಾರಿಕೆ, ಆಹಾರದ ಸೇವನಾಕ್ರಮ—ಈ ವಿಚಾರಗಳು ಭೋಜನದ ಯೋಜನೆಗೆ ಮತ್ತು ಅದರ ಅನುಷ್ಠಾನಕ್ಕೆ ಸಹಾಯಕಾರಿಯಾದವುಗಳು. ಹಾಲು, ಬೇಳೆ, ಮಾಂಸಗಳ ಗುಂಪು, ಹಣ್ಣು ಮತ್ತು ಹಸಿರು ಸೊಪ್ಪುಗಳ ಗುಂಪು, ತರಕಾರಿಗಳ ಗುಂಪು, ಧಾನ್ಯ ಮತ್ತು ಪಿಷ್ಟತರಕಾರಿಗಳ ಗುಂಪು ಮತ್ತು ಎಣ್ಣೆ, ಬೆಣ್ಣೆ, ಸಕ್ಕರೆ, ಬೆಲ್ಲದ ಗುಂಪು—ಈ ಐದು ಗುಂಪುಗಳನ್ನು 'ಆಹಾರದ ಪಂಚ ಸಮೂಹ'ಗಳೆಂದು ಕರೆದು, ಪ್ರತಿ ಗುಂಪಿಗೂ ಸೇರುವ ವಿವಿಧ ಆಹಾರಗಳನ್ನು ಪಟ್ಟಿಮಾಡಿರುವುದು ಒಂದು ವಿಶೇಷ. ಪ್ರಾತಃಕಾಲದ ಉಪಾಹಾರಕ್ಕೆ ಯಾವುದಾದರೂ ಧಾನ್ಯ, ಬೇಳೆಕಾಳುಗಳ ಮಿಶ್ರಣದಿಂದ ತಯಾರಿಸಿದ ಆಹಾರ, ಒಂದು ಪಾನೀಯ, ಕಾಫಿ ಅಥವಾ ಹಾಲು, ಮಧ್ಯಾಹ್ನದ ಊಟಕ್ಕೆ ಅನ್ನ, ಚಪಾತಿ, ಬೇಳೆಯಿಂದ ಕೂಡಿದ

ತರಕಾರಿ, ಸೊಪ್ಪುಗಳು, ಮೊಸರು ಸಂಜೆಯ ತಿಂಡಿಗೆ ಕಾಳುಗಳ ಉಸಲಿ, ಬಿಸ್ಕತ್ತು ಕರಿದತಿಂಡಿಗಳು ಮತ್ತು ರಾತ್ರಿಯ ಊಟಕ್ಕೆ ಅಕ್ಕಿ, ಗೋದಿಯ ತಯಾರಿಕೆ, ತರಕಾರಿ ಸೊಪ್ಪುಗಳ ಹುಳಿ ಅಥವಾ ಪಚಡಿ, ಪಲ್ಯ ಅಥವಾ ಚಟ್ನಿ, ಹಾಲು ಅಥವಾ ಅದರ ಪದಾರ್ಥಗಳನ್ನು ಸೇವಿಸಬೇಕೆಂಬ ವಿಚಾರ ಗ್ರಾಮೀಣ ಜನರನ್ನು ಸೆಳೆಯುವಂಥದು! ಆಹಾರಗಳ ತಯಾರಿಕಾ ಕ್ರಮಗಳು (ನೀರಿನಲ್ಲಿ ಕುದಿಸುವುದು, ಆವಿಯಲ್ಲಿ ಬೇಯಿಸುವುದು, ಎಣ್ಣೆಯಲ್ಲಿ ಕರಿಯುವುದು, ಒತ್ತಡ ದಿಂದ ಬೇಯಿಸುವುದು) ಹೇಗೆ ಮುಖ್ಯವೋ ಹಾಗೆಯೇ ಆಹಾರವನ್ನು ಸೇವಿಸು ವುದೂ ಒಂದು ಕ್ರಮ. ಇದಕ್ಕೆ ಶುಚಿಯಾದ ಲೋಟ, ತಟ್ಟೆಗಳನ್ನು ಉಪಯೋಗಿಸಿ, ಮಾನಸಿಕವಾಗಿ ಸುಖ-ಸಂತೋಷ, ಪ್ರೀತಿ-ವಿಶ್ವಾಸಗಳ ಭಾವನೆ ಯಲ್ಲಿ ಸೇವಿಸಿದ 'ಸರಿದೂಗಿಸಿದ ಆಹಾರ' ದೇಹಕ್ಕೆ ಉತ್ತಮ ಫಲಿತಾಂಶವನ್ನು ಕೊಡುತ್ತದೆ. ಬಲವಂತವಾಗಿ ಬಡಿಸಿ ಆಹಾರವನ್ನು ಪೋಲುಮಾಡಬಾರದು. ತಯಾರಿಸಿದ ಆಹಾರವನ್ನು ಸಾಧ್ಯವಾದಷ್ಟು ತಯಾರಿಸಿದ ಸ್ವಲ್ಪ ಹೊತ್ತಿನೊಳಗೆ ಸೇವಿಸುವುದು ಉತ್ತಮ—ಎನ್ನುವ ಎಚ್ಚರಿಕೆಯ ಮಾತುಗಳು ಎಲ್ಲ ವರ್ಗದ, ಎಲ್ಲ ಬಗೆಯ ಜನರ ಗಮನವನ್ನು ಸೆಳೆಯುವಂಥವು.

ನಾವು ತಿನ್ನುವ ಆಹಾರವಸ್ತುಗಳನ್ನು ಅವುಗಳ ಕಾರ್ಯಗಳಿಗನುಗುಣವಾಗಿ: ೧) ಶಕ್ತಿಉತ್ಪಾದಕ. ೨) ದೇಹದ ಬೆಳವಣಿಗೆ. ೩) ದೇಹ ಸಂರಕ್ಷಣೆ ಮತ್ತು ನಿಯಂತ್ರಣೆಗೆ ಬೇಕಾದ ಆಹಾರಗಳೆಂದೂ ಆಹಾರಗಳ ಉಗಮಸ್ಥಾನಗಳಿಗನು ಗುಣವಾಗಿ ೧) ಸಸ್ಯ ಜನ್ಯ ಮತ್ತು ೨) ಪ್ರಾಣಿ ಜನ್ಯ ಆಹಾರಗಳೆಂದೂ ವರ್ಗೀ ಕರಣ ಮಾಡಲಾಗಿದೆ. ಮಕ್ಕಳ ಆಹಾರಗಳಾದ ವೀನಿಂಗ್ ಫುಡ್, ಮಿಲ್-ಟೋನ್, ನ್ಯೂಟ್ರೋ ಬಿಸ್ಕತ್, ಮ್ಯಾಕರೋನಿ ಇತ್ಯಾದಿ ಪರಿಚಯಿಸಲಾಗಿದೆ.

ಕಡೆಯದಾಗಿ, ಭಾರತೀಯರ ಆಹಾರ ಪೋಷಣೆಯ ಸ್ಥಿತಿಗತಿಗಳನು ಕುರಿತಾದ ಒಂದು ಸಂಕ್ಷಿಪ್ತ ವಿವೇಚನೆಯನ್ನು ಕೊನೆಯ ಅಧ್ಯಾಯದಲ್ಲಿ ನಡೆಸಿರುವುದು ಉಚಿತವಾಗಿದೆ. ಭಾರತೀಯರ ನ್ಯೂನ ಪೋಷಣೆಗೆ ಆರ್ಥಿಕ ಪರಿಸ್ಥಿತಿ, ಆಹಾರ ಪರಿಸ್ಥಿತಿ ಮತ್ತು ಜನಸಂಖ್ಯೆ, ಸಾಮಾಜಿಕ ಮತ್ತು ಸಾಂಪ್ರದಾಯಿಕ ಪದ್ಧತಿಗಳು ಹಾಗೂ ವಿಷಯಗಳು, ನಗರೀಕರಣ, ವಿದ್ಯಾಭ್ಯಾಸದ ಮಟ್ಟ ಮತ್ತು ಸಾಂಕ್ರಾಮಿಕ ರೋಗಗಳು—ಪ್ರಮುಖ ಕಾರಣ ಗಳಾಗಿವೆ. ಆಹಾರ ನ್ಯೂನ ಪೋಷಣೆಯನ್ನು ಹೊಡೆದೋಡಿಸಲು ಸರ್ಕಾರ, ಜನತೆ ಮತ್ತು ವ್ಯಕ್ತಿಯ ಸಹಕಾರ, ಕಾರ್ಯಚತುರತೆ ಆವಶ್ಯಕವೆಂದು ತಿಳಿಯ ಪಡಿಸಲಾಗಿದೆ.

ಆಹಾರ ಪೋಷಣೆಯಂಥ ವೈಜ್ಞಾನಿಕ ವಿಷಯಗಳನ್ನು ಕುರಿತ ಪುಸ್ತಕಗಳು ಕನ್ನಡದಲ್ಲಿ ಕಡಿಮೆ. ಪ್ರಕೃತ ಕೃತಿಯಲ್ಲಿ, ಓದುಗರಿಗೆ ಆಸಕ್ತಿ ಮೂಡಿಸುವ ಶೈಲಿಯಲ್ಲಿ ಆಹಾರ ಪೋಷಣೆ ವಿಜ್ಞಾನದ ಮೂಲಪರಿಚಯವನ್ನು ಮಾಡಿಕೊಡುವುದರಲ್ಲಿ ಲೇಖಕರು ಸಫಲರಾಗಿದ್ದಾರೆ. ಅಲ್ಲಲ್ಲಿ ಚಿತ್ರಗಳ ಮೂಲಕ ಕ್ಲಿಷ್ಟ ವಿಷಯಗಳನ್ನು ವಿಶದಪಡಿಸಿರುವ ಕ್ರಮ, ವಿಷಯಗ್ರಹಣಕ್ಕೆ ತುಂಬ ಸಹಕಾರಿಯಾಗಿದೆ. ಆಹಾರ ಪೋಷಣೆಯ ವಿಜ್ಞಾನ ವಿಷಯದಲ್ಲಿ ಆಸಕ್ತರಾದವರಿಗೆ ಮತ್ತು ಗ್ರಾಮೀಣ ಜನರಿಗೆ ಈ ಪುಸ್ತಕ ಹೆಚ್ಚು ಉಪಯುಕ್ತವಾದುದೆಂದು ಧಾರಾಳವಾಗಿ ಹೇಳಬಹುದು.

ಆರ್. ರಾಮಕೃಷ್ಣ

ಪಾಪಕಾರ್ಯಗಳಿಗೆಲ್ಲ ಅತ್ಯಾಸೆಯೇ ಕಾರಣ. ರೋಗಕ್ಕೆ ನಾಲಿಗೆಯ ಚಾಪಲ್ಯವೇ ಕಾರಣ. ದುಃಖಕ್ಕೆ ಆಸೆಯೇ ಕಾರಣ. ಆದ್ದರಿಂದ ಸುಖಿಯಾಗಬೇಕಾದವನು ಈ ಮೂರನ್ನೂ ತ್ಯಜಿಸಬೇಕು.

—ಸುಭಾಷಿತ

ಸವಿಜೇನಿನ ಸಂಗ್ರಹಕ್ಕಾಗಿ ಜೇನುಹುಳುವು ದಿನವಿಡೀ ದುಡಿಯುತ್ತಿರುತ್ತದೆ. ಅದೇ ರೀತಿಯ ಜೀವನ ಸಫಲತೆಗಾಗಿ ಮಾನವನು ಹೋರಾಡಬೇಕಾಗುವುದು.

—ಟೆನಿಸನ್

ಸರಿಯಾದ ತಿಳುವಳಿಕೆ ಮತ್ತು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಿಕೆ ಇವೆರಡೂ ಇಲ್ಲದಿದ್ದಲ್ಲಿ ಜೀವನದಲ್ಲಿ ಶಾಂತಿ ಅಥವಾ ಪ್ರಗತಿ ಸಾಧ್ಯವಿಲ್ಲ.

—ಕೀಟ್ಸ್

ದೈವಾಯತ್ತವಾಗಿ ಸುಖ ಸಂತೋಷಗಳು ಬರುತ್ತವೆ. ಸುಖವನ್ನು ಅರಸುತ್ತ ಹೋಗುವವರು ಮೂರ್ಖರು. ಆದ್ದರಿಂದ ಅವರು ತಮ್ಮ ಜೀವನವನ್ನೇ ಸವೆಸಿಕೊಳ್ಳುವರು.

—ವಿಡ್ಲೊ

Statement of ownership and other particulars about the monthly periodical "**PUSTAKA PRAPANCHA**" as required to be published under rule 8 of the Registration of Newspapers (Central) Rules 1956.

FORM IV

Place of Publication	—	Karnataka State Adult Education Council. 1253, K. M. Puram, Mysore-4
Periodicity	—	Monthly
Printer's Name	—	Sri H. G. Ramaswamy Iyengar
Nationality & Address	—	Indian Karnataka State Adult Education Council Printing Press, 1253, K. M. Puram, Mysore-4
Publisher's Name & Address	—	Chief Executive Officer Karnataka State Adult Education Council. 1253, K. M. Puram, Mysore-4
Nationality	—	Indian
Editor's Name	—	Sri R. Boraiah
Nationality	—	Indian
Address	—	Karnataka State Adult Education Council 1253, K. M. Puram, Mysore-4

I, the chief Executive Officer hereby declare that the particulars given above are true to the best of my knowledge and belief

D. P. Govinda Raju
Chief Executive Officer,
KARNATAKA STATE ADULT EDUCATION COUNCIL,
MYSORE

1 March 1982

Reg. No. KRNN. 29 / WPP 6

LICENSE NO. 21
LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು.....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyeng: aanager at Karnataka State Adult Education Council Pre Mnd Published by Karnataka State Adult Education Counc Mysore city (India)